ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, the 29th July 1978/Shravana 7, 1900 S.E

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair]

BUDGET ESTIMATES FOR 1978-79

Demands for Grants

Demand Nos. 2, 6, 8, 13 to 18, 23, 24, 31, 32, 36 to 40, 45, 46 51 and 61

(*Debate continued*)

† SRI PRABHAKAR TELKAR (Chitapur). – Mr. Speaker, Sir, while supporting the Demands tabled by the Hon'ble Chief Minister and the Hon'ble Finance Minister, I wish to say a few words. I am coming from an area where irrigation is quite less and we always face droughts in Gulbarga and other places, and in order to develop this area of Karnataka irrigation is the most important factor, and I think our Hon'ble Chief Minister Sri D. Devaraj Urs is the first Chief Minister who has taken much interest in developing irrigation in Karnataka. The statistics itself will show how from 1972 onwards irrigation work has been developed, In this connection, if we see the Budget and the other Plan schemes for 1978-79, under Minor Irrigation Programme, no new works are taken up. Therefore, I request the Government, through you Sir, to see that the Minor Irrigation works as are taken up in other areas of Karnataka are also taken up in our area. Here, I would like to suggest a way to raise the water in the wells. In Bidar, Gulbarga and other areas, the water level in the wells is going low. A novel scheme has been taken up in Maharashtra to raise the water level, and if that is applied here, things will certainly improve. I will just read out what they have done in Maharashtra :

"The Maharashtra Government has embarked on a novel experiment, the first of its kind in the State, by which flood waters are sought to be recharged to raise water-levels in wells...

SRI A. LAKSHMISAGAR.—Sir, neither the Finance Minister nor the Chief Minister are here. I can understand the Chief Minister coming late because he may be having other work, But I can find no excuse in the absence of the Finance Minister.

MR. SPEAKER.—The Hon'ble Minister for Health is here and he is noting down the points.

SRI PRABHAKAR TELKAR.—We are having floods in our State also and that water can be utilised in a better way to raise the water-level in the wells.

"The experiment conducted by the Groundwater Survey and Development Agency, Nagpur, will cover 444 km. in the Warud, Jarud, Temburkhed and Amdapur areas of Amravati district.

There has been an increasing demand for irrigation in these parts where water is required for orange cultivation. Water levels in the wells have b en going down and the farmers have to repeatedly deepen their wells.

Fortunately, geological surveys showed that the soil was porous, enabling the water to be pushed underground. The underground streams move in to underground basins through the rocks.

Experimental pits, 30M x 15M x 4.5M have been created in two nullahs and filled kith boulders of 10 cm. size to protect the pit walls and maintain porosity and cintinuity of the flow of water. Water-level recorders have been installed in the surrounding wells for constant observation of water levels.

Preliminary studies have proved to be positive, indicating that it is possible to recharge flood waters through such pits." I submit that our Goverment should think of this novel way of raising the water wherever floods are coming and don't allow the water to go waste. This kind of experiment our grond-water survey department has to do and save water in places where we are facing severe shortage of water, for irrigation purposes.

Coming to the area from which I hail, we see that tanks works are taken in Gulbarga district which is very less. I therefore, request the Government to take up this minor irrigation works more and more by providing sufficient funds.

I also submit over this public administration. One thing I want to make it clear that during 76-77, Government officials were working with the public and for the public. But now, what we see is this. The Government officials are not co-operating to help the poorer sections of the people in rural areas. The opposition people may say that during emergency what I am telling is not correct and may object

to it. But it is a fact that during that period we have taken up more works in Karnataka and we have provided justice to the poorer sections of the rural area. Therefore, I submit that a kind of co-operation and oneness with the people are required in order to serve these people better. Therefore, I request that the Grvernment should think of this in future also.

I also submit about Police Department. In Gulbarga gambling of 'Matka' is increasing. St rn action will have to be taken by the Police. In Chitapur also such gangs are coming up, For this even the poorer section people are spending mo ey. There are somany thefts of pump sets in Gulbarga District. So far there were 15 thefts of pump sets and nothing has been recovered so far. Attention of the Police is required in this direction.

One more thing I want to submit. There is a demand of Hyder-bad Karnataka people to have an University in Gulbarga. There is a P.G. Centre there. I request the Finance Minister to provide necessary funds for this purpose. Because, of the development of P.G. Centre no funds are provided. Only 5-10 lakhs have been provided which is not sufficient at all. Therefore, I request the Government to establish one University in Gulbarga and if it is not possible at least an autonomous status may be given to the P.G. Centre as is given in Andhra Pradesh and other places. Therefore, the Finance Minister will make a note of it and 40-50 lakhs of rupees may be provided to the P.G. Centre as is done to the P. G. Centre of Sandur. I request him to do the needful. I thank the Chair and conclude.

† ಶ್ರೀಮತಿ ಎಸ್. ಪ್ರಮೀಳಾ (ಚಾಮರಾಜಪೇಟೆ)—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಈ ಸಭೆಯಲ್ಲಿ ನಡೆದ ಘಟನೆ ನೋಡಿದಾಗ ನನಗೆ ಒಂದು ಮಾತು ನೆನಪಿಗೆ ಬಂತು. ಈ ಸಭೆಯ ಗೌರವವನ್ನು ರಕ್ಷಣೆ ಮಾಡುವುದಕ್ಕೆ ನಿನ್ನೆ ಸಂಜೆ ತೋರಿಸಿದ ಉತ್ಸುಕತೆ, ಅಭಿಮಾನ ಮೊನ್ನೆ ದಿವಸ ಮಾನ್ಯ ಗಟ್ಟಿ ಚಂದ್ರಶೇಖರ್‌ರವರು ಮಾತನಾಡಿದ ಸಂದರ್ಭದಲ್ಲಿ ಏತಕ್ಕೆ ಇರಲಿಲ್ಲವೆಂದು ಕೇಳಬೇಕಾಗಿದೆ. ನಿನ್ನೆ ತೋರಿಸಿದ ಅಭಿಮಾನವನ್ನು ಮಾನ್ಯ ಸದಸ್ಯರು ಮೊನ್ನೆಯೂ ತೋರಿಸಿದ್ದರೆ ಈ ಸಭೆಯ ಗೌರವ ಇನ್ನೂ ಹೆಚ್ಚಾಗುತ್ತಿತ್ತು. ಮೊನ್ನೆ ಮಾನ್ಯ ಗಟ್ಟಿ ಚಂದ್ರಶೇಖರ್‌ರವರು ಮಾತನಾಡುತ್ತಾ, ಇಡೀ ಕರ್ನಾಟಕದ ಹೆಣ್ಣು ಮಕ್ಕಳ ಗೌರವ ಘನತೆಗೆ ಧಕ್ಕೆ ಬರುವಂಥ ಮಾತನ್ನು ಆಡಿದ್ದಾರೆ. ಆದುದರಿಂದ, ಅವರು ಉಪಯೋಗಿಸಿದ ಶಬ್ದಗಳನ್ನು ಅಧಿಕೃತ ದಾಖಲೆಯಿಂದ ತೆಗೆದು ಹಾಕಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್—ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪವಿದೆ. ಮಾನ್ಯ ಸದಸ್ಯೆಯು ನನ್ನ ಮೇಲೆ ಮಾಡುತ್ತಿರುವ ಆರೋಪವಲ್ಲವಿದು, ಇದು ನಿಮ್ಮ ಮೇಲೆ ಮಾಡುತ್ತಿರುವ ಆರೋಪ. ನನ್ನ ಭಾಷಣವನ್ನು ಮಾನ್ಯ ಸದಸ್ಯರೆಲ್ಲರೂ ಮೊನ್ನೆ ಕೇಳುತ್ತಾ ಕುಳಿತುಕೊಂಡಿದ್ದರು, ಮಾನ್ಯ ಸದಸ್ಯೆಯರೂ ಸಹ ಇಲ್ಲೇ ಇದ್ದು ಕೇಳುತ್ತಿದ್ದರು. ಆಗ ನನ್ನ ಭಾಷಣದ ಯಾವ ಶಬ್ದವನ್ನೂ ತೆಗೆದು ಹಾಕಬೇಕೆಂದು ಯಾರೂ ಹೇಳಲಿಲ್ಲ, ಮಾನ್ಯ ಸದಸ್ಯೆಯರೂ ಹೇಳಲಿಲ್ಲ, ಮತ್ತೆ ಈಗ ಏತಕ್ಕೆ ಅದರ ಪ್ರಶ್ನೆ ?

ಅಧ್ಯಕ್ಷರು—ಸಾಂಸದಿಕವಲ್ಲದ ಶಬ್ದಗಳನ್ನು ಮಾನ್ಯಸದಸ್ಯರು ಬಳಸಿದರೆ ಅದನ್ನು ಅಧಿಕೃತ ದಾಖಲೆಯಿಂದ ತೆಗೆದುಹಾಕಬೇಕೆಂದು ನಿಯಮವಿದೆ. ಆದರಂತೆ ಯಾವ ಮಾನ್ಯ ಸದಸ್ಯರು ಮಾತನಾಡಿದ್ದರೂ, ಅಧಿಕೃತ ದಾಖಲೆಯಿಂದ ತೆಗೆದು ಹಾಕಬೇಕಾಗುತ್ತದೆ. ಈಗ ತಮ್ಮ ಕ್ರಿಯಾಲೋಪವೇನೆಂಬುದನ್ನು ತಿಳಿಸಿ.

ಶ್ರೀ ಗಟ್ಟಿ ಚಂದ್ರಶೇಖರ್—ಮಾನ್ಯ ಸದಸ್ಯೆ ನನ್ನನ್ನು ಕೆಣಕಿದ್ದಾರೆ. ಅವರಿಗೆ ನಾನು ಉತ್ತರ ಕೊಡಬೇಕು. ಇಡೀ ಕರ್ನಾಟಕದ ಹೆಣ್ಣು ಮಕ್ಕಳಿಗೆ ಅವಮಾನವಾಗುವಂಥ ಶಬ್ದಗಳನ್ನು ನಾನು ನನ್ನ ಭಾಷಣದಲ್ಲಿ ಉಪಯೋಗಿಸಿರುವುದಾಗಿ ಅವರು ಹೇಳುತ್ತಿದ್ದಾರೆ. ಹೆಣ್ಣು ಮಕ್ಕಳ ಮೇಲೆ ನನಗಿರುವಷ್ಟು ಗೌರವ ಅವರಿಗಿಲ್ಲ. ನಾವು ಪುರಾತನ ಸಂಸ್ಕೃತಿಯವರು. ಕಾರ್ಯೇಷು ದಾಸಿ, ಕರಣೇಶು ಮಂತ್ರಿ ರೂಪೇಶು ಲಕ್ಷ್ಮಿ, ಕ್ಷಮಯಾ ಧರಿತ್ರಿ, ಭೋಜ್ಯೇಶು ಮಾತಾ, ಶಯನೇಶು ವೇಶ್ಯಾ, ಷಟ್ಕರ್ಮಯುಕ್ತ......

ಅಧ್ಯಕ್ಷರು—ಮಾನ್ಯ ಸದಸ್ಯರು ನೇರವಾಗಿ ತಮ್ಮ ಕ್ರಿಯಲೋಪವೇನೆಂಬುದನ್ನು ಮಾತ್ರ ತಿಳಿಸಬೇಕು.

ಶ್ರೀ ಗಟ್ಟಿ ಚಂದ್ರಶೇಖರ್—ಅಧ್ಯಕ್ಷರೆ ನಾನು ಉತ್ತರ ಅವರಿಗೆ ಕೊಡದಿದ್ದರೆ "ಏನ್ರಿ, ನೀವು ಹೀಗೆಲ್ಲಾ ಹೇಳದರಂತೆ" ಎಂದು ನನ್ನ ಹೆಂಡತಿ ನನ್ನನ್ನು ಮನೆಗೆ ಸೇರಿಸುತ್ತಾಳೆಯೋ ಇವತ್ತು ? ದಯವಿಟ್ಟು, ಮಾನ್ಯ ಸದಸ್ಯೆಯು ನನ್ನ ಬಗ್ಗೆ ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು ಮಾನ್ಯ ಸದಸ್ಯರು ಬಳಸಿದ ಶಬ್ದಗಳಲ್ಲಿಯಾವುದನ್ನು ಅಧಿಕೃತ ದಾಖಲೆಯಿಂದ ತೆಗೆದು ಹಾಕಬೇಕೆನ್ನುವುದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್—ಮಾನ್ಯ ಸದಸ್ಯೆಯು ಅವರ ಮನೆ ಮುಂದೆ "ಕುಮಾರಿ ಎಸ್. ಪ್ರಮೀಳಾ, ಬಿ.ಎ.ಎಲ್.ಎಲ್.ಎಂ.," ಎಂದು ಬೋರ್ಡ್‌ನ್ನು ಹಾಕಿಕೊಂಡಿದ್ದಾರೆ. ಆದರೆ, ತಾವು ಅವರನ್ನು "ಶ್ರೀಮತಿ ಎಸ್. ಪ್ರಮಿಳಾ" ಎಂದು ಕರೆಯುತ್ತೀರಿ. ಆದರೂ ಸುಮ್ಮನೆ ಕುಳಿತಿರುತ್ತಾರೆ. ಏತಕ್ಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ಗಟ್ಟಿ ಚಂದ್ರಶೇಖರ್ ರವರು ಸದನದಲ್ಲಿದ್ದರು ಎಂದು ಕಾಣುತ್ತದೆ. ಮಾನ್ಯ ದೇವೇಗೌಡರು ಮತ್ತು ಮಾನ್ಯ ಮುಖ್ಯ ಮಂತ್ರಿಯವರು, ಮಾನ್ಯ ಸದಸ್ಯರುಗಳು ಮಾತನಾಡುವಾಗ ಯಾವ ರೀತಿ ಮಾತನಾಡಬೇಕೆಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಗಟ್ಟಿ ಚಂದ್ರಶೇಖರ್ ಅವರು ಭಾಷಣ ಮಾಡುವ ಕಾಲದಲ್ಲಿ ಬಳಸಿದ ಕೆಲವು ಶಬ್ದಗಳನ್ನು ಅಧಿಕೃತ ದಾಖಲೆಯಿಂದ ತೆಗೆದು ಹಾಕಬೇಕೆಂದು ಈಗಾಗಲೇ ಅಧ್ಯಕ್ಷರಿಗೆ ಪತ್ರ ಬರೆಯಲಾಗಿದೆ.

ಅಧ್ಯಕ್ಷರು—ಅದು ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ಗಟ್ಟಿ ಚಂದ್ರಶೇಖರ್‌ರವರು ಬಳಸಿರುವ ಕೆಲವು ಶಬ್ದಗಳನ್ನು ಅಧಿಕೃತ ದಾಖಲೆಯಿಂದ ತೆಗೆದುಹಾಕಬೇಕೆಂದು ಕೇಳಿದ್ದೇವೆ. ಅವುಗಳನ್ನು ದಾಖಲೆಯಿಂದ ತೆಗೆಯುವರೋ ಇಲ್ಲವೋ ಎನ್ನುವುದನ್ನು ಮಾನ್ಯ ಅಧ್ಯಕ್ಷರು ತಿಳಿಸಬೇಕು ಮತ್ತು ಶ್ರೀಮತಿ ಪ್ರಮೀಳಾ ಅವರಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್—ಮಾನ್ಯ ಅಧ್ಯಕ್ಷರೇ, ನಾನು ಭಾಷಣ ಮಾಡುವಾಗ ಮಾನ್ಯ ಬೊಮ್ಮಾಯಿಯವರೂ ಸಹ ಸದನದಲ್ಲಿ ಕುಳಿತಿದ್ದರು. ಆ ಸಮಯದಲ್ಲಿ ಅವರೂ ಸಹ ನಾನು ಬಳಸಿದ ಯಾವ ಶಬ್ದಗಳನ್ನೂ ದಾಖಲೆಯಿಂದ ತೆಗೆಯಬೇಕೆಂದು ಹೇಳಲಿಲ್ಲ. ಈಗ ಎರಡು ದಿವಸಗಳಾದ ಮೇಲೆ ದಾಖಲೆಯಿಂದ ತೆಗೆಯಬೇಕು ಎಂದು ಹೇಳಿದರೆ ಹೇಗೆ ? ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ಹರಳಿನಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಹೌದು, ಹೌದು ಎನ್ನಬೇಕು ಕೂಡಲ ಸಂಗಮದೇವ" ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನನ್ನ ಆರು ವರ್ಷದ ಅನುಭವದಲ್ಲಿ ದಾಖಲೆಯಿಂದ ತೆಗೆದುಹಾಕುವಂಥ ಯಾವ ಶಬ್ದಗಳನ್ನೂ ನಾನು ಬಳಸಿಲ್ಲ. ಆದರೆ, ವಿರೋಧ ಪಕ್ಷದ ನಾಯಕರು ಉಪಯೋಗಿಸಿದ ಶಬ್ದಗಳನ್ನು ದಾಖಲೆಯಿಂದ ತೆಗೆಯಲಾಗಿದೆ.

ಶ್ರೀ ಎಸ್. ಎಸ್. ಅರಕೇರಿ—ಅಲ್ಲಮ ಪ್ರಭುವಿನ ವಚನವನ್ನು ತೆಗೆದುಕೊಂಡು ಹೋಗಿ ಕೂಡಲ ಸಂಗಮದೇವ ಎಂದುಬಿಟ್ಟರಲ್ಲಾ.

ಅಧ್ಯಕ್ಷರು—ನಾನು ಅದನ್ನು ನೋಡಿ ಪತ್ತೆ ಮಾಡಿ ಅನ್‌ಪಾರ್ಲಿಮೆಂಟರಿ ಆಗಿದ್ದರೆ ಅದನ್ನು ತೆಗೆಯುತ್ತೇನೆ.

ಶ್ರೀಮತಿ ಎಸ್. ಪ್ರಮೀಳಾ—ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಮಾತನಾಡುತಾ ಇದ್ದಾಗ ನಾನು ಈ ಸಭೆಯಲ್ಲಿ ಇದ್ದೆ. ಅವರು ಮಾತನಾಡುವಾಗಲೇ ನಾನು ವಿರೋಧ ಮಾಡ ಬೇಕೆಂದಿದ್ದೆ. ಆದರೆ ಮಾತನಾಡುವಾಗ ಮಧ್ಯೆ ಅಡ್ಡ ಬರುವುದು ಸರಿಯಲ್ಲ ಎಂದು ನಾನು ಸುಮ್ಮನೆ ಇದ್ದೆ. ಸಮಯಬಂದಾಗ ಮಾತನಾಡೋಣ ಎಂದು ಇದ್ದೆ, ಜೊತೆಗೆ ಅವರು ಮಾತನಾಡುವಾಗ ಇಡೀ ಸಭೆಯಲ್ಲಿ ನಾನು ಒಬ್ಬಳೇ ಮಹಿಳಾ ಸದಸ್ಯೆ ಇದ್ದದ್ದು. ಆಗ ಟ್ರೆಜರಿ ಬೆಂಚಿನಲ್ಲಿ ಕೂಡ ಬೇರೆ ಯಾರಾದರೂ ಮಹಿಳಾ ಸದಸ್ಯರು ಇದ್ದಿದ್ದರೆ ಅವರು ಕೂಡ ಪ್ರತಿಭಟನೆ ಮಾಡುತ್ತಿದ್ದರು. ಅವರು ಕೂಡ ನನ್ನ ಜೊತೆಯಲ್ಲಿ ಸೇರಿಕೊಂಡು ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲ. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಒಂದು ಮಾತನ್ನು ಹೇಳಿ ದ್ದಾರೆ.

ಅಧ್ಯಕ್ಷರು—ಅವರು ಏನು ಹೇಳಿದ್ದಾರೆ ಎನ್ನುವುದನ್ನು ನಾನು ನೋಡುತ್ತೇನೆ. ಈಗ ಮಾನ್ಯ ಸದಸ್ಯರು ಆ ವಿಷಯವನ್ನು ಬಿಟ್ಟು ತಮ್ಮ ಭಾಷಣವನ್ನು ಮುಂದುವರಿಸಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ—ಮಾನ್ಯ ಸದಸ್ಯರು ಆ ವಿಷಯವನ್ನು ಬಿಟ್ಟು ಡಿಮ್ಯಾಂಡ್ ಮೇಲೆ ಮಾತನಾಡಲಿ.

ಅಧ್ಯಕ್ಷರು—ಯಾರಾದರೂ ಒಬ್ಬರು ಮಾನ್ಯ ಸದಸ್ಯರು ಆರೋಪಣೆ ಮಾಡಿದಾಗ ಟ್ರೆಜರಿ ಬೆಂಚಿ ನವರು ಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕು ಎನ್ನುವ ಒಂದು ನಿಯಮ ಇದೆ. ಆದ್ದರಿಂದ ಈಗ ಮಾನ್ಯ ಸದಸ್ಯರು ಯಾರೂ ಉತ್ತರ ಕೊಡುವುದಕ್ಕೆ ಹೋಗಬೇಡಿ. ಭಾಷಣ ಮಾಡತಕ್ಕ ಕಾಲದಲ್ಲಿ ಏನಾದರೂ ಲೋಪದೋಷಗಳು, ಅನ್‌ಪಾರ್ಲಿಮೆಂಟರಿ ಶಬ್ದಗಳು ಇದ್ದರೆ ಅವುಗಳನ್ನು ನಾನು ನೋಡಿ ತೆಗೆದು ಹಾಕುವುದಕ್ಕೆ ಪ್ರಯತ್ನಮಾಡುತ್ತೇನೆ. ಆದ್ದರಿಂದ ಈಗ ಟೀಕೆ ಮಾಡುವುದು ಬೇಡಿ. ಮಾನ್ಯ ಸದಸ್ಯರು ಆಯವ್ಯಯದ ಮೇಲೆ ನೇರವಾಗಿ ಮಾತನಾಡಲಿ.

ಶ್ರೀಮತಿ ಎಸ್. ಪ್ರಮೀಳ—ಮಾನ್ಯ ಸದಸ್ಯರು ಹೆಣ್ಣು ಮಕ್ಕಳಿಗೆ ಅಗೌರವವನ್ನು ತಂದಿದ್ದಾರೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರದಿದ್ದರೆ ಈ ಸದನಕ್ಕೆ ಲೋಪದೋಷಗಳು ಗೊತ್ತಾಗುವುದಿಲ್ಲ. ತಮಗೂ ಗೊತ್ತಾಗುವುದಿಲ್ಲ. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಈ ಸಭೆಯ ಸದಸ್ಯರಿಗೆ ಸಂಬಳವನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತಾ ಕ್ಯಾಬರೆ ನೃತ್ಯಕ್ಕೆ ೪೦ ಪರ್ಸೆಂಟ್ ಟ್ಯಾಕ್ಸು ಕೊಡುತ್ತಿದ್ದಾರೆ. ಆದ್ದರಿಂದ ಕ್ಯಾಬರೆ ನೃತ್ಯಕ್ಕೆ ಇಷ್ಟೇ ಬಟ್ಟೆಯನ್ನು ಹಾಕಿರಬೇಕು ಎಂದು ನಿಗದಿ ಮಾಡಬಾರದು ಎಂದು ಹೇಳಿದರು. ಈಗ ಈ ಸಭೆಯಲ್ಲಿ ಯಾರೂ ಮಾತನಾಡಲಿಲ್ಲ. ದ್ರೌಪದಿಯ ಮಾನಭಂಗವಾದಾಗ ಸದನ ಮೌನದಿಂದ ಕುಳಿತುಕೊಂಡಿತ್ತು. ಆದ್ದರಿಂದ ಮಹಾಭಾರತ ಆಗಲು ಕಾರಣವಾಯಿತು. ಕ್ಯಾಬರೆ ನೃತ್ಯದಲ್ಲಿ ಮಹಿಳೆಯರು ಬಟ್ಟೆ ತೆಗೆಯುವ ನೃತ್ಯವನ್ನು ನೋಡುವ ಅವಕಾಶವನ್ನು ಮಾಡಿಕೊಡಿ ಎಂದು ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಹೇಳಿದರು, ಇದರಿಂದ ಕರ್ನಾಟಕದ ಹೆಣ್ಣು ಮಕ್ಕಳಿಗೆ ಅವಮಾನವಾಗಿದೆ.

ಶ್ರೀ ಗಟ್ಟಿ ಚಂದ್ರಶೇಖರ್—ಸ್ವಾಮಿ, ಮಾನ್ಯ ಸದಸ್ಯರು ನನ್ನ ಹೆಸರನ್ನು ಹೇಳಿ ಮಾತನಾಡು ವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ಸದಸ್ಯರು ಅವರು ಮಾತನಾಡಿದ್ದು ಸರಿಯಲ್ಲ ಎಂದು ಹೇಳಿದ್ದಾರೆ. ಅವರು ಆ ರೀತಿ ಮಾತನಾಡುವುದಕ್ಕೆ ಅವಕಾಶ ಇದೆ. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಪೋಲೀಸ್ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಕ್ಯಾಬರೆ ನೃತ್ಯದ ಬಗ್ಗೆ ಅವರು ಹೇಳಿದ್ದಾರೆ. ಮಹಿಳೆಯರ ಬಗ್ಗೆ ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈಗ ಅದೇ ರೀತಿ ಮಹಿಳಾ ಸದಸ್ಯರು ಅವರ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಇರಬೇಕು. ಅದಕ್ಕೇಕೆ ಶ್ರೀಮಾನ್ ಗಟ್ಟಿ ಚಂದ್ರ

ಶೇಖರ್ ಅವರು ಬೆಚ್ಚಿ ಬಿದ್ದು ಏಳುತ್ತಾರೆ. ಮಹಿಳೆಯರ ಬಗ್ಗೆ ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಹೇಳಿದ್ದಾರೆ, ಪುರುಷರ ಬಗ್ಗೆ ಮಾನ್ಯ ಮಹಿಳಾ ಸದಸ್ಯರು ಹೇಳುವಾಗ ಸ್ವಲ್ಪ ತಡೆದುಕೊಳ್ಳಬೇಕು ಸೆನ್ಸಿಟೀವ್ ಆಗುವುದು ಬೇಡ.

ಅಧ್ಯಕ್ಷರು—ಅವರ ಅಭಿಪ್ರಾಯವನ್ನು ಹೇಳಲಿ. ಟೀಕೆ ಮಾಡುವುದು ಬೇಡ. ಈ ಸಭೆಯಲ್ಲಿ ಸ್ವಲ್ಪ ಮೇಲ್ಮಟ್ಟದಲ್ಲಿ ಚರ್ಚೆಯಾಗಬೇಕು.

ಶ್ರೀಮತಿ ಎಸ್. ಪ್ರಮೀಳ—ಮಾನ್ಯ ಸದಸ್ಯರು ಗಡಿ! ಮಹಿಳೆಯರ ಬಗ್ಗೆ ಟೀಕೆ ಮಾಡಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್—ಅವತ್ತು ನಾನು ಮಾತನಾಡುವಾಗ ಮಾನ್ಯ ಸದಸ್ಯರು ಸುಮ್ಮನೆ ಕುಳಿತುಕೊಂಡಿದ್ದರು.

ಶ್ರೀ ಕೆ. ಹೆಚ್. ಹನುಮೇಗೌಡ—ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಸ್ತ್ರೀವರ್ಗದ ಬಗ್ಗೆ ಹೇಳಲಿಲ್ಲ. ಹಾಗಾದರೆ ಹೆಣ್ಣು ಮಕ್ಕಳು ಕ್ಯಾಬರೆ ನೃತ್ಯಕ್ಕೆ ಹೋಗಬೇಡಿ ಎಂದು ಹೇಳಲಿ. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಕ್ಯಾಬರೆ ನೃತ್ಯದ ಬಗ್ಗೆ ಅವರ ಅಭಿಪ್ರಾಯವನ್ನು ಹೇಳಿದ್ದಾರೆ

ಶ್ರೀ ಮಳ್ಳೂರು ಆನಂದರಾವ್—ಸ್ವಾಮಿ. ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಇದರ ಬಗ್ಗೆ ತಾವು ಒಂದು ಆದೇಶವನ್ನು ಕೊಡಬೇಕು. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರಾಗಲಿ ಅಥವಾ ಈ ಕಡೆಯ ಸದಸ್ಯರಾಗಲೀ ಟೀಕೆ ಮಾಡಿದ ಮೇಲೆ ಅದಕ್ಕೆ ಇನ್ನೊಬ್ಬರು ಉತ್ತರ ಕೊಡುವುದನ್ನೂ ಸ್ವೀಕಾರ ಮಾಡುವುದಕ್ಕೆ ತಯಾರಾಗಿರಬೇಕು. ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಕ್ಯಾಬರೆ ವಿಷಯವನ್ನು ಮಾತನಾಡುವಾಗ ಆ ಕಡೆಯವರೂ ಎಂಜಾಯ್ ಮಾಡಿದ್ದಾರೆ, ನಾವೂ ಎಂಜಾಯ್ ಮಾಡಿದ್ದೇವೆ. ಅದಕ್ಕೆ ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅದರು ಏತಕ್ಕೆ ಸೆನ್ಸಿಟೀವ್ ಆಗುತ್ತಾರೆ? ಅವರು ಮಾತನಾಡುವಾಗ ಕುಮಾರಿ ಪ್ರಮೀಳಾ ಅವರು ಯಾವ ಪ್ರತಿಭಟನೆಯನ್ನೂ ಮಾಡಲಿಲ್ಲ. ಈಗ ಅವರು ಏತಕ್ಕೆ ಪ್ರತಿಭಟನೆ ಮಾಡುತ್ತಾರೆ. ಇವರೂ ಇವರ ಅಭಿಪ್ರಾಯವನ್ನು ಹೇಳಲಿ, ಪ್ರತಿಯೊಂದಕ್ಕೂ ಪ್ರತಿಭಟನೆ ಮಾಡಿದರೆ ಈ ಸಭೆಯ ಕಾರ್ಯಕಲಾಪಗಳು ನಡೆಯುವುದಿಲ್ಲ. ಈ ರೀತಿ ೧೦ ಜನ ಒಟ್ಟಿಗೆ ಎದ್ದು ಪ್ರಮಿಳಾ ಅವರ ಮಾತಿಗೆ ಪ್ರತಿಭಟನೆ ಮಾಡುವುದು ಸರಿಯಲ್ಲ. ಇದರ ಬಗ್ಗೆ ಅಧ್ಯಕ್ಷರು ರೂಲಿಂಗ್ ಕೊಡಬೇಕು.

ಶ್ರೀ ಗಟ್ಟಿ ಚಂದ್ರಶೇಖರ್—ಅವರು ನನ್ನ ಮೇಲೆ ಆರೋಪಣೆ ಮಾಡಿದರೆ ನಾನು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ.

9-30 A.M.

MR. SPEAKER.—I request the Hon. Members to resume their seats.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಈ ದಿವಸ ೧೦ ಗಂಟೆಗೆ ಮಂತ್ರಿಗಳಿಂದ ಉತ್ತರ ಪ್ರಾರಂಭವಾಗಬೇಕೆಂದು ಮೊದಲೇ ನಿರ್ಧಾರವಾಗಿರುವುದರಿಂದ ೧೦ ಗಂಟೆಗೆ ಉತ್ತರ ಪ್ರಾರಂಭಿಸಬೇಕು. ಅಷ್ಟರೊಳಗೆ ಎಷ್ಟು ಜನ ಬೇಕಾದರೂ ಮಾತನಾಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತಿದ್ದರೆ ಅಕಿ ಹೇಗೆ ತನ್ನ ಭಾಷಣ ಮಾಡಬೇಕೆಂಬುದನ್ನು ಮಾನ್ಯ ಸಭಾಧ್ಯಕ್ಷರೇ ಹೇಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ತಾವು ತಮ್ಮ ಕಡೆಯವರನ್ನು ಮಧ್ಯೆ ಇಂಟರಪ್ಟ್ ಮಾಡದಿರುವಂತೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗಿಂತಲೂ ನಿಮ್ಮ ಕಡೆಯವರೇ ಹೆಚ್ಚಿಗೆ ಇಂಟರಪ್ಟ್ ಮಾಡುತ್ತಿದ್ದಾರೆ. ಈಗಾಗಲೇ ಈ ಗಲಾಟೆಯಲ್ಲೇ ಅರ್ಧ ಗಂಟೆ ಕಾಲಹರಣವಾಯಿತು.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಈ ರೀತಿ ಗಲಾಟೆ ಮಾಡುತ್ತಿದ್ದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಾದರೂ ಹೇಗೆ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀಮತಿ ಎಸ್. ಪ್ರಮಿಳ.---ಮಾನ್ಯ ಸಭಾಧ್ಯಕ್ಷರೆ, ಆ ವಿಷಯವನ್ನು ಇಲ್ಲಿಗೇ ಬಿಟ್ಟು ನನ್ನ ಭಾಷಣವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಮೇರಿಕಾದಲ್ಲಿ 'Arizan Criminal Code ನಲ್ಲಿ obscence and vulgarity in the presence of womens' ಎಂದು ಕಾನೂನು ಇದೆ. ಅದೇ ರೀತಿ ತಾವು ದಯವಿಟ್ಟು ಇಲ್ಲಿಯೂ ಒಂದು ಕಾನೂನನ್ನು ತಂದು ಇಲ್ಲಿನ ಹೆಣ್ಣು ಮಕ್ಕಳ ಮಾನ ಮರ್ಯಾದೆಗಳನ್ನು ಕಾಪಾಡಬೇಕೆಂದು ಮಾನ್ಯ ಸದನದ ಮೂಲಕ ಸರ್ಕಾರದವರನ್ನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ನಮ್ಮ ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಗತಿ ಇವತ್ತು ಅಧೋಗತಿಗೆ ಇಳಿದಿದೆ. ಇವತ್ತು ನಮ್ಮ ರಾಜ್ಯದಲ್ಲಿ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳು ಎಂದು ೩ ಅಂಗಗಳಿವೆ. ನ್ಯಾಯಾಂಗದಲ್ಲಿ ಒಬ್ಬ ಮಹಿಳೆಯೂ ಇಲ್ಲ, ಕಾರ್ಯಾಂಗದಲ್ಲಿ ಎಷ್ಟು ಜನ ಮಹಿಳೆಯರಿಗೆ ಪ್ರಾತಿನಿಧ್ಯ ಇದೆ ಎಂಬುದನ್ನು ತಾವು ನೋಡಬೇಕು. ಅದೇ ರೀತಿ ಈ ಶಾಸಕಾಂಗದಲ್ಲಿ ಎಷ್ಟು ಜನ ಹೆಣ್ಣು ಮಕ್ಕಳು ಇದ್ದಾರೆ ಎಂಬುದನ್ನು ತಾವು ಲೆಕ್ಕ ಹಾಕಿ ನೋಡಬೇಕು. ಇದಕ್ಕೆಲ್ಲಾ ಕಾರಣ, ನಮ್ಮ ಆಡಳಿತದಲ್ಲಿರತಕ್ಕ ದೋಷ. ಇದರಿಂದಾಗಿ ಇವತ್ತಿನ ದಿವಸ ನಮ್ಮ ಹೆಣ್ಣು ಮಕ್ಕಳಿಗೆ ಬಹಳ ಅನ್ಯಾಯವಾಗಿದೆ. ಮೊದಲು ನಮ್ಮ ಆಡಳಿತದಲ್ಲಿರುವ ದೋಷವನ್ನು ಸರಿಪಡಿಸಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಆರುಮುಗಂರವರು ಹೇಳಿದ ಮಾತನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅವರು ಏನು ಹೇಳಿದರು ಎಂದರೆ, ಪ್ರತಿಯೊಂದು ಜಾತಿಯಲ್ಲೂ ಒಬ್ಬೊಬ್ಬರು ಕಾರ್ಯದರ್ಶಿಯಾಗಿ ಸರ್ಕಾರದಲ್ಲಿರಬೇಕು ಎಂದು. ನಾನು ಹೇಳುತ್ತೇನೆ. ನಮ್ಮಲ್ಲಿ ಇರುವುದು ಒಂದು ಗಂಡು ಜಾತಿ, ಇನ್ನೊಂದು ಹೆಣ್ಣು ಜಾತಿ ಎಂದು. ಸ್ವಾಮಿ ನಾನು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಗಂಡಾಗಿದ್ದು, ಮುಖ್ಯ ಕಾರ್ಯದರ್ಶಿಯವರು ಹೆಣ್ಣಾದರೆ ಇದು ಆಗುತ್ತದೆ. ನಾನು ಮೊದಲೇ ಹೇಳಿದಹಾಗೆ, ಇವತ್ತು ಹೆಣ್ಣು ಮಕ್ಕಳ ಸ್ಥಿತಿ ಅಧೋಗತಿಗೆ ಹೋಗಿದೆ. ಇದನ್ನು ಕೇಳುವವರು ಯಾರೂ ಇಲ್ಲ. ಅವರಿಗೆ ಎಲ್ಲಿಯೂ ಪ್ರಾತಿನಿಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಒಬ್ಬ ಹೆಣ್ಣು ಮಗಳಿಗೂ ಪ್ರಾತಿನಿದ್ಯವಿಲ್ಲ. ಈ ಪಬ್ಲಿಕ್ ಸರ್ವೀಸ್ ಕಮಿಷನ್ ಮಾನ್ಯ ಮುಖ್ಯ ಮಂತ್ರಿಗಳ ಕೈಯಲ್ಲಿರುವುದರಿಂದ ನಾನು ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಅಲ್ಲಿ ಹೆಣ್ಣು ಮಕ್ಕಳಿಗೂ ಪ್ರಾತಿನಿಧ್ಯವನ್ನು ಕೊಡಿ ಎಂದು, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ರಿಕ್ರೂಟ್‌ಮೆಂಟ್ ಆಗುವಾಗ ಹೆಣ್ಣು ಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ. ತಾವು ಪ್ರತಿಯೊಂದು ರಿಕ್ರೂಟ್‌ಮೆಂಟ್ ಕಮಿಟಿಯಲ್ಲೂ ಹೆಣ್ಣುಮಕ್ಕಳಿಗೆ ಪ್ರಾತಿನಿಧ್ಯವನ್ನು ಕೊಟ್ಟರೆ ಈಗ ಹೆಣ್ಣು ಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದಕ್ಕಾಗುತ್ತದೆ. ತಾವು ಎಲ್ಲಿಯವರೆಗೆ ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಈ ಅನ್ಯಾಯವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಇವತ್ತು ಇಡೀ ಹೆಣ್ಣು ಮಕ್ಕಳ ಅಸ್ತಿತ್ವವನ್ನೇ ಕಿತ್ತುಹಾಕಿ ಬಹಳ ಅನ್ಯಾಯ ಮಾಡಿದ್ದೀರಿ. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಇದು ಸಕಾಲವಾಗಿದೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಹೇಳುವುದಕ್ಕೆ ಬಯಸುತ್ತೇನೆ.

ಸ್ವಾಮಿ, ಇದಕ್ಕಿಂತಲೂ ಮುಖ್ಯವಾದ ಇನ್ನೊಂದು ವಿಚಾರವಿದೆ. ಆಂಧ್ರಪ್ರದೇಶದಲ್ಲಿ ಪೋಲೀಸ್ ಇಲಾಖೆಯಲ್ಲಿ ಹೆಣ್ಣುಮಕ್ಕಳು ಪೋಲೀಸ್ ಅಧಿಕಾರಿಗಳಾಗಿದ್ದಾರೆ, ಕಾನ್‌ಸ್ಟೇಬಲ್‌ಗಳಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಇದು ಇಲ್ಲ. Corruption has been rampent from the Constable to the highest authority. ಬೇಲಿಯೇ ಎದ್ದು ಹೊಲ ಮೇಯುವಂತಾಗಬಾರದು. ಕಾನೂನು ಸೂತ್ರ ಎಲ್ಲಾ ಕಡೆಯಲ್ಲೂ ಸರಿಯಾಗಿರಬೇಕಾದರೆ ಮೊದಲು ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲೂ ಹೆಣ್ಣು ಮಕ್ಕಳು ಸಬ್‌ಇನ್‌ಸ್ಪೆಕ್ಟರ್ ಇರಬೇಕು, ಪೋಲೀಸ್ ಕಾನ್‌ಸ್ಟೇಬಲ್ ಇರಬೇಕು, ಇನ್ನೂ ಮೇಲಧಿಕಾರಿಗಳೂ ಇರಬೇಕು. ಇದನ್ನೂ ಸಹ ಸರಿಪಡಿಸುವುದು ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿರುವುದರಿಂದ ಮೊದಲು ಎಲ್ಲ ಕಡೆಯಲ್ಲೂ ಪೋಲೀಸ್ ಸ್ಟೇಷನ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಅಧಿಕಾರ ಕೊಡಬೇಕು. ಇದನ್ನು ಮಾಡದೇ ಹೋದರೆ ಪರಿಸ್ಥಿತಿ ಅಧೋಗತಿಗೆ ಹೋಗಿ ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ, ಮಾನ್ಯ ಸಭಾಧ್ಯಕ್ಷರೆ, ಇನ್ನೊಂದು ಮುಖ್ಯ ವಿಚಾರ ಎಂದರೆ, ಮೈನ್ಸ್ ಅಂಡ್ ಜಿಯಾಲಜಿ ವಿಷಯ. ಇದು ಬಹಳ ಗಹನವಾದ ವಿಚಾರ. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಬಳ್ಳಾರಿಯಲ್ಲಿ ೫೧೬ನೇ ಸರ್ವೆನಂಬರ್ ಜಮೀನನ್ನು ಇನ್ನಯ್ಯ ರೆಡ್ಡಿ

ಎನ್ನುವವರಿಗೆ ಕೊಟ್ಟಿದ್ದರು. ಅಲ್ಲಿ ಮೈನ್ಸ್ ಸಿಕ್ಕುತ್ತಿತ್ತು. ಇದನ್ನು ಕಂಡ ಆಂಧ್ರಪ್ರದೇಶದವರು ಆ ಇನ್ನಯ್ಯ ರೆಡ್ಡಿಯನ್ನು ಅಲ್ಲಿಂದ ಎವಿಕ್ಟ್ ಮಾಡಿಸಿ ಸುಮಾರು ೮–೧೦ ಎಕರೆ ಜಮೀನನ್ನು ಆಂಧ್ರದವರು ಕಿತ್ತುಕೊಂಡು ಅಲ್ಲಿ ಮೈನ್ಸನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಇನ್ನಯ್ಯ ರೆಡ್ಡಿಯವರು ಅನೇಕ ಸಾರಿ ನಮ್ಮ ಸರ್ಕಾರಕ್ಕೆ ತಮ್ಮ ಅಹವಾಲನ್ನು ಕೊಟ್ಟರೂ ಇದರ ಬಗ್ಗೆ ಯಾವುದೇ ಕ್ರಮವನ್ನೂ ನಮ್ಮ ಸರ್ಕಾರ ಇದುವರೆಗೂ ತೆಗೆದುಕೊಂಡಿಲ್ಲ. ಇವತ್ತು ನಮ್ಮ ಕರ್ನಾಟಕದ ಮೈನ್ಸ್ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಬಗ್ಗೆ ಆಂಧ್ರ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿ ಆಂಧ್ರದವರು ವಶಪಡಿಸಿಕೊಂಡಿರುವ ಈ ಜಮೀನನ್ನು ಮತ್ತೆ ಹಿಂದಕ್ಕೆ ಪಡೆಯಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ, ಇನ್ನು ತೋಟಗಾರಿಕೆ ವಿಷಯದಲ್ಲಿ ಹೇಳುವುದಾದರೆ, ನಮ್ಮ ಕರ್ನಾಟಕದ ಪ್ರತಿಯೊಂದು ಮನೆಯ ಮುಂದೂ ಒಂದೊಂದು ಕಿಚನ್ ಗಾರ್ಡನ್ ಎಂದು ಮಾಡಿ ಅದಕ್ಕೆ ಬೇಕಾದ ಒಳ್ಳೆಯ ಬೀಜಗಳನ್ನೂ ಮತ್ತು ಮಾರ್ಗದರ್ಶನವನ್ನೂ ತೋಟಗಾರಿಕೆ ಇಲಾಖೆಯವರು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ತರಕಾರಿಯ ಬೆಲೆಯೂ ಕೂಡ ಬಹಳ ಕಡಿಮೆಯಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಹೇಳುವುದಾದರೆ, ಇದು ಮಾನ್ಯ ಮುಖ್ಯ ಮಂತ್ರಿಯವರಿಗೆ ಕಿವಿ ಮಾತು ಎಂದು ತಿಳಿದುಕೊಳ್ಳಬೇಕು, ಈ ಇಲಾಖೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕೈಯಲ್ಲಿಟ್ಟುಕೊಳ್ಳುವುದು ಸರಿಯಲ್ಲ. ರೇಷ್ಮೆ ಸೀರೆಗಳನ್ನು ಉಡುವವರು ಹೆಣ್ಣು ಮಕ್ಕಳು, ಆ ರೇಷ್ಮೆ ಸೀರೆಗಳು ಯಾವರೀತಿ ಇರಬೇಕು ಎಂಬುದು ಹೆಣ್ಣುಮಕ್ಕಳಿಗೆ ಗೊತ್ತಿರುತ್ತದೆ. ಆದ್ದರಿಂದ ಈ ಇಲಾಖೆಯನ್ನು ಒಬ್ಬ ಹೆಣ್ಣುಮಗಳ ಕೈಗೆ ಕೊಡುವುದು ಉತ್ತಮ. ಇವತ್ತು ಒಳ್ಳೆಯ ರೇಷ್ಮೆ ಸೀರೆ ಬೇಕೆಂದರೆ ಧರ್ಮಾವರಂಗೋ ಇಲ್ಲವೇ ಕಂಚಿಗೋ ಹೋಗಿ ತರಬೇಕಾಗುತ್ತದೆ. ಇವತ್ತು ರೇಷ್ಮೆ ಸೀರೆಗಳನ್ನು ಬಡವರು ಉಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ರೇಷ್ಮೆ ಇಲಾಖೆಯನ್ನು ಶ್ರೀಮತಿ ಮನೋರಮಾ ಮಧ್ವರಾಜ್‌ರವರಿಗೋ ಅಥವಾ ಬೇರೆ ಯಾರಾದರೂ ಒಬ್ಬ ಹೆಣ್ಣುಮಗಳಿಗೋ ಕೊಟ್ಟರೆ ಅವರು ಈ ರೇಷ್ಮೆ ಇಲಾಖೆಯನ್ನು ಅಭಿವೃದ್ಧಿಪಡಿಸಿ ಒಳ್ಳೆಯ ರೇಷ್ಮೆಯನ್ನು ಕಡಿಮೆ ಬೆಲೆಯಲ್ಲಿ ಬೆಳೆದು ಅತ್ಯಂತ ಬಡ ಹೆಣ್ಣುಮಗಳೂ ಕೂಡ ರೇಷ್ಮೆ ಸೀರೆಯನ್ನು ಉಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಸ್ವಾಮಿ, ಇನ್ನೊಂದು ವಿಚಾರ ಹೇಳುವುದಾದರೆ, ಇಡೀ ಕರ್ನಾಟಕಕ್ಕೇ ಇರತಕ್ಕದ್ದು ಒಂದು ವಿಮೆನ್ಸ್ ಪಾಲಿಟೆಕ್ನಿಕ್. ಅಲ್ಲಿ ಎಲ್ಲಾ ಬರೀ ಹೆಣ್ಣುಮಕ್ಕಳೇ ಇದ್ದಾರೆ. ಆದರೆ ಅಲ್ಲಿನ ಪ್ರಿನ್ಸಿಪಾಲರನ್ನು ನೋಡಿದರೆ ಗಂಡಸು. ಇದು ಸರಿಯಲ್ಲ, ಅಲ್ಲಿಗೆ ಹೆಣ್ಣು ಮಗಳೊಬ್ಬಳನ್ನು ಪ್ರಿನ್ಸಿಪಾಲ್ ಆಗಿ ನೇಮಿಸಬೇಕು.

ಇನ್ನು ವುಮನ್ಸ್ ಕ್ರಿಕೆಟ್ ಟೀಮು ಎಂದು ಮಾಡಿದ್ದಾರೆ. ಅದಕ್ಕೆ ಮ್ಯಾನೇಜರ್ ಆಗಿ ಇರತಕ್ಕವರು ಗಂಡಸರು. ನಾನು ಇದನ್ನು ಉದಾಹರಣೆಗಾಗಿ ಹೇಳುತ್ತಿದ್ದೇನೆ. ಇದು ಕೇವಲ ಇಲ್ಲೇ ಅಲ್ಲ. ಕರ್ನಾಟಕದಲ್ಲಿ ಎಲ್ಲೆಲ್ಲಿ ಹೆಣ್ಣುಮಕ್ಕಳ ಪಾಠಶಾಲೆಗಳು ಇವೆ, ಕಾಲೇಜುಗಳು ಇವೆ, ಅಲ್ಲಿ ಹೆಣ್ಣು ಮಕ್ಕಳನ್ನೇ ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಅತಿ ಮುಖ್ಯವಾಗಿ ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಎರಡು ಮಾತುಗಳನ್ನು ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಅರ್ಥ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅಡ್ವೋಕೇಟ್‌ಗಳಿಗೆ ಪ್ರೊಫೆಷನಲ್ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಇವರನ್ನು ಎಲ್ಲರಂತೆ ನೋಡುವುದು ಸರಿಯಲ್ಲ. ಲ್ಯಾಂಡ್ ಟ್ರಿಬ್ಯುನಲ್ಸ್‌ಗೆ ವಕೀಲರು ಹೋಗುವುದನ್ನು ನಿಲ್ಲಿಸಿದ್ದಾರೆ. ಬೆಂಗಳೂರಿನಲ್ಲಿರತಕ್ಕ ವಕೀಲರನ್ನು ನೋಡಿಕೊಂಡು ಅವರಿಗೆ ಪ್ರೊಫೆಷನಲ್ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಸರ್ಕಾರಿ ನೌಕರರಿಗೆ ಟ್ಯಾಕ್ಸ್ ಕಡಿಮೆ ಮಾಡಿ ವಕೀಲರು ಐದುವರ್ಷ ಆದತಕ್ಷಣ, ೨೫೦ ರೂಪಾಯಿಗಳ ಪ್ರೊಫೇಷನ್ ಟ್ಯಾಕ್ಸ್ ಕೊಡಬೇಕು ಎಂದು ಮಾಡಿದ್ದಾರೆ. ಇದರ ಬಗ್ಗೆ ತಾವು ಕೂಲಂಕುಷವಾಗಿ ಪರಿಶೀಲನೆ ಮಾಡಿ ಇವರಿಗೆ ಹಾಕಿರತಕ್ಕ ಟ್ಯಾಕ್ಸನ್ನು ಸರಿಪಡಿಸಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ವಕೀಲರಿಗೆ ಗವರ್ನಮೆಂಟಿನಲ್ಲಿ ಯಾವರೀತಿಯ ಸಾಲಗಳೂ ಸಿಕ್ಕುತ್ತಿಲ್ಲ, ಮತ್ತು ಯಾವ ಯಾವರೀತಿಯ ಸೌಲಭ್ಯಗಳೂ ದೊರೆಯುವುದಿಲ್ಲ, ಆದ್ದರಿಂದ ಈ ಪ್ರೊಫೆಷನಲ್ ಟ್ಯಾಕ್ಸನ್ನು

ತೆಗೆದುಹಾಕಿ ಅವರಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕು ಎಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸುಧೀಂದ್ರರಾವ್ ಕಸಬೆ (ರಾಯಚೂರು).— ಸನ್ಮಾನ್ಯ ಸಭಾ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಅರ್ಥ ಸಚಿವರು ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅಲ್ಲದೆ, ನೀರಾವರಿ ಯೋಜನೆ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಈ ಸಂದರ್ಭದಲ್ಲಿ ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಯೋಜನೆಗಳು ನಮ್ಮ ಕರ್ನಾಟಕ ರಾಜ್ಯವು ಪ್ರಗತಿಪರ ಹೆಜ್ಜೆಯನ್ನಿಡಲು ಹೆಚ್ಚು ಮಹತ್ವ ಪಾತ್ರವನ್ನು ವಹಿಸಿವೆ. ರಾಯಚೂರು ಜಿಲ್ಲೆಯಲ್ಲಿ, ತುಂಗಭದ್ರಾ ಜಲಾಶಯದಿಂದ ಸುಮಾರು ೫.೮ ಲಕ್ಷ ಎಕರೆ ಲೋಕಲೈಸೇನ್ ಇರುತ್ತದೆ. ಆದರೆ ಕಳೆದ ೨೦ ವರ್ಷಗಳಿಂದಲೂ ೩.೮ ಲಕ್ಷ ಎಕರೆ ಮಾತ್ರ ಲೋಕಲೈಸ್ ಆಗಿದೆ. ಇನ್ನುಳಿದ ಭೂಮಿ ಅಭಿವೃದ್ಧಿಯಾಗಿಲ್ಲ. ಇದಕ್ಕೆ ಕಾರಣ ಏನೆಂದರೆ, ನೀರಾವರಿ ಯೋಜನೆಯ ಹಂತದಲ್ಲಿ ಸಾಕಷ್ಟು ಅಣೆಕಟ್ಟು ರೋಡುಗಳು, ಇರಿಗೇಷನ್ ರೋಡುಗಳು ಆಗಬೇಕಾಗಿದೆ. ಅಲ್ಲದೆ, ಅವುಗಳ ಮೆಂಟೆನೆನ್ಸ್ ಸಹ ಆಗಬೇಕಾಗಿದೆ. ಏಕೆಂದರೆ, ರೈತನು ತನ್ನ ಕ್ಷೇತ್ರಕ್ಕೆ ಗೊಬ್ಬರ ಬೀಜ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಬೇಕಾದರೆ, ಒಕ್ಕಲುತನದ ಉಪಕರಣಗಳನ್ನು ತೆಗೆದುಕೊಂಡು ಹೋಗಬೇಕಾದರೆ, ಸಾಕಷ್ಟು ರಸ್ತೆಗಳು ಇಲ್ಲದೆ ಇರುವುದರಿಂದ ಅನಾನುಕೂಲವಾಗುತ್ತದೆ. ಇದರಿಂದಾಗಿ ಅವನು ತನ್ನ ಕ್ಷೇತ್ರವನ್ನು ಅಭಿವೃದ್ಧಿ ಮಾಡಲು ಅನಾನುಕೂಲವಾಗಿದೆ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ನೀರಾವರಿ ಪ್ರಾಂತ್ಯದಲ್ಲಿ ಸಾಕಷ್ಟು ಅಣೆಕಟ್ಟು ರೋಡುಗಳನ್ನು ಮತ್ತು ಅವುಗಳನ್ನು ಮೇಂಟೇನ್ ಮಾಡುವುದಕ್ಕೆ ಬಡ್ಜೆಟ್ ಪ್ರಾವಿಷನ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ತುಂಗಭದ್ರಾ ಎಡದಂಡೆ ಕಾಲುವೆಯ ಬದಿಗಳನ್ನು ಬಲಪಡಿಸುವುದಕ್ಕೆ ೧೯೭೭-೭೮ರಲ್ಲಿ ೮.೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಅದರ ಕೆಲಸ ತೀವ್ರಗತಿಯಲ್ಲಿ ಸಾಗಬೇಕಾಗಿದೆ. ಇಲ್ಲಿ ಇಂಟರನಲ್ ಟ್ರೀಟ್‌ಮೆಂಟ್ ಮಾಡುವುದು ಅವಶ್ಯಕವಾಗಿದೆ. ಡಿಸ್ಟ್ರಿಬ್ಯೂಟರಿ ಲೈನ್ಸ್‌ಗಳನ್ನು ಸರಿಯಾಗಿ ನೋಡಿಕೊಂಡರೆ ನೀರು ವೇಸ್ಟ್ ಆಗುವುದನ್ನು ತಡೆಗಟ್ಟಬಹುದು. ಮತ್ತು ಟೇಲ್ ಎಂಡ್‌ವರೆಗೂ ನೀರು ಸಿಕ್ಕುವುದಿಲ್ಲ. ಈ ಸಮಸ್ಯೆಯನ್ನು ಪೂರೈಸಬೇಕಾದರೆ ಡಿಸ್ಟ್ರಿಬ್ಯೂಟರಿ ಲೈನ್‌ಗಳನ್ನು ಸರಿಯಾಗಿ ಮಾಡುವುದಕೋಸ್ಕರ ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕಲಮಲ ಕ್ಷೇತ್ರದಲ್ಲಿ ರಾಜರಬಂಡ ಅಣೆಕಟ್ಟಿನಿಂದ ಸುಮಾರು ೬ ಸಾವಿರ ಎಕರೆಗೆ ಮಾತ್ರ ನೀರು ಸಿಕ್ಕುತ್ತಿದೆ. ಇದರಲ್ಲಿ ಮೂರು ಸಾವಿರ ಲೈಟ್ ಇರಿಗೇಷನ್ ಎಂದೂ, ಮೂರು ಸಾವಿರ ಎಕರೆ ಹೆವಿ ಇರಿಗೇಷನ್ ಎಂದೂ ನೀರು ಕೊಡುತ್ತಿದ್ದಾರೆ. ಅದೇ ಆಂಧ್ರ ಪ್ರದೇಶದವರು ಇದರ ಹೆಚ್ಚಿನ ಉಪಯೋಗವನ್ನು ಪಡೆದುಕೊಂಡು ಸುಮಾರು ೯೦ ಸಾವಿರ ಎಕರೆ ನೀರಾವರಿ ಮಾಡುತ್ತಿದ್ದಾರೆ. ರಾಜರಬಂಡ ಅಣೆಕಟ್ಟು ನಮ್ಮ ರಾಜ್ಯದಲ್ಲಿ ನಮ್ಮ ಜಿಲ್ಲೆಯಲ್ಲಿ ಮತ್ತು ನಮ್ಮ ಕ್ಷೇತ್ರದಲ್ಲಿ ನಿರ್ಮಾಣವಾಗಿದ್ದು ರಾಜ್ಯದವರಿಗೆ ಸರಿಯಾಗಿ ಇದರ ಉಪಯೋಗ ಸಿಕ್ಕುತ್ತಿಲ್ಲ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಈ ಆರು ಸಾವಿರ ಎಕರೆಗೂ ಹೆವಿ ಇರಿಗೇಷನ್ ಎಂದು ಕನ್‌ಸಿಡರ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ ರಾಯಚೂರು ತಾಲ್ಲೂಕಿನಲ್ಲಿ, ಕೆಲವು ಟೇಲ್ ಎಂಡನಲ್ಲಿರತಕ್ಕ ಗ್ರಾಮಗಳಲ್ಲಿ ಬಾವಿಗಳು ಇದ್ದು ಅವುಗಳಿಗೆ ಜನರು ಪಂಪುಸೆಟ್ಟುಗಳನ್ನು ಹಾಕಿಕೊಂಡು ಬೆಳೆಯನ್ನು ಬೆಳೆಯುತ್ತಿದ್ದಾರೆ. ಭಾವಿಯಲ್ಲಿ ನೀರು ಪುಷ್ಕಳ ಇರುವುದರಿಂದ ಟೇಲ್ ಎಂಡ್‌ನಲ್ಲಿರುವುದರಿಂದ ಅಲ್ಲಿ ನೀರೂ ಸರಿಯಾಗಿ ಪೂರೈಸುವುದಿಲ್ಲ ಮಳೆಗಾಲದಲ್ಲಿ ಆ ಜನರು ಭತ್ತವನ್ನು ಚೆನ್ನಾಗಿ ಬೆಳೆಯುತ್ತಿದ್ದಾರೆ. ಈ ಜಮೀನುಗಳು ನೀರಾವರಿ ಹೆವಿ ಲೋಕೆಲೈಸ್ ಆಗಿಲ್ಲ ಎಂದು ಸರ್ಕಾರದವರು ಅವರಿಗೆ ಪೆನಾಲ್ಟಿಯನ್ನು ಹಾಕಿದ್ದಾರೆ. ಇದು ಸರಿಯಲ್ಲ, ಅವರಿಗೆ ಬೇಕಾದರೆ ಟ್ಯಾಕ್ಸ್ ಹಾಕಿ, ಆದರೆ ಪೆನಾಲ್ಟಿಯನ್ನು ಯಾವ ದೃಷ್ಟಿಯಿಂದಲೂ ಹಾಕಬಾರದು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುತ್ತಿದ್ದಾರೆ ಅದು ಒಳ್ಳೆಯದು. ಕೆಲವು ರೈತರುಗಳು ಈ ದಿಸೆಯಲ್ಲಿ ಸರ್ಕಾರಕ್ಕೆ ವೋಚರ್ಸ್‌ನ್ನು ಸಬ್ಮಿಟ್ ಮಾಡತಕ್ಕ ಸಂದರ್ಭದಲ್ಲಿ ಲೇಬರ್ಸ್‌ಗೆ ಕೊಟ್ಟ ವೋಚರ್ಸ್, ಫರ್ಟಿಲೈಸರ್ಸ್ ತಂದ ವೋಚರ್ಸ್ ಬ್ಯಾಂಕ್‌ನಿಂದಾಗಲೀ ಅಥವಾ ಕಾರ್ಪೊರೇಷನ್‌ಗಳಿಂದ ಸಾಲ ತೆಗೆದುಕೊಂಡು ಅದನ್ನು ಮರುಪಾವತಿ ಮಾಡಿದ ವೋಚರ್ಸ್ ಆಗಲಿ

ಮತ್ತು ಇದಕ್ಕೆ ಕೊಟ್ಟಂಥ ಇಂಟರೆಸ್ಟ್ ವೋಚರ್ಸ್‌ನ್ನು ಸರಿಯಾಗಿ ಅಧಿಕಾರಿಗಳು ಸ್ವೀಕರಿಸುವುದಿಲ್ಲ. ಅಧಿಕಾರಿಗಳು ಬ್ಯಾಂಕ್‌ಗೆ ಕೊಟ್ಟಿರತಕ್ಕ ಇಂಟರೆಸ್ಟ್ ವೋಚರ್ಸ್‌ನ್ನು ತೆಗೆದುಕೊಳ್ಳುವುದಿಲ್ಲ. ಅವಕ್ಕೋಸ್ಕರವಾಗಿ ಅಧಿಕಾರಿಗಳಿಗೆ ತಾವು ಆದೇಶ ಕೊಟ್ಟು ಇಂಟರೆಸ್ಟ್ ವೋಚರ್ಸ್‌ನ್ನೂ ಸಹ ಇನ್‌ಕಂಟ್ಯಾಕ್ಸ್ ಬಗ್ಗೆ ತೆಗೆದುಕೊಳ್ಳುವ ಹಾಗೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ನಾರಾಯಣಪ್ಪ (ದೇವನಹಳ್ಳಿ).—ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ಸಣ್ಣ ನೀರಾವರಿ ದೊಡ್ಡ ನೀರಾವರಿ ಯೋಜನೆಗಳ ಬೇಡಿಕೆಗಳನ್ನು ತಂದಿದ್ದಾರೆ. ನಾನು ಇದರ ಬಗ್ಗೆ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರುತ್ತೇನೆ. ದೇಶದಲ್ಲಿ ನದಿ ನಾಲೆಗಳು ಇರುವ ತಾಲ್ಲೂಕಿನಲ್ಲಿ ಬೆಳೆಗಳು ಚೆನ್ನಾಗಿ ಆಗುತ್ತವೆ, ಆದರೆ ಇವು ಯಾವುವೂ ಇಲ್ಲದೆ ಇರುವ ಕಡೆಗಳಲ್ಲಿ, ಕೆರೆಗಳನ್ನು ಸರ್ಕಾರದವರು ದುರಸ್ತಿ ಪಡಿಸಿದರೆ ರೈತರಿಗೆ ಬೆಳೆಯನ್ನು ಬೆಳೆಯಲಿಕ್ಕೆ ಅವಕಾಶವಾಗುತ್ತದೆ. ಯಾವ ಕಡೆಯಲ್ಲಿ ನದಿಗಳು ಇಲ್ಲ, ನಾಲೆಗಳು ಇಲ್ಲ, ಇಂಥ ಕಡೆ ದೊಡ್ಡ ದೊಡ್ಡ ಕೆರೆಗಳನ್ನು ನಿರ್ಮಾಣ ಮಾಡಬೇಕು ಎಂದು ಸರ್ಕಾರದ ಆಜ್ಞೆ ಇದ್ದರೂ ಕೂಡ ಕಳೆದ ೩೦ ವರ್ಷಗಳಿಂದಲೂ ಕೆಲವು ಕಡೆ ಕೆರೆಗಳನ್ನು ಮಾಡದೆ ಇರುವುದು ತುಂಬಾ ಶೋಚನೀಯ. ಕೆಲವು ಕಡೆಗಳಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಹೊಸದಾಗಿ ಮಾಡಿದ್ದಾರೆ. ಆದರೆ ದೇವನಹಳ್ಳಿ ತಾಲ್ಲೂಕಿನಲ್ಲಿ ೧೦ ವರ್ಷದಿಂದ ಈಚೆಗೆ ಯಾವ ಒಂದು ಹೊಸ ಕೆರೆಯನ್ನೂ ತೆಗೆದುಕೊಂಡಿಲ್ಲ. ದೊಡ್ಡ ಕೆರೆಗಳಲ್ಲಿಯೂ ಬೇಸಿಗೆಯಲ್ಲಿ ನೀರು ಇರದೆ, ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಕೆಲವು ಕಡೆಗಳಲ್ಲಿ ಕೆರೆಗಳ ದುರಸ್ತಿ ಕೆಲಸ ಅಂದರೆ, ತೂಬುಗಳ ದುರಸ್ತಿ ಕೆಲಸ ಆಗಿಲ್ಲ, ಕೋಡಿಗಳ ದುರಸ್ತಿ ಕೆಲಸ ಆಗಿಲ್ಲ, ಈ ಕೆಲಸಗಳನ್ನು ಮಾಡದೇ ಇರುವುದರಿಂದ ಕೆರೆಗಳಲ್ಲಿ ನೀರೇ ನಿಲ್ಲದಂತಾಗಿದೆ. ಬರೀ ಎಕ್ಕಲುಮಣ್ಣು ತುಂಬಿರತಕ್ಕ ಕೆರೆಗಳೂ ಇವೆ. ೧೨ ಅಡಿ ಇದ್ದಂಥ ಕಾಲುವೆಗಳನ್ನು ಒಡೆದು ಸಣ್ಣ ಸಣ್ಣ ಕಾಲುವೆಗಳನ್ನು ಮಾಡಿ ಕೊನೆಯಲ್ಲಿರುವ ರೈತರಿಗೂ ನೀರು ಸಿಕ್ಕುವಂತೆ ವ್ಯವಸ್ಥೆ ಮಾಡಿಕೊಂಡಿದಾರೆ. ಆದರೂ ನೀರು ಸರಿಯಾಗಿ ಕೊನೆಯ ಜಮೀನಿನ ರೈತರಿಗೆ ದೊರಕುವುದಕ್ಕೆ ಅವಕಾಶವಾಗಿಲ್ಲ. ಆದಕಾರಣ ಸರ್ಕಾರದವರು ಕಾಲುವೆಗಳನ್ನು ಸರಿಯಾದ ರೀತಿಯಲ್ಲಿ ಮಾಡಿಕೊಡಲು ಆಜ್ಞೆ ಮಾಡಬೇಕು ಎಂದು ಮತ್ತು ಕೆರೆಕಟ್ಟೆಗಳನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಮಾಡಿಕೊಡಲು ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಅರದೇವರಹಳ್ಳಿಯಲ್ಲಿ ಲೆವಿ ಭತ್ತವನ್ನು ವಸೂಲುಮಾಡಿದ್ದಾರೆ. ಇಲ್ಲಿ ಕಂದಾಯ ಮತ್ತು ಹೊಸ ಕೆರೆಗಳ ವಿಚಾರದಲ್ಲಿ ಸರ್ಕಾರದವರು ಗಮನಕೊಡಬೇಕು ಎಂದು ನಾನು ಹೇಳುತ್ತೇನೆ. ದೇವನ ಹಳ್ಳಿಯ ತಾಲ್ಲೂಕಿನಲ್ಲಿ ಸುಮಾರು ೧೦ ಕೆರೆಗಳಾದರೂ ಹೊಸದು ಆಗಬೇಕು ಎಂದು ಮನವಿಯಲ್ಲಿ ತಿಳಿಸಿದ್ದರೂ ಸಹ ಒಂದೇ ಒಂದು ಕೆರೆಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ ನೋಡಿದರೆ ೫-೧೦ ಕೆರೆಗಳು ಹೊಸದಾಗಿ ನಿರ್ಮಾಣವಾಗಿವೆ. ಹೈಲೆವೆಲ್ ಕಾಸ್‌ವೇಗಳೂ ಸಹ ಆಗಿದೆ. ಆದರೆ ನಮ್ಮಲ್ಲಿ ಒಂದು ಹೈಲೆವೆಲ್ ಕಾಸ್‌ವೇ ಸಹ ಆಗಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಈ ರೀತಿಯಾದ ಬೇಡಿಕೆಗಳೂ ಇದ್ದರೂ ಸರ್ಕಾರದವರು ಮಂಜೂರಾತಿಯನ್ನು ಮಾಡಿಲ್ಲ. ಜೊತೆಗೆ ದೇವನಹಳ್ಳಿ ತಾಲ್ಲೂಕಿನಲ್ಲಿ ವಾಹನಗಳ ಸೌಕರ್ಯವಿಲ್ಲದೆ ಗೊಬ್ಬರ ಗೋಡು ಸಾಗಿಸಲು ತೊಂದರೆಯಾಗಿದೆ. ಆದ್ದರಿಂದ, ಹೈಲೆವೆಲ್ ಕಾಸ್‌ವೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸ ಸಣ್ಣ ಸಣ್ಣ ಕೆರೆಗಳ ನಿರ್ಮಾಣಕ್ಕಾಗಿ ಎಸ್ಟಿಮೇಟ್ ಆಗಿ ಸರ್ಕಾರದ ಮಂಜೂರಾತಿಗೆ ಬಂದು ೬ ತಿಂಗಳು, ವರ್ಷವಾದರೂ ಕೂಡ ಮಂಜೂರಾತಿ ಆಗಿಲ್ಲ. ಈ ಬಾಬಿಗೋಸ್ಕರ ಮಾನ್ಯ ಲೋಕೋಪಯೋಗಿ ಇಲಾಖೆಯವರು ಇಟ್ಟಿರತಕ್ಕ ಹಣವನ್ನು ನೋಡಿ ಮನಸ್ಸಿಗೆ ಬಹಳ ನೋವಾಯಿತು. ಏಕೆಂದರೆ, ದೇಶದಲ್ಲಿ ನದಿ ನಾಲೆಗಳಿಲ್ಲದೆ ಇರತಕ್ಕ ತಾಲ್ಲೂಕುಗಳಲ್ಲಿ ಕೆರೆಗಳೇ ದೊಡ್ಡ ಆಧಾರ, ಅದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ. ಅದು ಅನ್ನದ ಮಾರ್ಗ, ಇದಕ್ಕೆ ಹಣವನ್ನು ಹೆಚ್ಚಾಗಿ ಕೊಡಲಿಲ್ಲವಲ್ಲ ಎಂದು ವ್ಯಥೆಯಾಯಿತು. ಈ ಸಂದರ್ಭದಲ್ಲಿ ಒಂದು ಕಥೆ ನೆನಪಾಗುತ್ತದೆ. ಇಬ್ಬರು ಭಿಕ್ಷುಕರು ಒಂದು ಮರದ ಕೆಳಗೆ ಕುಳಿತು ಮಾತನಾಡುತ್ತಾರೆ...................................(ತೆಲುಗು). ಆದ್ದರಿಂದ ಆ ಒಂದು ಕಾರ್ಯಕ್ಕೆ ಯಾವ ರೂಪದಲ್ಲಾದರೂ ಹೆಚ್ಚಿಗೆ ಹಣವನ್ನು ಪಡೆದು ನೀರಾವರಿ ಕಾರ್ಯವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಅಧಿಕಾರಿಗಳಿದ್ದಾರೆ, ವಾಹನಗಳಿವೆ. ಅವರುಗಳನ್ನು ಆ ಕಾರ್ಯಕ್ಕಾಗಿ ನೇಮಿಸಿದ್ದೀರಿ. ರಿಗೆ ಹಣದ ಸೌಲಭ್ಯವನ್ನು ಒದಗಿಸಿಕೊಟ್ಟರೆ ಅವರು ರೈತರ ಬೇಡಿಕೆಗಳನ್ನು ತಕ್ಷಣ ಮಾಡಿಕೊಡು ಅನುಕೂಲವಾಗುತ್ತದೆ. ಒಟ್ಟಿನಲ್ಲಿ. ಸರ್ಕಾರದವರು ಲೋಕೋಪಯೋಗಿ ಇಲಾಖೆಗೆ

ಹೆಚ್ಚಾಗಿ ಹಣವನ್ನು ಒದಗಿಸಿಕೊಟ್ಟು ಕೆರೆಕಟ್ಟೆಗಳ ನಿರ್ಮಾಣದ ಮುಖೇನ ಅನ್ನದ ಮಾರ್ಗವನ್ನು ತೋರಿಸಿಕೊಟ್ಟು ರೈತರ ಕಷ್ಟಕಾರ್ಪಣ್ಯಗಳನ್ನು ಪರಿಹರಿಸಬೇಕೆಂದು ಪ್ರಾರ್ಥಿಸಿಕೊಂಡು, ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರಗಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಎಲ್ಲ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕಾಲದಲ್ಲಿ ಮಾಡಿರತಕ್ಕಂತಹ ಸಾಧನೆಯ ಬಗ್ಗೆ ಎಲ್ಲ ಸದಸ್ಯರೂ ಬಹಳಷ್ಟು ವಿಸ್ತಾರವಾಗಿ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಹೆಚ್ಚು ವಿಸ್ತಾರವಾಗಿ ಹೇಳುವುದಕ್ಕೆ ಸಮಯವಿಲ್ಲ, ಆದರೆ ಇಷ್ಟು ಮಾತ್ರ ಹೇಳಬಲ್ಲೆ. ನಾವು ಬಂದಿರುವುದು ಹೈದರಾಬಾದ್ ಕರ್ನಾಟಕದ ಏರಿಯಾದಿಂದ. ೧೯೫೬ರ ನಂತರ ಅಂದರೆ ನಾವು ಇಲ್ಲಿಗೆ ಸೇರಿದ ನಂತರ ನಮ್ಮ ಭಾಗದ ಜನರ ಎರಡು ಬೇಡಿಕೆಗಳಿದ್ದವು. ನಮ್ಮ ಭಾಗದ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಎಲ್ಲ ದೃಷ್ಟಿಯಿಂದ ಅಭಿವೃದ್ಧಿಯಾಗಬೇಕಾದರೆ ಆ ಭಾಗಕ್ಕೆ ಕೃಷ್ಣ ಮೇಲ್ದಂಡೆ ಯೋಜನೆ ಮತ್ತು ಒಂದು ವಿಶ್ವವಿದ್ಯಾನಿಲಯ ಆಗಬೇಕೆಂಬ ಕೂಗು ಬಹಳ ದಿದಗಳಿಂದ ಕೇಳಿಬರುತ್ತಿತ್ತು. ಮಾನ್ಯ ದೇವರಾಜ ಅರಸ್‌ರವರು ಇವತ್ತಿನ ದಿವಸ ವಿಶ್ವಬ್ಯಾಂಕಿನ ನೆರವನ್ನು ಪಡೆದು ಕೃಷ್ಣ ಮೇಲ್ದಂಡೆ ಯೋಜನೆಯನ್ನು ಕೈಗೊಂಡಿರುವುದಕ್ಕೆ ಹಾಗೂ ಅದರಿಂದ ನಮ್ಮ ಜನರ ಜೀವನದಲ್ಲಿ ಒಂದು ತರಹ ಕಳೆ ಮೂಡಿರುವುದಕ್ಕೆ ನಮ್ಮ ಭಾಗದ ಎಲ್ಲ ಜನರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆ ಕಾರ್ಯ ಇವತ್ತಿನ ದಿವಸ ನಡೆಯುತ್ತಿದೆ. ಇನ್ನು ವಿರೋಧ ಪಕ್ಷದ ಸದಸ್ಯರಾದ ಮಾನ್ಯ ಪಟೇಲರು ಈ ದೇಶದಲ್ಲಿರತಕ್ಕ ನಮ್ಮ ರಾಜ್ಯದಲ್ಲಿರತಕ್ಕ ಕರಪ್ಕ್ಷನ್ ಸಂಪೂರ್ಣವಾಗಿ ಹೋಗಬೇಕು ಎಂದು ಹೇಳುತ್ತಿದ್ದರು. ಅದು ಹೋಗಬೇಕಾದರೆ ಕೇವಲ ಅಧಿಕಾರಿಗಳನ್ನು ಟೀಕೆ ಮಾಡಿದರಾಗಲೀ ಅಥವಾ ರಾಜಕೀಯ ರಂಗದಲ್ಲಿ ಕೆಲಸ ಮಾಡತಕ್ಕವರನ್ನು ಟೀಕೆ ಮಾಡಿದರಾಗಲಿ ಆಗುವುದಿಲ್ಲ. ಮೊದಲು ಸಮಾಜದಲ್ಲಿರತಕ್ಕ ಕರಪ್ಷನ್ನನ್ನು ಹೋಗಲಾಡಿಸಬೇಕು, ಅದಕ್ಕೆ ಬಹಳ ಪ್ರಯತ್ನ ಮಾಡಬೇಕು. ಪ್ರತಿಯೊಬ್ಬರೂ ಶ್ರಮಿಸಬೇಕು. ಇವತ್ತು ದೇಶದಲ್ಲಿರತಕ್ಕ ಕರಪ್ಷನ್ ಅನ್ನು ಹೋಗಲಾಡಿಸಬೇಕಾದರೆ ನಾವು ಯಾವ ಜನರೊಡನೆ ಕೂಡಿ ಕೆಲಸ ಮಾಡುತ್ತೇವೆಯೋ ಅವರನ್ನು ಮೊದಲು ಪರಿವರ್ತಿಸಬೇಕು. ಡಾ॥ ಲೋಹಿಯಾರವರೊಡನೆ ಕೆಲವು ಕಾಲ ಇರತಕ್ಕ ಅವಕಾಶ ನನಗೂ ಕೂಡ ಸಿಕ್ಕಿತ್ತು. ಅವರು ಯಾವುದೇ ಪಾರ್ಟಿಯಲ್ಲಿದ್ದರೂ ಕೂಡ ಇಂಥ ವಿಚಾರಗಳ ಬಗ್ಗೆ ದೊಡ್ಡ ಚಿಂತನೆ ಮಾಡತಕ್ಕ ವ್ಯಕ್ತಿಗಳಾಗಿದ್ದರು. ಅದೇ ರೀತಿ ನಾವೂ ಕೂಡ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಪ್ರಜಾಪ್ರಭುತ್ವ ಇರತಕ್ಕಂತಹ ನಮ್ಮ ದೇಶದಲ್ಲಿ ಬಡವರು ದೇಶದ ಸಂಪತ್ತಿನ ಅಭಿವೃದ್ಧಿ ಗೋಸ್ಕರ ಹಗಲು ರಾತ್ರಿ ಎನ್ನದೆ ದುಡಿಯುತ್ತಿದ್ದಾರೆ. ಅಂಥವರಿಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ದಿವಸ ಒಂದು ಅಸ್ತಿತ್ವವನ್ನು ತಂದುಕೊಟ್ಟಿದ್ದಾರೆಂದರೆ ತಪ್ಪಾಗಲಾರದು. ಇವತ್ತಿನ ದಿವಸ ಒಂದು ಕಾರ್ಯಕಲಾಪಗಳು ಸುಗಮವಾಗಿ, ಸಫಲವಾಗಿ ಆಗಬೇಕಾದರೆ ಮೊದಲು ಅಧಿಕಾರಿಗಳ ಮನೋಪ್ರವೃತ್ತಿ ಬದಲಾವಣೆಯಾಗಬೇಕು. ಇವತ್ತು ಜನರು ಎಷ್ಟೇ ಟೀಕೆ ಟಿಪ್ಪಣಿಗಳನ್ನು ಮಾಡಿದರೂ ಕೂಡ, ಆರೋಪಣೆಗಳನ್ನು ಮಾಡಿದರೂ ಕೂಡ ವಿಶೇಷವಾಗಿ ಬಡಜನರು ತಮ್ಮ ಬಗ್ಗೆ ಸರಿಯಾಗಿ ವಿಚಾರ ಮಾಡಿ ಒಂದು ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದಾರೆ. ಇನ್ನು ಅಡ್ಮಿನಿಸ್ಟ್ರೇಷನ್‌ನಲ್ಲಿ ಕುಂದುಕೊರತೆ ಇದೆಯೆಂಬ ಧೋರಣೆ ಏನಿದೆ ಅದನ್ನು ತಾವು ಖಂಡಿತವಾಗಿ ಸರಿಪಡಿಸುತ್ತೀರೆಂದು ನಾನು ನಂಬಿಕೊಂಡಿದ್ದೇನೆ.

ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಹೇಳುವುದಾದರೆ, ರೇಷ್ಮೆ ಉತ್ಪಾದನೆ ಕೇವಲ ಮೈಸೂರಿ ಭಾಗದಲ್ಲಿ ಮಾತ್ರವಲ್ಲ, ಎಲ್ಲ ಭಾಗದಲ್ಲಿಯೂ ಆಗುತ್ತದೆಂದು ಈಗ ನಮಗನ್ನಿಸುತ್ತದೆ. ಹಿಂದೆ ನಾನು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯ ಸದಸ್ಯನಾಗಿದ್ದಾಗ ಅದು ಓಲ್ಡ್ ಮೈಸೂರು ಏರಿಯಾದಲ್ಲೇ ವಿನಹ ನಮ್ಮ ಕಡೆ ಇಲ್ಲ ಎನಿಸುತ್ತಿತ್ತು. ಏಕೆಂದರೆ, ಅದು ನಮ್ಮ ಕಡೆ ಇರಲಿಲ್ಲ. ಕಳೆದ ೩೦ ವರ್ಷಗಳಿಂದಲೂ ಆ ಬಗ್ಗೆ ಯಾರೂ ಮನಸ್ಸು ಮಾಡಿರಲಿಲ್ಲ. ಮಾನ್ಯ ಬಾಲಸುಬ್ರಮಣ್ಯಂ ಎಂಬುವರು ಗುಲ್ಬರ್ಗದ ಜಿಲ್ಲಾಧಿಕಾರಿಗಳಾಗಿದ್ದರು, ಅವರು ಸೆರಿಕಲ್ಚರ್ ಡೈರೆಕ್ಟರ್ ಆದಬಳಿಕ ಕೋಲಾರದಲ್ಲಿ ರೇಷ್ಮೆಯನ್ನು ಉತ್ಪಾದಿಸುತ್ತಿರುವಾಗ ಗುಲ್ಬರ್ಗದಲ್ಲಿ ಏಕೆ ಮಾಡಬಾರದೆಂದು ತಮ್ಮ ಒಂದು ಧೈರ್ಯದಿಂದ ಗುಲ್ಬರ್ಗದಲ್ಲಿಯೂ ಕೂಡ ರೇಷ್ಮೆಯನ್ನು ಉತ್ಪಾದಿಸುವಂತೆ ಮಾಡಿದರು. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ನಮ್ಮ ಜೇವರ್ಗಿ ತಾಲ್ಲೂಕಿನಲ್ಲಿ ನೂರಾರು

ಮಂದಿ ಈ ಕಸಬನ್ನು ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಸುಮಾರು ೩೦-೪೦ ಮಂದಿ ಕೃಷಿ ಪದವೀಧರರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಆ ಭಾಗದಲ್ಲಿ ಒಂದು ಮಾರ್ಕೆಟಿಂಗ ಫೆಸಿಲಿಟೀಸ್ ಆದ ನಿಮಿತ್ತ ರೆಗ್ಯುಲೇಟೆಡ್ ಮಾರ್ಕೆಟ್ ಟ್ರೈನಿಂಗ್ ಸಲುವಾಗಿ ಅಲ್ಲಿಗೆ ಜನರು ಬರುತ್ತಿದ್ದಾರೆ. ಹೀಗೆ ನಮ್ಮ ಕಡೆಯ ಜನರು ಟ್ರೈನಿಂಗ್ ಫೆಸಿಲಿಟೀಸ್ ಮಾಡಿ ಸೆರಿಕಲ್ಚರನ್ನು ಬಹಳಷ್ಟು ಯಶಸ್ವಿಯಾಗಿ ಮಾಡಿದ್ದಾರೆ. ಕೋಲಾರದಲ್ಲಿ ರೇಷ್ಮೆ ಏನು ಒಂದು ಕ್ವಾಲಿಟಿ ಇದೆ ಅದೇ ಕ್ವಾಲಿಟಿಯನ್ನು ನಮ್ಮಲ್ಲೂ ಮಾಡಿದ್ದಾರೆ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಇವತ್ತಿನ ದಿವಸ ಇರತಕ್ಕ ಬಹಳಷ್ಟು ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದರೆ ಹೈದರಾಬಾದ್‌ನಲ್ಲಿ ಒಂದು ರೀಜನಲ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದನ್ನು ಮಾಡಿದರೆ ನಮ್ಮ ಭಾಗದಲ್ಲಿರತಕ್ಕ ಬಹುತೇಕ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ ಇನ್ನು ಕೃಷ್ಣ ಮೇಲ್ದಂಡೆ ಯೋಜನೆಯ ಸಲುವಾಗಿ ತಾವು ಏನು ಒಂದು ಸಮಿತಿಯನ್ನು ಮಾಡಿದ್ದೀರಿ, ಅದರಲ್ಲಿ ಅಫೀಸರ್ಸ್ ಮತ್ತು ನಾನ್ ಆಫೀಸರ್ಸ್‌ನ್ನು ಹಾಕಿ ವಿಚಾರ ವಿನಿಮಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಇವತ್ತು ಅಲ್ಲಿನ ಜನರು ತಮ್ಮ ಕಡೆ ಆಶಾ ದೃಷ್ಟಿಯಿಂದ ನೋಡುತ್ತಿದ್ದಾರೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಡವರ ಬಗ್ಗೆ ಹಾಗೂ ಹಿಂದುಳಿದವರ ಬಗ್ಗೆ ವಿಶೇಷವಾಗಿ ವಿಚಾರ ಮಾಡುತ್ತಿದ್ದಾರೆಂಬುದನ್ನು ಎಲ್ಲರೂ ಮನಗಂಡಿದ್ದಾರೆ. ನಾವೂ ಕೂಡ ನಿಮ್ಮ ಬಗ್ಗೆ ಬಹಳಷ್ಟು ಅಪೇಕ್ಷೆಗಳನ್ನಿಟ್ಟುಕೊಂಡಿದ್ದೇವೆ. ತಾವು ಯಾವಾಗ ಕರೆಯುತ್ತೀರೋ ಆಗ ಬರುವುದಕ್ಕೆ ಸಿದ್ಧವಾಗಿದ್ದೇವೆ. ತಾವು ಏನು ಈ ಭೂಮಿಯ ಮೇಲೆಯೇ ಸ್ವರ್ಗವನ್ನು ತೋರುತ್ತೀರೋ ಅದಕ್ಕೆ ಒಂದು ಮಾತನ್ನು ಹೇಳುತ್ತೇನೆ............(ಉರ್ದು). ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಸುಮ್ಮನೆ ಅರ್ಧ ಗಂಟೆ ಹೋಯಿತು. ಆದ ರಿಂದ ದಯವಿಟ್ಟು ನಮ್ಮ ಕಡೆ ಇನ್ನೊಬ್ಬರಿಗಾದರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

MR. SPEAKER.—I think the discussion is concluded.

(Some members stood up requesting for a chance to speak)

10-00 A.M.

† SRI D. DEVARAJ URS (Chief Minister).—Sir, as was decided yesterday, the discussion should conclude at 10-00 A.M. According to the decision of the Business Advisory Committee, I had to start my reply at 9-00 A.M. Yesterday, I myself volunteered to give one more hour today for the debate. I do not mind obliging the hon. the Leader of the Opposition on the specific promise that not more than one person on the side is allowed to speak, and if he can adjust to that I have no objection.

SRI U. B. BORKER.—Sir, your Secretary has sent me a letter......

ಶ್ರೀ ಎಸ್. ಆರ್. ಬೊಮ್ಮಾಯಿ.—ಮೀನುಗಾರಿಕೆ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿತ್ತು ಎಂದು ಹೇಳಿದ್ದರು. ಆದ್ದರಿಂದ ರೂಲ್ ೩೧೨ರ ಕೆಳಗೆ ಅವರು ರೈಸ್ ಮಾಡುವುದಕ್ಕೆ ಸೋಮವಾರ ಅವಕಾಶ ಕೊಡಿ.

ಅಧ್ಯಕ್ಷರು.—ಆಗಲಿ, ಸೋಮವಾರ ಅವಕಾಶ ಕೊಡುತ್ತೇನೆ. ಈಗ ನೀವು ಕುಳಿತುಕೊಳ್ಳಿ.

SRI S. S. ARAKERI.—Sir, I want to speak about Uppar Krishna Project where harijans are being harassed.

MR. SPEAKER.—The hon. member has sent a Notice under Rule 312 on this subject, and it will be taken up on Monday or Tuesday.

ಶ್ರೀ ಎಸ್. ಎಸ್. ಅರಕೇರಿ.—ನಾನು ನಿನ್ನೆ ದಿವಸ......

ಅಧ್ಯಕ್ಷರು. -ಸದಸ್ಯರು ಹೀಗೆಲ್ಲಾ ಮಾಡುವುದು ಸರಿಯೇ ? ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ನಾವು ಒಂದು ನೋಟೀಸ್ ಕೊಟ್ಟಿದ್ದೇವೆ. ಅದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.—ತಾವು ಈಗ ಕೊಟ್ಟಿದ್ದೀರಿ. ಅದನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿ ಸೋಮವಾರ ತಾವು ವಿಷಯವನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಸೋಮವಾರ ಉತ್ತರ ಕೊಡುತ್ತಾರೆ. ನೀವು ಈಗ ದಯವಿಟ್ಟು ಕುಳಿತುಕೊಳ್ಳಿ.

SRI K. BHASKAR NAIDU.—Sir for some your bell tones and for some others it will not. Yesterday my speech was guillotined, and it was an insult to our Chief Whip. Now, the Hon'ble Chief Minister will have to commence his reply.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ದಯವಿಟ್ಟು ನನ್ನ ಒಂದು ಮನವಿಯನ್ನು ಕೇಳಬೇಕು. ನಾನು ಮತ್ತು ಶ್ರೀಮತಿ ಪ್ರಮಿಳ ಅವರು ಒಂದು ನೋಟೀಸ್ ಕಳಿಸಿದ್ದೇವೆ. ಹೆಣ್ಣು ಮಕ್ಕಳು ಅವರ ಬೇಡಿಕೆಗಾಗಿ ಮುಖ್ಯಮಂತ್ರಿಗಳ ಮನೆ ಮುಂದೆ ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿದ್ದರೆ ಪೋಲೀಸಿನವರು ಅವರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿ ಹಾಕಿದ್ದಾರೆ. ಮುಖ್ಯಮಂತ್ರಿಗಳ ಮನೆ ಸ್ವಂತ ಮನೆಯಲ್ಲ, ಅದು ಅಧಿಕೃತ ನಿವಾಸ. ಈ ಹೆಣ್ಣುಮಕ್ಕಳೇನಾದರೂ ಮುಖ್ಯಮಂತ್ರಿಗಳ ಕಾರಿಗೆ ಅಡ್ಡ ಬಂದಿದ್ದರೇ ? ಅವರು ತಮ್ಮ ಕಷ್ಟಗಳನ್ನು ಹೇಳಿಕೊಂಡು ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿದ್ದರೆ ಹೆಣ್ಣುಮಕ್ಕಳನ್ನು ತೆಗೆದುಕೊಂಡುಹೋಗಿ ಜೈಲಿನಲ್ಲಿ ಹಾಕಿದ್ದಾರೆ. ನೀವು ಸೋಮವಾರ ಉತ್ತರ ತರಿಸುತ್ತೇನೆ ಎಂದರೆ ಅವರು ಅಲ್ಲಿಯವರೆಗೆ ಜೈಲಿನಲ್ಲೇ ಇರಬೇಕೆ ?

ಅಧ್ಯಕ್ಷರು.—ಮಾನ್ಯ ಮಂತ್ರಿವರ್ಯರನ್ನು ನೀವು ನೋಡಿ. ಕಾನೂನು ಪ್ರಕಾರ......

ಶ್ರೀ ಮಳ್ಳೂರು ಆನಂದರಾವ್.—ಫುಟ್‌ಪಾತ್‌ನಲ್ಲಿ ಕುಳಿತುಕೊಂಡಿದ್ದರೆ ಜೈಲಿನಲ್ಲಿ ಹಾಕುತ್ತಾರೆ. ನಾನು ಒಂದು ನಿಮಿಷದಲ್ಲಿ ಹೇಳುತ್ತೇನೆ, ಅವರು ಉತ್ತರ ಕೊಡಲಿ.

SRI D. DEVARAJ URS.—I am not going to oblige.

MR. SPEAKER.—The notice has been received just now, and I will send the same to the Hon'ble Chief Minister, and the Chief Minister will make a statement on Monday after examining it.

ಶ್ರೀ ಮಳ್ಳೂರು ಆನಂದರಾವ್.—ದಯವಿಟ್ಟು ತಾವು ಕೇಳಿ.

ಅಧ್ಯಕ್ಷರು.—ಹೀಗೆ ಮಾಡಿದರೆ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮಳ್ಳೂರು ಆನಂದರಾವ್.—ನಾವು ಕಾರ್ಯಕಲಾಪಕ್ಕೆ ಎಂದೂ ಅಡ್ಡಿ ಬಂದಿಲ್ಲ.

ಅಧ್ಯಕ್ಷರು.—ತಾವು ರೂಲ್ಸ್ ಪ್ರಕಾರ ಹೋಗಬೇಕಾಗುತ್ತದೆ. ಏನಿದು ?

ಶ್ರೀ ಮಳ್ಳೂರು ಆನಂದರಾವ್.—ದಯವಿಟ್ಟು ತಾವು ಇದನ್ನು ವಿಚಾರ ಮಾಡಬೇಕು. ಇದು ಬಹಳ ಮಹತ್ವದ ವಿಚಾರ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಿ. ಅದನ್ನು ನಾನು ಮುಖ್ಯಮಂತ್ರಿಯವರಿಗೆ ಕಳುಹಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಮಕ್ಕಳುಮರಿಗಳನ್ನು, ಹೆಣ್ಣುಮಕ್ಕಳನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕುತ್ತಾರೆ. ಇದೇನಿದು ? ಮಾನ್ಯ ಅಧ್ಯಕ್ಷರು ವಿಷಯದ ತೀವ್ರತೆಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ನಾನು ಅವಕಾಶ ಕೊಡುವುದಕ್ಕಾಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ,

ಶ್ರೀ ಮಳ್ಳೂರು ಆನಂದರಾವ್.—ಹೊರಗಡೆ ಬೇಕಾದರೆ ಕಳಿಸಿ, ಚಿಂತೆ ಇಲ್ಲ.

ಅಧ್ಯಕ್ಷರು.—ಮುಂಚಿತವಾಗಿ ನೋಟೀಸ್ ಕೊಡಬೇಕು. ಸಂಬಂಧಪಟ್ಟ ಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಅವರಿಗೆ ಅವಕಾಶ ಕೊಡಬೇಕು. ಅವರು ಉತ್ತರ ತಯಾರು ಮಾಡಿ ಆಮೇಲೆ ನಿಮಗೆ ಹೇಳಬೇಕಾಗುತ್ತದೆ. ನೀವು ೫ ನಿಮಿಷದಲ್ಲಿ ನೋಟೀಸ್ ಕೊಟ್ಟು ವಿಷಯ ಎತ್ತಲೇಬೇಕು ಎಂದು ಹೇಳಿದರೆ ಹೇಗೆ?

ಶ್ರೀ ಮಳ್ಳೂರು ಆನಂದರಾವ್.—ನಾನು ಹೇಳುವುದನ್ನು ತಾವು ದಯವಿಟ್ಟು ಕೇಳಿ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಾನು ಹೋಗಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ನಾನು ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಮಳ್ಳೂರು ಆನಂದರಾವ್.—ನಾನು ಹೇಳುವುದನ್ನು ಕೇಳುವುದೇ ಇಲ್ಲವಲ್ಲ ತಾವು.

ಶ್ರೀ ಐ. ಪಿ. ಡಿ. ಸಾಲಪ್ಪ.—ಅವರು ನಿಮ್ಮ ಮಾತನ್ನು ಕೇಳದೇ ಸಭೆಗೆ ಅಗೌರವ ತೋರಿಸುತ್ತಾ ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಬಹಳ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಮಹಿಳೆಯರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಯಾವರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಕ್ಷಣ ತೆಗೆದುಕೊಳ್ಳಬೇಕು. ಅವರನ್ನು ಜಾಮೀನಿನ ಮೇಲೆ ಬಿಡಬೇಕೋ ಏನೋ ಎಂಬ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ದಿನದ ಕಾರ್ಯಕಲಾಪ ಮುಗಿಯುವುದರೊಳಗಾಗಿಯಾದರೂ ಆ ಬಗ್ಗೆ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಆ ವಿಷಯ ನನಗೇನೂ ಗೊತ್ತಿಲ್ಲ. ನಾನು ನೋಡುತ್ತೇನೆ.

ಶ್ರೀ ಕೆ. ಭಾಸ್ಕರ ನಾಯಿಡು.—ನಿನ್ನೆ ತೀರ್ಮಾನಿಸಿದ ಪ್ರಕಾರ ಇವತ್ತು ೧೦ ಗಂಟೆಗೆ ಮುಖ್ಯ ಮಂತ್ರಿಗಳ ಉತ್ತರ ಶುರುವಾಗಬೇಕು.

ಶ್ರೀ ಮಳ್ಳೂರು ಆನಂದರಾವ್.—ಬೆಳಿಗ್ಗೆಯೇ ಯಾತಕ್ಕೆ ಇವರಿಗೆ ಈ ಆವೇಶ? ಅವರಿಗೆ ನಿನ್ನೆಯಿಂದ ಏನೋ ಆಗಿಬಿಟ್ಟಿದೆ.

ಅಧ್ಯಕ್ಷರು.—ಅವರು ನಿಮ್ಮ ಹಕ್ಕಿಗೆ ಧಕ್ಕೆ ಬರುವ ರೀತಿಯಲ್ಲಿ ಏನೂ ಮಾತನಾಡಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಸನ್ಮಾನ್ಯ ಅಧ್ಯಕ್ಷರೇ, ಸಮಯದ ಒತ್ತಡ ಇರುವುದರಿಂದ ನಾನು ಸಂಕ್ಷಿಪ್ತವಾಗಿ ಕೆಲವು ಪಾಯಿಂಟ್‌ಗಳನ್ನು ಹೇಳಿ ಮುಗಿಸುತ್ತೇನೆ. ಮೊದಲನೆಯದಾಗಿ ಸಿರಿಕಲ್ಚರ್ ಬಗ್ಗೆ ಹೇಳುವುದಾದರೆ, ಸುಮಾರು ೨೭.೬೦ ಲಕ್ಷ ಟನ್ ಸಿರಿಕಲ್ಚರ್ ಉತ್ಪತ್ತಿಯಾಗಿದೆ. ಸರ್ಕಾರದ ಉತ್ಪನ್ನ ೧.೬೫ ಲಕ್ಷ ಇದೆ. ಖಾಸಗಿ ಉತ್ಪನ್ನ ೨೫.೯ ಲಕ್ಷ ಇದೆ. ಇವತ್ತು ಇದರಲ್ಲಿ ತಪ್ಪು ನೀತಿಯಿಂದಾಗಿ ಎಷ್ಟು ಅನಾಹುತವಾಗಿದೆ ಎನ್ನುವುದನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಸುಮಾರು ೨ ವರ್ಷಗಳ ಸಿಲ್ಕನ್ನು ಸ್ಟಾಕ್ ಮಾಡಿದರು. ೨.೯೭ ಲಕ್ಷ ಕೆ.ಜಿ. ಸಿಲ್ಕನ್ನು ೩೧೦ ರೂಪಾಯಿ ಇದ್ದುದನ್ನು ೨೪೦ ರೂಪಾಯಿನಂತೆ ಪೇಟೆಯಲ್ಲಿ ಮಾರಾಟ ಮಾಡಿದ್ದಾರೆ. ೪ ಜನ ಏಜೆಂಟ್ಸ್‌ನ್ನು ನೇಮಕ ಮಾಡಿ, ಆ ಏಜೆಂಟರಿಗೆ ಒಂದೂವರೆ ಪರ್ಸೆಂಟ್ ಕಮಿಷನ್ ಕೊಟ್ಟು ೬೦ ದಿವಸ ಕ್ರೆಡಿಟ್ ಫೆಸಿಲಿಟಿ ಕೊಟ್ಟು ಸಿಲ್ಕನ್ನು ಮಾರಾಟ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಲುಕ್ಸಾನಾಗಿದೆ. ಈ ಒಂದು ಸಿಲ್ಕ್ ಡಿಪಾರ್ಟ್‌ಮೆಂಟಿನ ತಪ್ಪು ನೀತಿಯಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ಲುಕ್ಸಾನಾಗಿದೆ. ಸಿಲ್ಕ್ ಫೆಡರೇಷನ್ನಿನಲ್ಲಿ ೨೦,೦೦೦ ಕೆ.ಜಿ. ಸಿಲ್ಕನ್ನು ತೆಗೆದುಕೊಂಡು ಕ್ಯಾಷ್ ಅಂಡ್ ಟರ್ಮ್ಸ್ ಮಾರಾಟ ಮಾಡಿದ್ದಾರೆ. ೪ ಜನ ಏಜೆಂಟರನ್ನು ನೇಮಿಸಿರುವುದರಿಂದ ಕಾರ್ಪೊರೇಷನ್‌ಗೆ ಬಂದಿರತಕ್ಕ ಲಾಭವೇನು; ಫರ್ಮ್ಸ್ ಹೆಚ್ಚಾಗಿ ಸಿಲ್ಕನ್ನು ಕೇಳಿದಾಗ ಅವರಿಗೆ ಸಿಲ್ಕನ್ನು ಏಕೆ ಕೊಡಲಿಲ್ಲ? ಸಿಲ್ಕ್ ಫೆಡರೇಷನ್‌ನಿಂದ ಸೊಸೈಟಿಗಾಗಲೀ ಬೆಳೆಗಾರರಿಗೇ ಆಗಲೀ ಲಾಭವಾಗುತ್ತಾ ಇದೆ, ನೌಕರರಿಗೂ ಅದರಿಂದ ಲಾಭವಾಗುತ್ತಾ ಇದೆ. ಇದರ ಬಗ್ಗೆ ತಾವು

ವಿಮರ್ಶೆ ಮಾಡುವುದು ಅಗತ್ಯ. ಎಸ್ಟಿಮೇಟ್ ಕಮಿಟಿಯವರೂ ಕೂಡ ತಮ್ಮ ರಿಪೋರ್ಟಿನಲ್ಲಿ ಇದಕ್ಕೆ ಕಾಫಿಬೋರ್ಡ್ ತರಹ ಒಂದು ಬೋರ್ಡ್‌ನ್ನು ಮಾಡಿ ಎಂದು ಹೇಳಿದ್ದಾರೆ. ತಾವು ಬೋರ್ಡ್‌ನ್ನು ಮಾಡಬೇಕಾದರೆ, ಒಂದು ಅಡ್ವೈಸರಿ ಕಮಿಟಿ ತರಹ ಮಾಡಬೇಕು ಎನ್ನುವುದು ನನ್ನ ಸಲಹೆ. ಆ ಕಮಿಟಿಯಲ್ಲಿ ಎಲ್ಲಿ ಸಿಲ್ಕ್ ಉತ್ಪನ್ನ ಮಾಡುತ್ತಾರೋ ಆ ಭಾಗದ ೪ ಜನ ಶಾಸಕರು, ರೀಲರ್ಸ್ ೩ ಜನ, ಟ್ವಿಸ್ಟರ್ಸ್ ಒಬ್ಬರು, ಡೈರೆಕ್ಟರ್ ಆಫ್ ಸಿರಿಕಲ್ಚರ್, ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಒಬ್ಬರು ಇರಬೇಕು. ಆ ಕಮಿಟಿಗೆ ಸಂಬಂಧಪಟ್ಟ ಇಲಾಖೆಯ ಕಮಿಷನರ್ ಅಂಡ್ ಸೆಕ್ರೆಟರಿ ಅವರನ್ನು ಛೇರ್ಮನ್ ಮಾಡುವುದು ಅಗತ್ಯ ಎಂದು ನಾನು ಸಲಹೆ ಕೊಡುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯ ಮಂತ್ರಿಗಳು ಹಿಂದುಳಿದ ವರ್ಗದವರಿಗಾಗಿ, ಹರಿಜನ ಗಿರಿಜನರಿಗಾಗಿ ಹಾಗೂ ಅಲ್ಪಸಂಖ್ಯಾತರಿಗಾಗಿ ಸರ್ಕಾರ ಇದೆ ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ತೋಟಗಾರಿಕೆ ಇಲಾಖೆಯಲ್ಲಿ ಡೈರಕ್ಟರ್ ಹುದ್ದೆ ಖಾಲಿಯಾಗಿ ೫ ತಿಂಗಳಾಯಿತು. ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಪ್ರಕಾರ By promotion from the cadre of Joint Director ಅಂತಹವರನ್ನು ಡೈರಕ್ಟರ್ ಮಾಡಬೇಕು ಎಂದು ಇದೆ. ಕೆಲವರು ಈಗಾಗಲೇ ಬರೆದಿದ್ದಾರೆ. ಚೀಫ್ ಸೆಕ್ರೆಟರಿಯವರು ಕೂಡ ಫೈಲಿನಲ್ಲಿ ಅವರು ವೆರಿಗುಡ್ ಮ್ಯಾನ್, ಅಡೀಷನಲ್ ಡೈರಕ್ಟರ್ ಮಾಡಿ ಎಂದು ಬರೆದಿದ್ದಾರೆ, ಆದರೂ ಕೂಡ ಮಾಡಿಲ್ಲ. ಮಾನ್ಯ ಆಪರ್ಣಗಂರವರು ಮಾತನಾಡುತ್ತಾ ವಿಧಾನಸೌಧದ ಕಮಿಷನರ್ಸ್ ಏನು ಮಾಡುತ್ತಾರೆ ಎಂದರೆ, ಕೆಳಮಟ್ಟದಲ್ಲಿರತಕ್ಕ ಅಧಿಕಾರಿಗಳನ್ನು ಚೆಸ್ ಆಟ ಆಡಿದಹಾಗೆ ಆಡಿಸುತ್ತಾರೆ ಎಂದು ಹೇಳಿದರು. ಅವರಿಗೆ ಆಗದ ಆಫೀಸರ್ಸ್‌ಗೆ ಪ್ರಮೋಷನ್ ಹೆಲ್ಡ್ ಅಪ್ ಆಗುತ್ತದೆ. ಇನ್‌ಕ್ರಿಮೆಂಟ್ ಹೆಲ್ಡ್ ಅಪ್ ಆಗುತ್ತದೆ, ಬೇಕಾದ ಜಾಗಗಳಿಗೆ ಟ್ರಾನ್ಸ್‌ಫರ್ ಸಿಕ್ಕುವುದಿಲ್ಲ. ಸೂಟಬಲ್ ಪರ್ಸನ್ ಇಲ್ಲ ಎಂದು ತಾವು ಹೇಳುತ್ತೀರಿ. ಶ್ರೀ ಮಹಮ್ಮದಾಲಿಯವರು he is a master of science in Horticulture in the Delhi University. ಹಿಂದೆ ಇದ್ದ ಡೈರಕ್ಟರ್ ಬಿ.ಎಸ್.ಸಿ. ಪದವಿಯನ್ನು ಮಾತ್ರ ಪಡೆದಿದ್ದರು. ಇವರಿಗೆ ಅಲ್ಪಸಂಖ್ಯಾತರು ಎನ್ನುವ ಒಂದೇ ಒಂದು ಕೊರತೆಯಿಂದ ಪ್ರಮೋಷನ್ ಸಿಕ್ಕದೆ ತಡವಾಗಿದೆ. ಆದುದರಿಂದ ಇದರಲ್ಲಿ ಏನು ಅನ್ಯಾಯವಾಗಿದೆ, ಇದನ್ನು ಸರಿಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರು ಮಾತನಾಡತಕ್ಕ ಕಾಲದಲ್ಲಿ ಅಡ್ಮಿನಿಸ್ಟ್ರೇಷನ್ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ; ಮತ್ತು ನಮ್ಮ ದೇಶದ ಸಂಸ್ಕೃತಿಯ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ನಮ್ಮ ದೇಶದ ಸಂಸ್ಕೃತಿ ಇಡೀ ಪ್ರಪಂಚದ ಬೇರೆ ಯಾವ ದೇಶದಲ್ಲೂ ಇಲ್ಲ. ಭಾರತ ದೇಶದ ಸಂಸ್ಕೃತಿಯನ್ನು ಇಡೀ ಜಗತ್ತೇ ಕೊಂಡಾಡುತ್ತಿದೆ. ಇಂತಹ ಸಂಸ್ಕೃತಿಯನ್ನು ನಮ್ಮ ದೇಶ ಪಡೆದಿದೆ. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ಹರಿಶ್ಚಂದ್ರ ಸುಡುಗಾಡಿಗೆ ಹೋದ, ಪಿತೃವಾಕ್ಯ ಪರಿಪಾಲನೆಗಾಗಿ ಶ್ರೀ ರಾಮಚಂದ್ರ ಕಾಡಿಗೆ ಹೋದ. ಇಂತಹ ಸಂಸ್ಕೃತಿಯನ್ನು ಹೊಂದಿರತಕ್ಕಂಥಾದ್ದು ನಮ್ಮ ದೇಶ. ೧೯೭೫ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಬಂದಾಗ ಸರ್ವಾಧಿಕಾರಗಳನ್ನು ಕೆಳಗಿಳಿಸುವುದಕ್ಕೆ ರಕ್ತಕ್ರಾಂತಿಯಾಗದೆ ಭಾರತೀಯರು ಶಾಂತಿಯುತವಾದ ದಿಟ್ಟ ಕ್ರಮವನ್ನು ತೆಗೆದುಕೊಂಡಿದ್ದಾರೆ. ಜಗತ್ತು ಮೆಚ್ಚಿರುವಂಥಾದ್ದು ನಮ್ಮ ದೇಶ. ಮಾನ್ಯ ಸ್ನೇಹಿತರ ಕ್ಯಾಬರೆ ಬಗ್ಗೆ ಪ್ರಸ್ತಾಪಮಾಡುತ್ತಾ, ಕರ್ನಾಟಕದ ಸಂಸ್ಕೃತಿ ಕ್ಯಾಬರೆ ಅಲ್ಲ, ಇದನ್ನು ರದ್ದುಮಾಡಿ ಎಂದು ಹೇಳಿದರು. ಕ್ಯಾಬರೆ ಪೂರ್ಣವಾಗಿ ರದ್ದಾಗಬೇಕು. ಏಕೆಂದರೆ, ಭಾರತದೇಶದಲ್ಲಿ ಅದರಲ್ಲೂ ಕರ್ನಾಟಕ ಉಚ್ಚ ಸಂಸ್ಕೃತಿಯನ್ನು ಪಡೆದಿರತಕ್ಕ ರಾಜ್ಯ. ಮಾನ್ಯ ಅಧ್ಯಕ್ಷರು ಗಂಟೆಯನ್ನು ಬಾರಿಸುತ್ತಿದ್ದಾರೆ; ನನಗೆ ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯಲ್ಲಿ ತಮ್ಮ ಅಪ್ಪಣೆ ಮೇರೆಗೆ ಮಂಡಿಸಿರತಕ್ಕಂಥ ೧೬ ಬೇಡಿಕೆಗಳ ಪೈಕಿ ಎಲ್ಲಾ ವಿಷಯಗಳ ಮೇಲೂ ಮಾತನಾಡುವುದಕ್ಕೆ ಎಲ್ಲಾ ಮಾನ್ಯ ಸದಸ್ಯರಿಗೆ ಕಷ್ಟವಾಗುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಒಂದೇ ತಡವೆ ೧೬ ಬೇಡಿಕೆಗಳನ್ನಿಟ್ಟು ಕೇವಲ ಒಂದು ಅಥವಾ ಎರಡು ದಿವಸಗಳಲ್ಲಿ ಇವುಗಳ ಬಗ್ಗೆ ಚರ್ಚೆ ಪೂರೈಸುವುದು ಸ್ವಲ್ಪ ಕಷ್ಟಕರವಾದ ಕೆಲಸವಾಗಿತ್ತು. ಆದರೂ ಕೂಡ ತಾವು ಇದ್ದಂಥ ಕಾಲದಲ್ಲೇ ದೊಡ್ಡ ಮನಸ್ಸು ಮಾಡಿ ಸಾಧ್ಯವಾದಷ್ಟು ಜನರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ೧೭ ಜನರು ನಮ್ಮ ಭಾಗದಿಂದ ಮಾತನಾಡಿದ್ದಾರೆ. ಕೊನೆಯಲ್ಲಿ ಮಾತನಾಡಿದ ಮಾನ್ಯ ಇಬ್ರಾಹಿಂರವರದು ಒಂದು

ತೂಕ ಜಾಸ್ತಿ, ಅವರದೂ ಸೇರಿದರೆ ೧೮ ಜನ ಆಗಿದೆ. ಅವಕಾಶವಿದ್ದಿದ್ದರೆ ೧೫ ಜನ ಮಾತನಾಡುತ್ತಿದ್ದರೇನೋ. ಆದರೆ ಅವಕಾಶವಿಲ್ಲದೇ ಇದ್ದುದರಿಂದ ಸಾಧ್ಯವಾಗಿಲ್ಲ. ಹೆಚ್ಚು ಕಡಿಮೆ ಮಧ್ಯೆ ಮಧ್ಯೆ ಊಟಕ್ಕೆ, ವಗ್ಯೆರೆಗೆ ಹೋಗಿದ್ದೇ ವಿನಹಃ ಬಾಕಿ ಉಳಿದ ವೇಳೆಯಲ್ಲಿ ಎಲ್ಲರೂ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಅನೇಕ ಮಾನ್ಯ ಸದಸ್ಯರುಗಳು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನಾವು ಹಾಕಿಕೊಂಡಿರತಕ್ಕ ಕೆಲವು ಕಾರ್ಯಕ್ರಮಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ಹೇಳಿದ್ದಾರೆ. ಮತ್ತೆ ಕೆಲವರು ಇನ್ನೂ ಒಳ್ಳೆಯ ರೀತಿಯಲ್ಲಿ ಕೆಲಸವಾಗಬೇಕು ಎನ್ನುವ ವಿಷಯವನ್ನೂ ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಇನ್ನು ಮಾನ್ಯ ಸದಸ್ಯರುಗಳು ಆಡಳಿತ ಯಂತ್ರ ಕುರಿತು, ಆಡಳಿತದಲ್ಲಿರತಕ್ಕ ನ್ಯೂನತೆಗಳೇನಿವೆ ಎಂಬುದನ್ನು ಹೇಳಿದ್ದಾರೆ. ಆ ಎಲ್ಲಾ ರಚನಾತ್ಮಕ ಟೀಕೆಗಳನ್ನೂ ನಾನು ಸ್ವಾಗತಿಸುತ್ತೇನೆ. ಮತ್ತೆ ಕೆಲವು ಸದಸ್ಯರುಗಳು ನನ್ನ ಮೇಲೆ ವೈಯಕ್ತಿಕವಾಗಿ ಖಾರವನ್ನು ಸೂಚಿಸಿದ್ದಾರೆ. ಅದರಲ್ಲೂ ನಮ್ಮ ವಿರೋಧ ಪಕ್ಷದ ನಾಯಕರಿಗೆ ತುಂಬಾ ಸಿಟ್ಟು ಇದ್ದಹಾಗೆ ಕಾಣುತ್ತದೆ. ಆ ಸಿಟ್ಟಿಗೆ ಕಾರಣಾನೂ ಇದೆ. ಅದರ ಜೊತೆಗೆ ಅವರು ಇನ್ನು ೩೦–೩೫ ಚಾರ್ಜಸ್ ಬ್ರ್ಯಾಂಡೀಸ್ ಮಾಡಿದ್ದಾರೆ. ಕನ್ನಡ ಪದ ಅದಕ್ಕೆ ಸರಿಯಾದ್ದು ಸಿಗಲಿಲ್ಲ ಅದಕ್ಕೆ ಬ್ರ್ಯಾಂಡೀಸ್ ಅಂತ ಹೇಳಿದೆ. ನನಗೆ ಅನ್ನಿಸುತ್ತದೆ ಇದು ಏನೂ ಹೊಸದಲ್ಲ, ಇನ್ನು ಮೇಲೂ ಹಾಗೇ ಮಾಡುತ್ತಾರೆ. ಈಗ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ ಸಾರಾಂಶ ನನಗೆ ಅರ್ಥವಾದ ಹಾಗೆ, ಹೆಚ್ಚಾಗಿ ನಮ್ಮ ದೇಶದಲ್ಲಿ ಆಡಳಿತ ಯಾವ ರೀತಿ ನಡೆಯಬೇಕು, ಯಾವ ಮಟ್ಟದಲ್ಲಿ ನಡೆಯಬೇಕು ಎನ್ನುವ ಬಗ್ಗೆ ಹೇಳಿದ್ದಾರೆ. ಅದರಲ್ಲಿ ನನ್ನದೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಎಲ್ಲರೂ ಅವರವರ ಅನುಭವವನ್ನು ಈ ಮಾನ್ಯ ಸಭೆಯ ಮುಂದಿಟ್ಟಿದ್ದಾರೆ. ಆದುದರಿಂದ ನಾನು ಮೊದಲು ಈ ಆಡಳಿತದ ಬಗ್ಗೆ ಸ್ವಲ್ಪ ಕಾಲ ಪ್ರಸ್ತಾಪ ಮಾಡಬೇಕೆಂದು ಇಚ್ಛೆ ಪಡುತ್ತೇನೆ.

ಮಾನ್ಯ ಶ್ರೀ ಜೆ.ಹೆಚ್. ಪಟೇಲರು ಇದರ ಬಗ್ಗೆ ತಮ್ಮದೇ ಆದ ಒಂದು ವ್ಯಾಖ್ಯಾನ ಮಾಡಿದರು. ಅವರು "ಸರ್ಕಾರ ಪ್ರಧಾನವಾದ ಸಮಾಜ" ಎನ್ನುವ ಮಾತನ್ನು ಹೇಳಿದ್ದಾರೆ. ಇದು ಸರ್ಕಾರಿ ಪ್ರಧಾನವಾದ ಸಮಾಜ ಆಗಬಾರದು, ಹೊರದೇಶಗಳನ್ನು ನಾವು ತೆಗೆದುಕೊಂಡಾಗ ಅಲ್ಲಿಯ ವಿಷಯವೇ ಬೇರೆ ಇದೆ ಅಂತ ಉತ್ತಮವಾದ ಉದಾಹರಣೆಯನ್ನು ಕೊಟ್ಟು ನಮೂದಿಸಿದ್ದಾರೆ. ಆ ವಿಷಯದಲ್ಲಿ ನನಗೂ ಅವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆ ರೀತಿ ಆಗಬಾರದು. ಅದರ ಜೊತೆಯಲ್ಲಿ ಭಾರತದಲ್ಲಿ ಯಾವ ರೀತಿಯ ಸಮಾಜ ಇದೆ ಎನ್ನುವುದನ್ನೂ ಅವರು ಅರಿತಿದ್ದಾರೆ. ನಾವು ಆಶೆ ಪಡುವ ವಿಚಾರ ಬೇರೆ, ವಾಸ್ತವಾಂಶವೇ ಬೇರೆ ಇದೆ. ಈ ರೀತಿ ಬಹಳ ಉತ್ತಮಮಟ್ಟದಲ್ಲಿ ನಾನು ನಡೆಯಬೇಕು, ತತ್ವಗಳ ಆಧಾರದ ಮೇಲೆ ನಡೆಯಬೇಕು ಎಂದು ಆಶೆ ಪಟ್ಟರೂ ಅದಕ್ಕೆ ಒಂದು ಗುರಿ ಇದ್ದರೂ, ಒಂದು ಆದರ್ಶವಿದ್ದರೂ ವಾಸ್ತವಾಂಶದ ಕಡೆಗೆ ಗಮನ ಕೊಡಬೇಕಾದ್ದೂ ಇದೆ. ಯಾರೇ ಬಂದರೂ ಇದು ಹಾಗೆಯೇ ಇರುತ್ತದೆ. ನಾಳೆ ದಿವಸ ಶ್ರೀ ಜೆ. ಎಚ್. ಪಟೇಲರೇ ಮುಖ್ಯಮಂತ್ರಿಗಳಾಗಿ ಬಂದರೂ ಇದನ್ನು ಏನೂ ಬದಲಾವಣೆ ಮಾಡುವುದಕ್ಕೆ ಅವರಿಂದಲೂ ಆಗುವುದಿಲ್ಲ. ಅವರು ಕೂಡ ಸಮಾಜದಿಂದ ದೂರ ಹೊರಗಡೆ ಇರುವುದಕ್ಕಾಗುವುದಿಲ್ಲ. ಆಗ ನಿಮಗೂ ಸಮಾಜಕ್ಕೂ ಇರುವ ದಾರ ಕಡಿದು ಹೋಗುತ್ತದೆ. ಆಕಾಶದಲ್ಲಿ ದಾರ ಕಿತ್ತ ಗಾಳಿಪಟದ ತರಹ ಹಾರಾಡುತ್ತಿರಬೇಕಾಗುತ್ತದೆ. ಆದುದರಿಂದ ಸಮಾಜವಿದೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡು ಆ ರೀತಿ ನಡೆಯಬೇಕಾಗಿದೆ. ಈಗ ತಾನೇ ಶ್ರೀ ಇಬ್ರಾಹಿಂರವರು ಭಾರತ ದೇಶದ ಸಂಸ್ಕೃತಿ ಬಹಳ ದೊಡ್ಡದು ಎಂದು ಭಾಷಣ ಮಾಡಿ ಹೊರಗಡೆ ಹೊರಟು ಹೋದರು. ನಮ್ಮ ಭಾರತದ ಸಂಸ್ಕೃತಿ ಬಹಳ ದೊಡ್ಡದು ಎಂದು ಹೇಳುವುದಕ್ಕೆ ದಣಿವಾಯಿತು ಎಂದು ಕಾಣುತ್ತದೆ. ಆದುದರಿಂದ ಹೊರಗಡೆ ಹೊರಟು ಬಿಟ್ಟರು. ನಾನು ಕೂಡ ಸ್ವಲ್ಪ ಮಟ್ಟಿಗೆ ರಾಮಾಯಣ ಮಹಾಭಾರತವನ್ನು ಓದಿದ್ದೇನೆ. ನಳ ಚರಿತ್ರೆ, ಹರಿಶ್ಚಂದ್ರ ಕಾವ್ಯವನ್ನು ಓದಿದ್ದೇನೆ. ಆ ವಿಷಯಗಳನ್ನು ಸುಮಾರು ಮಟ್ಟಿಗೆ ಅವರು ಹೇಳುವಷ್ಟು ನಾನು ಹೇಳಬಲ್ಲೆ. We always try to live in the past. Present......ಏನು ?. ?...... ರಾಮಾಯಣ ಕಾಲದ್ದು ಈಗ ತೆಗೆದುಕೊಂಡು ಏನು ಮಾಡುತ್ತೀರಿ ? ವ್ಯವಸಾಯ ಪ್ರಾರಂಭವಾದ ಕಾಲದಲ್ಲಿ ದನಗಳನ್ನು ಮೇಯಿಸಿಕೊಂಡು ಆರ್ಯರು ಕಾಲ ತಳ್ಳುತ್ತಿದ್ದರು. ದನ ಮೇಯಿಸುವುದಕ್ಕೆ ಬೇಕಾದಷ್ಟು ಹುಲ್ಲು ಬೆಳೆಯುತ್ತಿದ್ದರು. It was not even fully agricultural country in those days, thousands and thousands years back... ಮತ್ತೆ ಒಂದಾನೊಂದು ಕಾಲದಲ್ಲಿ ಧನವಿಲ್ಲದಿದ್ದಾಗ ಗೋವುಗಳನ್ನೇ ಕೊಟ್ಟು ವ್ಯಾಪಾರ ಮಾಡುತ್ತಿದ್ದರು. ೧೦೦ ಗೋವುಗಳನ್ನು ಕೊಟ್ಟರೆ ಇಷ್ಟು ಇದು ಅಂತ ಬೇರೆ ವಸ್ತು ಕೊಡುತ್ತಿದ್ದರು ಆಗ ದುಡ್ಡು ಇರಲಿಲ್ಲ.

ಯಾವುದೋ ಸಿಂಪಲ್ ಸ್ಟ್ರಕ್ಚರ್ ಆಫ್ ಸೊಸೈಟಿ ಏನಿತ್ತು ಎನ್ನುವುದನ್ನು ತೆಗೆದುಕೊಂಡಾಗ, ಅದರಲ್ಲಿ ಕೆಲವೊಂದು ಆದರ್ಶಗಳು ಇವೆ, ಆದರೆ ಈಗ ಬದಲಾವಣೆಗೊಂಡಿರತಕ್ಕ ಸನ್ನಿವೇಶದಲ್ಲಿ ನಾವು ಅದನ್ನೇ ಹಿಡಿದುಕೊಂಡು ಕೂತುಕೊಳ್ಳುವುದಕ್ಕಾಗುವುದಿಲ್ಲ.

ಒಬ್ಬ ಸದಸ್ಯರು.—ಅದನ್ನು ಅನುಷ್ಠಾನಕ್ಕೆ ತರಬೇಕು.

ಶ್ರೀ ಡಿ. ದೇವರಾಜ್ ಅರಸ್.—ಇನ್ನೊಬ್ಬರಿಗೆ ಮಾಡು ಅಂತ ಹೇಳುವುದು ಇದು, Every value or every virtue is preached for others. It has happened not now but from ages and ages. ಇವತ್ತಿನ ದಿವಸ ನಮ್ಮ ಭಾರತ ದೇಶದಲ್ಲಿ ಎಂಥ ಸಮಾಜ ಇದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಭಾರತದೇಶ ಏಶಿಯಾ ಖಂಡದಲ್ಲಿಯೇ ಬಹು ಕಡು ಬಡತನದಿಂದ ಕೂಡಿರತಕ್ಕ ದೇಶ. ಇದು ನಾನು ಹೇಳುತ್ತಿರುವುದು ಅಲ್ಲ, ತಿಳಿದಿರುವವರು ಹೇಳಿದ್ದಾರೆ. ಎಕಾನಮಿಸ್ಟ್ ಅಂತ ಯಾರಿಗೆ ಹೇಳುತ್ತೇವೆ, ರಾಜ್ಯಶಾಸ್ತ್ರಜ್ಞರು ಅಂತ ಯಾರನ್ನು ತಿಳಿದಿದ್ದೇವೆ ಅವರೇ ನಮ್ಮ ಭಾರತ ದೇಶ ಇನ್ನೂ ಡೆವಲಪಿಂಗ್ ಕಂಟ್ರಿ ಅಂತ ಹೇಳುತ್ತಿದ್ದಾರೆ. ಇದೇ ರೀತಿ ಭಾರತದಲ್ಲಿ ಕೆಲವು ವಿಶೇಷವಾದ ದೋಷಯುಕ್ತವಾದ ಗುಣಗಳಿದ್ದಾವೆ. ಮಾನ್ಯ ಆರ್ಮುಗಂರವರು ಇದರ ಬಗ್ಗೆ ವ್ಯಾಖ್ಯಾನ ಮಾಡುತ್ತಾ, ಪರ್‌ಹ್ಯಾಪ್ಸ್ ದೇಶದಲ್ಲಿರತಕ್ಕ ಜಾತೀಯ ವಾದ ಎಲ್ಲಿಯವರೆಗೆ ಹೊರಟು ಹೋಗಿದೆ ಎಂದರೆ, ಒಬ್ಬ ಚೀಫ್ ಸೆಕ್ರೆಟರಿ ಇರುವುದು ಬೇಡ ಒಂದೊಂದು ಜಾತಿಗೂ ಒಬ್ಬೊಬ್ಬರನ್ನು ಚೀಫ್ ಸೆಕ್ರೆಟರಿ ಇಡಿ ಅಂತ ವಿವರವಾಗಿ ಹೇಳಿದುದನ್ನು ನಾನಾದರೂ ನಿಜವಾಗಿಯೂ ಅದನ್ನು ಅರ್ಥ ಮಾಡಿಕೊಂಡ ಹಾಗೆ ಅವರು ಆಕ್ಷೇಪಣೆ ಮಾಡಿ ಹೇಳಿದ್ದಾರೆ, ಸದುದ್ದೇಶದಿಂದ ಹೇಳಿದ್ದು ಅಲ್ಲ. ಅದನ್ನು ನಮ್ಮ ದೇಶದಲ್ಲಿ ಯಾವ ರೀತಿಯ ಜಾತೀಯ ಡಿಸ್ಕ್ರಿಮಿನೇಷನ್ ಆಗುತ್ತಿವೆ ಎನ್ನುವ ಆಧಾರದ ಮೇಲೆ ಹೇಳಿದ್ದಾರೆಂದು ನಾನಾದರೂ ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಜಾತೀಯತೆ ಇದೆ, ಬಡತನವಿದೆ, ಭಾಷೆಯ ಭೇದಭಾವಗಳು ಇದ್ದಾವೆ. ಒಂದೊಂದು ಜಾತಿಯಲ್ಲಿಯೇ ನೂರಾರು ಪಂಗಡಗಳಿದ್ದಾವೆ. ರೋಣ ತಾಲ್ಲೂಕಿನವರಾದ ದಿವಂಗತ ದೊಡ್ಡಮೇಟಿಯವರು ನನಗೊಂದು ಸಾರಿ ಹೇಳಿದ್ದರು. He was one of the leaders in Karnataka in those days. ಅವರು ಲಿಂಗಾಯಿತ ಜಾತಿ ಒಂದರಲ್ಲಿಯೇ ಎಷ್ಟು ಪಂಗಡಗಳಿವೆ ಗೊತ್ತೇ ಅರಸರೇ, ಸುಮಾರು ೨೩೦೦ ಜಾತಿಗಳು ಇದ್ದಾವೆ ಎಂದು ಹೇಳುತ್ತಿದ್ದರು. ಬ್ರಾಹ್ಮಣರಲ್ಲೂ ಸಹ ಹಲವಾರು ಜಾತಿ ಪಂಗಡಗಳು ಇದ್ದಾವೆ. ನಮ್ಮಲ್ಲಿ ಒಂದೊಂದು ತರಹ ನಾಮ, ಕುಂಕುಮ ಹಚ್ಚಿಕೊಳ್ಳುವವರಿಗೂ ಒಂದೊಂದು ತರಹದ ಜಾತಿ ಇದೆ. ಬ್ರಾಡ್ ಲೈನ್‌ನಲ್ಲಿ ತೆಗೆದುಕೊಂಡರೂ ಅದರೊಳಗೂ ಎಷ್ಟೋ ಜಾತಿಗಳಿದ್ದಾವೆ. ಇಷ್ಟೆಲ್ಲಾ ಭೇದಭಾವ ಗಳು, ಅವಿದ್ಯೆ, ಅಜ್ಞಾನ ಇಷ್ಟೊಂದು ತಾಂಡವವಾಡುವುದರ ಜೊತೆಗೆ ಈಗಿರತಕ್ಕ ಸನ್ನಿವೇಶದಲ್ಲಿ ಅಲ್ಲ ೩೦ ವರ್ಷಗಳಿಂದಲೂ ಅಥವಾ ಅದಕ್ಕೂ ಹಿಂದಿನಿಂದಲೂ ಕೂಡ ಒಂದು ಕಡೆ ಒಳ್ಳೆಯ ಅನುಕೂಲ ವಾಗಿರತಕ್ಕ ಒಂದು ಮಟ್ಟದ ಜನ ಇದ್ದಾರೆ. ಇನ್ನೊಂದು ಕಡೆ ಸಣ್ಣ ವರ್ಗದ ಜನರಿದ್ದಾರೆ.

೧೧-೩೦ ಎ.ಎಂ.

ನಾನು ಜಾತಿಯ ಬಗ್ಗೆ ಹೇಳುತ್ತಾ ಇಲ್ಲ, ವರ್ಗದ ಮಾತನ್ನು ಹೇಳುತ್ತಿದ್ದೇನೆ, ಇನ್ನೊಂದು ಕಡೆ ತೀರ ಬಡತನದಲ್ಲಿ ಇರತಕ್ಕಂಥ ಇನ್ನೊಂದು ವರ್ಗ ಇದೆ. ಈ ಮಧ್ಯೆ ಕಡುಬಡತನದಿಂದ, ಅನ್ಯಾಯ ದಿಂದ ಉಂಟಾದಂಥ ಕೆಲವು ದೋಷಗಳು ಏನಿದೆ ಎಂದರೆ, ಬಡವರು ಹಣ ಇದ್ದವನಿಗೆ ಸಬ್‌ಸರ್ವೆಂಟ್ ಗಳಂತೆ ಅವರಿಗೆ ಅಧೀನರಾಗಿ ನಡೆದುಕೊಳ್ಳುವಂತಾಯಿತು, ಅವರ ಭೂಮಿ ಕೂಡ ಕೆಲವು ಜನರ ಪಾಲಾಯಿತು. ಅದರ ಜೊತೆಗೆ ಅವರ ಚರಾಸ್ತಿ ಕೆಲವು ಜನರ ಪಾಲಾಯಿತು. ನಮ್ಮ ದೇಶದಲ್ಲಿ ಯಂತ್ರ ಯುಗ ಪ್ರಾರಂಭವಾದ ಮೇಲೆ ಈ ಒಂದು ಅಂತರ ಜಾಸ್ತಿಯಾಗುತ್ತಾ ಇದೆ. ಒಂದು ಕಡೆ ಬಡತನ ಜಾಸ್ತಿಯಾಗುತ್ತಾ ಇದೆ, ಇನ್ನೊಂದು ಕಡೆ ಐಶ್ವರ್ಯವನ್ನು ಕೂಡಿಡತಕ್ಕಂಥಾದ್ದು ಜಾಸ್ತಿ ಯಾಗುತ್ತಾ ಇದೆ. ಇಂತಹ ಒಂದು ಸಮಾಜದಲ್ಲಿ ನಾವು ಕರಪ್ಷನ್ ವಿಚಾರವನ್ನು ಮಾತನಾಡು ತ್ತೇವೆ. ನಾವು ಈ ಕರಪ್ಷನ್ ವಿಚಾರವನ್ನು ಮಾತನಾಡುವುದಕ್ಕೆ ಹೊರಟರೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ನಾನು ಇದರ ಬಗ್ಗೆ ಇಲ್ಲಿ ವ್ಯಾಖ್ಯಾನ ಮಾಡುವುದಕ್ಕಾಗಿ ನಿಂತಿಲ್ಲ. ಆದರೂ ಆಫೀಸರ್ಸ್ ಕರಪ್ಟ್, ಅವರು ಕರಪ್ಟ್ ಇವರು, ಕರಪ್ಟ್ ಪೊಲಿಟೀಷಿಯನ್ಸ್ ಕರಪ್ಟ್ ಎಂದು ಮಾತನಾಡುತ್ತಾರೆ. ಕರಪ್ಷನ್ ಬಗ್ಗೆ ಮಾತನಾಡುವಾಗ ನಾನು ಕಂಡಂಥಒಂದು ಅಬ್‌ಸರ್ವೇಷನ್ ಏನು ಎಂದರೆ ಯಾರು ಕರಪ್ಷನ್ ಬಗ್ಗೆ ಮಾತನಾಡುತ್ತಾರೆ ಅವರನ್ನು ಬಿಟ್ಟು ಬಾಕಿಯವರು ಕರಪ್ಟ್

ಆಗಿರುತ್ತಾರೆ. ಇದನ್ನು ಮಾತನಾಡುವಾಗ ಹೇಳೋದು ಇಷ್ಟೆ. The man who talks about corruption criticises that all are corrupt except him. All are corrupt except him for the moment. ನಾನು ತಿಳಿಯುತ್ತೇನೆ ಇದರಲ್ಲಿ ತುಂಬಾ ಟೊಳ್ಳುವಾದ ಇದೆ. ಹಾಗಾದರೆ ದೇಶದಲ್ಲಿ ಕರಪ್ಷನ್ ಇಲ್ಲವೇ? ಎಂದು ತಾವು ಹೇಳಬಹುದು. ದೇಶದಲ್ಲಿ ಕರಪ್ಷನ್ ಇದೆ. ಅದು ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಕರಪ್ಷನ್ ಬಗ್ಗೆ ಮಾತನಾಡಿ ಮಾತನಾಡಿ ನಮ್ಮ ದೇಶವನ್ನು ಯಾವ ಸ್ಥಿತಿಗೆ ತಂದಿದ್ದಾರೆ ಎಂದರೆ, perhaps in this country there is no politician worth the name who is free from corruption. ಈ ಒಂದು ಸ್ಥಿತಿಗೆ ತಂದಿಟ್ಟಿದ್ದಾರೆ. ಚುನಾವಣೆಗೆ ಮುಂಚೆ ಕಾಂಗ್ರೆಸ್ ಪಾರ್ಟಿಯ ಮುಖಂಡರು ಕರಪ್ಟ್ ಎಂದು ವಾದ ಮಾಡಿದರು. ಇದರಲ್ಲಿ ಎಕ್ಸೆಪ್ಷನ್ಸ್ ಇದ್ದ ಹಾಗೆ ಕಾಣಲಿಲ್ಲ. ನಮ್ಮಲ್ಲಿ ಚುನಾವಣೆಯಾಗಿ ೧½ ವರ್ಷವಾಗಿದೆ. ಇದು ಏನಾಗಿದೆ ಎಂದರೆ, ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆಯಲ್ಲ "so wind reap whirl wind" ಆ ತರಹ ಈಗ ನಮ್ಮ ಮಾನ್ಯ ಮಿತ್ರರು ಒಬ್ಬರು ಅದರ ಫಲವನ್ನು ಅನುಭವಿಸುತ್ತಿದ್ದಾರೆ. ಆಗ ಅವರು ಕರಪ್ಟ್, ಇವರು ಕರಪ್ಟ್, ಕರ್ನಾಟಕದಲ್ಲಿರತಕ್ಕಂಥ ದೇವರಾಜ ಅರಸ್ ಮೋಸ್ಟ್ ಕರಪ್ಟ್ ಎಂದು ಪ್ರೈಮಿನಿಸ್ಟರ್‌ರವರು ಇಲ್ಲಿಗೆ ಬಂದಿದ್ದಾಗ ಹೇಳಿದರು. ಅದು ಪತ್ರಿಕೆಯಲ್ಲೂ ಸಹ ಬಂತು. ಈಗ ಅವರೇ ಅದರಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ; ಎಲ್ಲಾ ಸೇರಿಕೊಂಡು ಅವರನ್ನು ಹಿಡಿದು ಬಿಟ್ಟಿದ್ದಾರೆ, ಇವತ್ತು ಅವರೂ ಕರಪ್ಟ್ ಎನ್ನುವ ಸ್ಥಿತಿಗೆ ಬಂದಿದೆ. ಇದರಲ್ಲಿ ಸತ್ಯ ಇದೆಯೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ, ಈ ಕರಪ್ಷನ್ ಬಗ್ಗೆ ಮಾತನಾಡುವಾಗ ಯಾರಮೇಲಾದರೂ ಹೊಡೆಯುವುದಕ್ಕೆ ರಾಜಕೀಯದಲ್ಲಿ ಇನ್ನಾವ ಸ್ಟಿಕ್ ಸಿಕ್ಕುವುದಿಲ್ಲ. ಈ ಕರಪ್ಟ್ ಸ್ಟಿಕ್ ಹಿಡಿದುಕೊಂಡು ಯಾರ ಮೇಲಾದರೂ ಸುಲಭವಾಗಿ ಹೊಡೆಯಬಹುದು. ಈ ಕರಪ್ಷನ್ ವಿಚಾರದಲ್ಲಿ 'ಎ' ಬಂದು 'ಬಿ'ಗೆ ಹೇಳಿದ, 'ಬಿ' ಬಂದು 'ಸಿ'ಗೆ ಹೇಳಿದ, 'ಸಿ' ಬಂದು 'ಡಿ'ಗೆ ಹೇಳಿದ—ಈ ರೀತಿಯಲ್ಲಿ ಇದು ಹೋಗುತ್ತಾ ಇರುತ್ತದೆ. ಯಾವನೋ ಬಂದು ಹೇಳಿದ ಎಂಬ ಕಾರಣದಿಂದ ನಾವು ಇಲ್ಲಿ ಯಾರ ಮೇಲಾದರೂ ಮಾತನಾಡುವುದಕ್ಕೆ ಶುರು ಮಾಡಿಬಿಡುತ್ತೇವೆ. ಏಕೆಂದರೆ, ರಾಜಕೀಯದಲ್ಲಿ ಒಂದು ತತ್ವವನ್ನು ಅನುಸರಿಸಿ ಮಾತನಾಡುವುದಕ್ಕೆ ನಾವು ಅಭ್ಯಾಸ ಮಾಡಿಲ್ಲ. ಅದು ತಿಳಿಯುವುದಿಲ್ಲವೆಂದು ನಾವು ಅಭ್ಯಾಸ ಮಾಡುವುದಿಲ್ಲ, ಅಭ್ಯಾಸ ಮಾಡುವುದಕ್ಕೆ ನಮಗೆ ಟೈಮ್ ಇರುವುದಿಲ್ಲ. ಆದ್ದರಿಂದ ಯಾರು ಬೇಕಾದರೂ ಬಹಳ ಸುಲಭವಾಗಿ 'ಇವನು ಅಯೋಗ್ಯ, ಇವನು ಸೂಳೆ ಮನೆಗೆ ಹೋಗಿದ್ದ, ದುಡ್ಡು ತೆಗೆದುಕೊಂಡ, ಹಾಗೆ ಮಾಡಿದ, ಹೀಗೆ ಮಾಡಿದ' ಎಂದು ಹೇಳಬಹುದು. ಈ ರೀತಿ ಹೇಳುವುದಕ್ಕೆ ಯಾವ ಪುಸ್ತಕವನ್ನೂ ಓದಬೇಕಾಗಿಲ್ಲ, ಯಾವ ತತ್ವದ ಅಭ್ಯಾಸವನ್ನೂ ಮಾಡಬೇಕಾಗಿಲ್ಲ. ಯಾರು ಬೇಕಾದರೂ ಆ ರೀತಿ ಹೇಳಬಹುದು, ಒಬ್ಬ ಶಾಲೆಗೆ ಹೋಗದೆ ಇರತಕ್ಕಂಥ ಹುಡುಗನೂ ಸಹ ನಮಗಿಂತ ಚೆನ್ನಾಗಿ ಬೈಯುತ್ತಾನೆ. ಮಾರ್ಕೆಟ್ ಪ್ಲೇಸ್‌ನಲ್ಲಿರತಕ್ಕಂಥ ಒಬ್ಬ ಹುಡುಗನನ್ನು ಇಲ್ಲಿಗೆ ಕರೆದುಕೊಂಡು ಬಂದರೆ ನಮ್ಮ ಅಸೆಂಬ್ಲಿಯಲ್ಲಿ ಯಾರೂ ಅವನನ್ನು ಬೈಯ್ಯುವುದರಲ್ಲಿ ಮೀರಿಸುವುದಕ್ಕೆ ಆಗುವುದಿಲ್ಲ ಹೀಗೆ ಯಾರು ಏನನ್ನು ಬೇಕಾದರೂ ಹೇಳಬಹುದು. ಪೊಲಿಟೀಷಿಯನ್ಸ್ ಎಂದರೆ ಕರಪ್ಟ್ ಫೆಲೋಸ್ ಎಂದು ತೀರ್ಮಾನ ತೆಗೆದುಕೊಳ್ಳುವಂತಾಗಿದೆ. ಇದರ ಪರಿಣಾಮ ಏನಾಗಿದೆ, ಎಂದರೆ ಯಾರಿಗಾದರೂ ಕೂಡ ಈ ದೇಶವನ್ನು ಹತೋಟಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಭಾವನೆ ನಮಗೆ ಪದೇಪದೇ ತೋರುತ್ತದೆ. Whether I stay here or he stay here-What is the future of this country ? ಆ ರೀತಿ ಆದರೆ ನಮಗೂ ಇಲ್ಲಿ ಮರ್ಯಾದೆ ಇಲ್ಲ ಯಾರಿಗೂ ಮರ್ಯಾದೆಯಿಲ್ಲ ಈ ರಾಜಕೀಯದಲ್ಲಿ ಯಾರ ಮಾತನ್ನು ಯಾರೂ ಕೇಳುವ ಹಾಗೆ ಇಲ್ಲ, ಹಾಗೆ ಆಗುತ್ತದೆ. ಆಮೇಲೆ 'ನೀವು ಅಧಿಕಾರಿಗಳನ್ನು ಹತೋಟಿ ಮಾಡಲಿಲ್ಲ' ಎಂದು ಹೇಳುತ್ತಾರೆ. ಆ ರೀತಿ ಮಾತನಾಡಿದರೆ, ಯಾರನ್ನು ಹತೋಟಿ ಮಾಡುವುದು, ಹೇಗೆ ಹತೋಟಿ ಮಾಡುವುದು ಎಂಬುದು ಗೊತ್ತಾಗುವುದಿಲ್ಲ. Therefore, I appeal in all sincerety that this is not going to do good to this country. ಇಲ್ಲಿಂದೀಚೆಗೆ ನಾವು ಒಂದು ವಿಚಾರವನ್ನು ತಿಳಿದುಕೊಳ್ಳುವುದಾದರೆ, ಯಾವುದೇ ವಿಚಾರವನ್ನು ಸ್ವತಂತ್ರವಾಗಿ ಮಾತನಾಡಬೇಕಾದರೆ, ಅದರ ಪೂರ್ಣ ಮಾಹಿತಿ ಗೊತ್ತಿದ್ದರೆ, ಅದನ್ನು ಮಾತನಾಡಬೇಕಾದರೆ ಆಗ ಯಾವ ಪ್ರಾಸಸ್‌ನಿಂದ ಹೋಗಬೇಕು ಎನ್ನುವುದನ್ನು ನಾವು ತಿಳಿದುಕೊಂಡು ಮಾತನಾಡಬೇಕಾಗಿ ಬರುತ್ತದೆ. ಇಲ್ಲಿ ಲೋಕಾಯುಕ್ತ ಪ್ರಶ್ನೆ ಬಂದಾಗ We were first to bring that Lokayukt Bill here. ಆದರೆ ಏನಾಯಿತು ಎಂದರೆ ಕೇಂದ್ರ ಸರ್ಕಾರದವರು ಆ ಟೈಮ್‌ನಲ್ಲಿ 'ನಾವು ಎಲ್ಲರಿಗೂ ಸರಿಯಾಗತಕ್ಕಂಥ ಕಾನೂನನ್ನು ಮಾಡು

ತ್ತೇವೆ. ಎಲ್ಲರಿಗೂ ಅನ್ವಯವಾಗತಕ್ಕಂಥ ಯೂನಿಫಾರಂ ಬಿಲ್ಲನ್ನು ತಯಾರು ಮಾಡುತ್ತೇವೆ' ಎಂದು ಹೇಳಿದ್ದರಿಂದ ನಾವು ಅದನ್ನು ಕೈಬಿಡಬೇಕಾಯಿತು. ೧೯೭೭ನೇ ಇಸವಿಯಲ್ಲಿ ನಾನು ಮುಖ್ಯಮಂತ್ರಿಯಾದಮೇಲೆ ೬ ತಿಂಗಳು ಅಥವಾ ವರ್ಷದಲ್ಲಿ ಈ ಬಿಲ್ಲನ್ನು ತಯಾರು ಮಾಡಿಸಿದ್ದೆ. ಅದನ್ನು ಇಲ್ಲಿ ತರಬೇಕೆಂದು ಅನೇಕ ಮಾನ್ಯಸದಸ್ಯರಿಂದ ಸಲಹೆ ಬಂತು. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದಗೆ ಅದನ್ನು ಇಲ್ಲಿ ತರುವುದಕ್ಕೆ ಏತಕ್ಕೆ ಸಾಧ್ಯವಾಗಲಿಲ್ಲ ಎಂದರೆ ಕೇಂದ್ರ ಸರ್ಕಾರದವರು 'ಅದನ್ನು ನಾವೇ ಮಾಡುತ್ತಿದ್ದೇವೆ, ನೀವು ಅದನ್ನು ಮಾಡುವುದು ಬೇಡ' ಎಂದು ಹೇಳಿದ್ದರಿಂದ ಇಲ್ಲಿ ಅದನ್ನು ತರಲಾಗಲಿಲ್ಲ. ಈಗ ಮತ್ತೆ ಕೇಂದ್ರ ಸರ್ಕಾರದವರು ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಈ ಬಗ್ಗೆ ಪತ್ರಿಕೆಯಲ್ಲಿ ಬಂದಿಗತಕ್ಕಂಥ ವಿಚಾರವನ್ನು ನಾನು ಓದಿದ್ದೇನೆ. ಅವರು ಎಲ್ಲಾ ರಾಜ್ಯಗಳಿಗೂ ಲೋಕಾಯುಕ್ತ ಮತ್ತು ಲೋಕಪಾಲ ಬಿಲ್‌ಗಳ ಕರಡನ್ನು ಕಳಿಸಿಕೊಡುತ್ತಾರೆ ಎಂದು ಕಾಣುತ್ತದೆ. ಅದು ಬಂದಮೇಲೆ ನಾವು ಅದನ್ನು ಅಡಾಪ್ಟ್ ಮಾಡೋಣ. ಆಗ ಯಾರಮೇಲಾದರೂ ದೋಷಾರೋಪಣೆ ಇದ್ದರೆ, ಅದು ಸಾಬೀತು ಆದರೆ, ಅಂತಹವರು ಶಿಕ್ಷೆ ಅನುಭವಿಸುತ್ತಾರೆ. ಆ ದೋಷಾರೋಪಣೆ ಸಾಬೀತು ಆಗದಿದ್ದರೆ, ಯಾರು ದೋಷಾರೋಪಣೆ ಮಾಡಿದ್ದಾರೆ ಅವರಿಗೆ 'ವೈಲ್ಡ್ ಅಲಿಗೇಷನ್ಸ್ ಮಾಡಿದ್ದಾರೆ, ಅವರಿಗೆ ಶಿಕ್ಷೆ ಆಗಬೇಕು' ಎನ್ನತಕ್ಕಂಥ ಕಾನೂನನ್ನು ನಾವು ಮಾಡುತ್ತೇವೆ. ಆಗ ಎಲ್ಲವೂ ಸರಿಹೋಗುತ್ತದೆ. ಮಾನ್ಯ ವಿರೋಧಪಕ್ಷದ ಸದಸ್ಯರೆಲ್ಲರಿಗೂ ಅದು ಬೇಗಬರಲಿ ಎನ್ನತಕ್ಕಂಥ ಕುತೂಹಲ ಇದೆ ಎಂದು ಕಾಣುತ್ತದೆ. ಅವರಿಗಿಂತ ಹೆಚ್ಚಾಗಿ ನನಗೆ ಅದರ ಬಗ್ಗೆ ಕುತೂಹಲ ಇದೆ. ಅದು ಆದಷ್ಟು ಬೇಗ ಬರಲಿ ಎಂದು ಹೇಳುತ್ತೇನೆ, ಕೇಂದ್ರಸರ್ಕಾರದವರು ಅದನ್ನು ಎಷ್ಟು ಬೇಗ ನಮಗೆ ಕಳಿಸುತ್ತಾರೋ ಅಷ್ಟೇ ಬೇಗ ನಾವು ಅದನ್ನು ಅಡಾಪ್ಟ್ ಮಾಡೋಣ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಅಧಿಕಾರಿಗಳನ್ನೇ ಆಗಲಿ, ಮತ್ತೊಬ್ಬರನ್ನೇ ಆಗಲಿ, ಎಲ್ಲರನ್ನೂ ಕರಪ್ಷನ್ ಎನ್ನತಕ್ಕಂಥ ಒಂದೇ ಬ್ರಷ್‌ನಿಂದ ಬಣ್ಣ ಬಳಿದು ಬಿಟ್ಟರೆ ಅದು ಅಷ್ಟು ಸಮಂಜಸವೆನಿಸುವುದಿಲ್ಲ. ಬ್ಯೂರೋಕ್ರಾಟಿಕ್ ಸಿಸ್ಟಂ ಎಂದು ಹೇಳತಕ್ಕಂಥಾದ್ದು ಬ್ರಿಟೀಷರ ಕಾಲದಿಂದ ಬಂತು. ಅದೂ ಬೇಡ, ಅವರನ್ನೆಲ್ಲಾ ತೆಗೆದುಹಾಕಿಬಿಡೋಣ ಎಂದರೆ ಅದರ ಜಾಗಕ್ಕೆ ಯಾರನ್ನು ತರುತ್ತೀರಿ? ಎಲ್ಲಿಂದ ತರುತ್ತೀರಿ? ಮಾನ್ಯ ಸದಸ್ಯರಾದ ರಾಜಶೇಖರ್‌ರವರು ಅವರೆಲ್ಲರೂ ನಮ್ಮ ಅಣ್ಣತಮ್ಮಂದಿರು ಎಂದು ಹೇಳಿದರು. They come from the same family, Same caste and same group. ಯಾವನೋ ಒಬ್ಬ ಅಧಿಕಾರಿ ಸರಿಯಲ್ಲ ಎಂದು ಅವನ ಮೇಲೆ ದೋಷಾರೋಪಣೆ ಬಂದರೆ, ಅದನ್ನು ಮಾತನಾಡಿದ ಕೂಡಲೇ ಅವನು ತಮ್ಮ ಜಾತಿಯವರ ಹತ್ತಿರ ಹೋಗುತ್ತಾನೆ. ಯಾರ್ಯಾರು ಅವರ ಜಾತಿ ಮೆಂಬರ್ಸ್ ಇರುತ್ತಾರೆ ಅವರ ಹತ್ತಿರ ಹೋಗಿ 'ಇವನು ಒಳ್ಳೆಯವನು, ಯಾರೋ ಬೇರೆ ಜಾತಿಯವನು ಹೀಗೆ ಮಾಡಿದ್ದಾನೆ' ಎಂದು ಬರೆಸಿಕೊಂಡು ಬರುತ್ತಾನೆ. ಎಷ್ಟೋ ಜನ ಹೀಗೆ ಬರೆಯುತ್ತಾರೆ. ಅದನ್ನೆಲ್ಲಾ ಇಲ್ಲಿ ತರುವ ಅಗತ್ಯವಿಲ್ಲ.

ನಾನು ನಿಮ್ಮ ಇಷ್ಟಕ್ಕೆ ವಿರುದ್ಧವಾಗಿ ಹೇಳುತ್ತಿದ್ದೇನೆಂದು ತಿಳಿಯಬೇಡಿ. ನಾನು ಯಾರನ್ನೂ ಆಕ್ಷೇಪಣೆ ಮಾಡಬೇಕೆಂದು ಹೇಳುತ್ತಿಲ್ಲ. The reality of the situation ಅನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಒಂದು ಕಡೆ ಅಧಿಕಾರಿಗಳು ತಪ್ಪು ಮಾಡಿದರೆ ಶಿಕ್ಷೆ ಮಾಡಬೇಕೆಂಬುದು ಒಂದು ವಾದ, ಆದರೆ ಕೃತಿಯಲ್ಲಿ ಬೇರೆ, ನಮ್ಮ ಜಾತಿಯವರನ್ನು ಬಿಟ್ಟು ಬೇರೆ ಯಾರನ್ನಾದರೂ ಮಾಡಿ ಎಂಬುದಾಗಿ ಹೇಳಿದಹಾಗೆ ಆಯಿತು. ಹಾಗಾದರೆ ಅಧಿಕಾರಿಗಳದ್ದು ಏನು ತಪ್ಪೆಂದು ನಾನು ಕೇಳುತ್ತೇನೆ? ಕೆಲವು ಸದಸ್ಯರು ಇಂತಹ ಅಧಿಕಾರಿ ಸರಿಯಲ್ಲ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂಬುದಾಗಿ ಹೇಳುತ್ತಾರೆ ಇರಬಹುದು. ಅವರು ಹೇಳುತ್ತಿರುವುದರಲ್ಲಿ ಸರಿಯಿದೆಯೋ ತಪ್ಪೋ, ಸುಳ್ಳೋ–ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಒಂದು ಕಡೆ ಒಬ್ಬ ಅಧಿಕಾರಿ ತಾಲ್ಲೂಕು ಮಟ್ಟದಲ್ಲಿ ದುರ್ನಡತೆಯಿಂದ ನಡೆದುಕೊಂಡಿರಬಹುದು, ಕೆಲಸಕ್ಕೆ ಹೋದಾಗ ಹಣ ಕೇಳುತ್ತಾನೆ, ಹಣವನ್ನು ತೆಗೆದುಕೊಳ್ಳದೆ ಕೆಲಸ ಮಾಡುವುದಿಲ್ಲ, ಅವರನ್ನು ವರ್ಗ ಮಾಡಿ ಎಂಬುದಾಗಿ ಹೇಳುತ್ತಾರೆ, ಆಯಿತು. ಮತ್ತೊಂದು ಸಂದರ್ಭದಲ್ಲಿ ಚುನಾವಣೆ ಸಮಯದಲ್ಲಿ ಇಂತಹ ಅಧಿಕಾರಿ ನನಗೆ ವಿರುದ್ಧವಾಗಿ ಕೆಲಸ ಮಾಡಿದ್ದಾನೆ, ಅವರನ್ನು ವರ್ಗ ಮಾಡಿ ಎಂಬುದಾಗಿ ಹೇಳುತ್ತಾರೆ, ಆ ಅಧಿಕಾರಿ ನಮ್ಮ ಪಾರ್ಟಿಗೆ ವಿರುದ್ಧವಾಗಿ ಕೆಲಸ ಮಾಡಿದ್ದರೆ ನಿಮ್ಮ ಪಾರ್ಟಿಗೆ ಅನುಕೂಲವಾಗಿ ಕೆಲಸ ಮಾಡಿರುತ್ತಾರೆ. ಅಥವಾ ನಿಮ್ಮ ಪಾರ್ಟಿಗೆ ವಿರುದ್ಧವಾಗಿ ಕೆಲಸ ಮಾಡಿದ್ದರೆ, ನಮ್ಮ ಪಾರ್ಟಿಗೆ ಅನುಕೂಲವಾಗಿ ಕೆಲಸ ಮಾಡಿರುತ್ತಾರೆ. ಅದರ ಬಗ್ಗೆ ನಾನು ನಿಮ್ಮಲ್ಲಿ ಕೇಳುತ್ತೇನೆ. ಏನೆಂದರೆ ನಾವೆಲ್ಲರೂ ಒಂದೇ ಒಂದು ತತ್ವದ ಮೇಲೆ ನಿಲ್ಲೋಣ ಅಧಿಕಾರಿಗಳು ಯಾವ ಪಾರ್ಟಿಗಾದರೂ ವಿರುದ್ಧವಾಗಿ ಅಥವಾ ಅನುಕೂಲವಾಗಿ ಕೆಲಸಮಾಡಿದ್ದರೆ

ಅವನು ಒಬ್ಬ ಅಯೋಗ್ಯ ಎನ್ನುವುದು ನನ್ನ ತೀರ್ಮಾನ. ಅದನ್ನು ನೀವು ಮಾತಿನಲ್ಲಿ ಒಪ್ಪುತ್ತೀರಿ. ಆದರೆ ಕೃತಿಯಲ್ಲಿ ಬೇರೆ. ಅದೇ ಬಂದಿರುವುದು ನಮಗೆ ಕಷ್ಟ. ಆದ್ದರಿಂದ ಈ ಬಗ್ಗೆ ನಾನು ತಮಗೆ ತಿಳಿಸುವುದೇನೆಂದರೆ, ಯಾವ ಅಧಿಕಾರಿಗಳನ್ನು ನೆಚ್ಚಿಕೊಂಡು ನಾವು ಚುನಾವಣೆಗೆ ನಿಲ್ಲಬೇಕಾದುದಿಲ್ಲ. ನಮಗೆ ಯೋಗ್ಯತೆ ಇದ್ದರೆ ಬರುತ್ತೇವೆ, ಇಲ್ಲದಿದ್ದರೆ ಹೋಗುತ್ತೇವೆ. ಅಧಿಕಾರಿಗಳನ್ನು ನೆಚ್ಚಿಕೊಂಡು ಚುನಾವಣೆ ನಡೆಸುವುದಕ್ಕಾಗುವುದಿಲ್ಲ. ಕೆಲವರು ಅಧಿಕಾರಿಗಳನ್ನು ನೆಚ್ಚಿಕೊಂಡಿದ್ದವರು ಸೋತೇ ಹೋದರು. ಅದನ್ನೇ ಕೆಲವು ಅಧಿಕಾರಿಗಳು ದುರುಪಯೋಗ ಮಾಡಿಕೊಂಡು ನಾನು ಇಂತಹವರಿಗೆ ಸಹಾಯ ಮಾಡಿದ್ದೇನೆ, ಆದ್ದರಿಂದ ನಾನು ಏನು ತಪ್ಪು ಮಾಡಿದರೂ ನನಗೆ ರಕ್ಷಣೆ ಕೊಡುವವರು ಇದ್ದಾರೆ ಅನ್ನತಕ್ಕಂಥ ಮನೋಭಾವನೆ ಕೆಲವರಲ್ಲಿ ಮೂಡಿದೆ. ಇದಕ್ಕೆ ಯಾರು ಕಾರಣರು ಎಂಬುದರ ಬಗ್ಗೆ ನಾವೇ ಪ್ರಶ್ನೆ ಹಾಕಿಕೊಳ್ಳೋಣ. ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ, ಅತನು ದುರ್ನಡತೆಯಿಂದ ನಡೆಯುತ್ತಿದ್ದಾನೆ, ಕೆಟ್ಟವನು ಇದ್ದಾನೆಂದು ತಾವು ಏನು ಹೇಳುತ್ತೀರಿ, ಆ ಬಗ್ಗೆ ನಾನು ನಿಮ್ಮಲ್ಲಿ ಕೇಳುತ್ತೇನೆ. ಅವನು ಕೆಟ್ಟವನು ಎಂಬುದನ್ನು ಸಾಬೀತು ಮಾಡುವುದಕ್ಕೆ, ಮಾಹಿತಿಯನ್ನು ದೊರಕಿಸಿಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡಬೇಕು. ಅದಕ್ಕಾಗಿ ವಿಜಿಲೆನ್ಸ್ ಸೆಲ್ ಇದೆ. ಸಿ.ಒ.ಡಿ. ಇದೆ. ತಮ್ಮಲ್ಲಿ ನಾನು ಇಂದು ಭರವಸೆಯನ್ನು ನೀಡುತ್ತಿದ್ದೇನೆ, ಅವರು ಯಾರೇ ಆಗಿರಲಿ ದೂರು ಇದ್ದರೆ ಅವರ ಬಗ್ಗೆ ವಿಚಾರಣೆಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ, ಅದರಲ್ಲಿ ಧರ್ಮ ಇದೆ, ವಿಚಾರಣೆ ಮಾಡಿ ಅವರು ತಪ್ಪಿತಸ್ಥರಾಗಿದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸೋಣ. ಆ ರೀತಿ ಎಷ್ಟೋ ಅಧಿಕಾರಿಗಳನ್ನು ಕಂಪಲ್ಸರಿ ರಿಟೈರ್ ಮಾಡಿದ್ದೇವೆ, ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿದ್ದೇವೆ. ಕೆಲವೊಮ್ಮೆ ಡಿಸ್‌ಮಿಸ್ ಕೂಡ ಮಾಡಿದ್ದೇವೆ. ಮತ್ತೆ ರೂಲ್ 310ರ ಬಗ್ಗೆ ಮಾನ್ಯ ಸದಸ್ಯರು ಬಹಳ ವ್ಯಾಖ್ಯಾನ ಮಾಡಿದರು. ಹಾಗಾದರೆ ನಿಮಗೆ ದಕ್ಷತೆ ಕಾರ್ಯಸಾಮರ್ಥ್ಯನೆ ನಿಮಗೆ ಬೇಡವೇ? ಇದನ್ನು ದುರುದ್ದೇಶದಿಂದ ಮಾಡಿದರು, ಇದರಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್, ಮುಸ್ಲಿಮ್ಸ್ ಮತ್ತು ಹರಿಜನ-ಗಿರಿಜನರು ಹೆಚ್ಚಿಗೆ ಶಿಕ್ಷೆಯನ್ನು ಅನುಭವಿಸಿದ್ದಾರೆ ಎಂಬುದಾಗಿ ಏನು ಹೇಳುತ್ತಿದ್ದಾರೆ, that itself is not a correct way of stating things ಇದರಲ್ಲಿ ಬೇರೆಯವರೂ ಶಿಕ್ಷೆಯನ್ನು ಅನುಭವಿಸಿದ್ದಾರೆ. ಹೆಚ್ಚು ಜನ ಈ ವರ್ಗಕ್ಕೆ ಸೇರಿದವರು ಇರಬಹುದು. ದುರುದ್ದೇಶದಿಂದ ಇದನ್ನೆಲ್ಲಾ ಮಾಡಿದ್ದಾರೆಂದು ಒಂದೇ ಮಾತಿನಲ್ಲಿ ಹೇಳುವುದಾದರೆ, ಇದರಿಂದ ಯಾರಿಗೂ ಸಹಾಯವಾಗುವುದಿಲ್ಲ. ಹಾಗಾದರೆ ರೂಲ್ಸ್ ಬೇಡ ಮತ್ತೆ ಕಾರ್ಯಸಾಮರ್ಥ್ಯನೆಯ ಬಗ್ಗೆ ವಿಚಾರವನ್ನು ಮಾತನಾಡುವುದೂ ಬೇಡ. Why should we think of efficiency? What is efficiency? How to measure it. Where is the measuring rod. Therefore, don't think of efficiency at all; Do away with efficiency. ಬೇಡ ಎಂಬುದಾಗಿ ಹೇಳಿದರೆ, ಅವನಿಗೆ ಬುದ್ಧಿ ಇಲ್ಲದಿದ್ದರೂ, ಪೇಪರ್ಸ್‌ನ್ನೂ ನೋಡುವುದಕ್ಕೆ ಬರದಿದ್ದರೂ, ಅವನು ನನ್ನ ಜಾತಿಯವನು ಎಂದು ಸೋಮಾರಿಯಾಗಿ ಕುಳಿತುಕೊಂಡು ಇರುತ್ತಾನೆಂದು ಹೇಳಿದರೆ ಆದರಿಂದ ಸಾರ್ವಜನಿಕ ಕೆಲಸಗಳಿಗೆ ಧಕ್ಕೆ ಬರಲಿಲ್ಲವೇ? then why do you ask for efficiency in administration? You want efficiency Chief Minister or Minister or you want efficient administration also? How can the Chief Minister be efficient unless he has a mechinery which is efficient. Therefore ಸುಮ್ಮನೆ efficiency ಬೇಕು ಅಂದರೆ that is not the remedy; ನಾಳೆ ಯಾವರೀತಿ ಮಾಡಬೇಕೆಂಬುದನ್ನು ಹೇಳಿ. ನನಗೆ ಯಾವುದೇ ವಿಷಯದ ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ ಅಂದಮೇಲೆ ಕಾರ್ಯಸಾಮರ್ಥ್ಯನೆ ವಿಚಾರ ತೆಗೆದುಕೊಂಡು ಹೊರಟು ಬಿಟ್ಟರೆ ಆಯಿತು, ಮತ್ತೆ BUREAUCRATIC Administration ಬ್ರಿಟಿಷರ ಕಾಲದಲ್ಲಿ ಬಂತು, ನಿಜ. ಬ್ರಿಟಿಷರ ಕಾಲದಿಂದ ಬಂದಿರತಕ್ಕಂಥಾದ್ದು ಕೆಟ್ಟದ್ದೆ? ಅವರು ಬಂದಿದ್ದರಿಂದ ನಾವು ಇಂಗ್ಲೀಷ್ ಕಲಿತುಕೊಂಡಿದ್ದೇವೆ. To-day, it is an international language. We also want it, ಯಾರೋ ಒಬ್ಬ ಮಾನ್ಯ ಸದಸ್ಯರು ಇಂಗ್ಲೀಷ್ ಬೇಡ ಎಂಬುದಾಗಿ ಹೇಳುತ್ತಿದ್ದರು. ಅವರು ಇನ್ನೂ I think he is living not in Twentieth Century; somewhare in the 15th century. ಇಂಗ್ಲೀಷ್ ಬೇಕು. ನಮ್ಮ ಭಾಷೆಯೂ ಬೇಕು, ಆ ಮಾತು ಬೇರೆ. ಅದನ್ನು ಪ್ರಚಾರ ಮಾಡುವುದಕ್ಕೆ ನಾನು ಪ್ರಯತ್ನ ಮಾಡಿಲ್ಲ. The system of Administration, the Britisher did develop. We have found it to be really efficient generally speaking, atleast.

Political weather. ನಾವೆಲ್ಲರೂ ಎಷ್ಟೋಷ್ಟೋ ತೀರ್ಮಾನ ಮಾಡುತ್ತೇವೆ. ರಾಜಕೀಯದಲ್ಲಿ ಯಾರ್ಯಾರು ಯಾವ ಯಾವ ಸ್ಥಾನಕ್ಕೆ ಬರುತ್ತಾರೆ, ಅವರು ಹೋಗುತ್ತಾರೆ ಹಾಗಿದ್ದರೂ ಅಡ್ಮಿನಿಸ್ಟ್ರೇಟಿವ್ ಸಿಸ್ಟಂ ಮಾತ್ರ ಸ್ವಲ್ಪಮಟ್ಟಿಗೆ ಉರುಳಿಕೊಂಡು ಬರುತ್ತಿದೆ. ಕೆಲಸ ಕಾರ್ಯಗಳಾಗುತ್ತಿವೆ. ನಮ್ಮಲ್ಲಿರ ತಕ್ಕಂಥ ಲೋಪದೋಷಗಳನ್ನು ನಾವು ತಿದ್ದಿಕೊಳ್ಳದೆ ನಮ್ಮ ಅಧಿಕಾರಿಗಳಮೇಲೆ ಅವರು ಏನು ಹೇಳಿದರೂ ಕೇಳುತ್ತಾರೆಂದು ಅವರ ಮೇಲೆ ಬಿದ್ದರೆ ಹೇಗೆ? ನನಗೆ ಒಂದು ಗಾದೆ ನೆನಪಿಗೆ ಬರುತ್ತಿದೆ. 'ಕುಣಿಲಾರದ ಸೂಳೆ ಜಾಗ ಚೆನ್ನಾಗಿ ಇಲ್ಲ' ಎಂಬುದಾಗಿ ಹೇಳಿದಳಂತೆ. ಹಾಗೆ ಹೇಳಿದಂತಾಗುತ್ತದೆ. Bureaucracy itself is bad ಎಂಬುದಾಗಿ ಹೇಳಿದರು. ಅದು ಸರಿಯಲ್ಲ. ಅದೂ ನಮ್ಮಲ್ಲೇ ಇರತಕ್ಕಂಥ ಸಿಸ್ಟಂ. ಪ್ರಪಂಚದಲ್ಲಿರತಕ್ಕಂಥಾದ್ದೆ. ಅದನ್ನು ಯಾರೂ ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಅಮೇರಿಕಾದ ಸಿಸ್ಟಂನ್ನೇ ತೆಗೆದುಕೊಳ್ಳಿ, ಅಮೇರಿಕಾದಲ್ಲಿ ಅಧ್ಯಕ್ಷರು ಬಂದಾಗ ಅವರಿಗೆ ಯಾರ್ಯಾರು ಬೇಕೋ ಅವರನ್ನು ನೇಮಿಸುತ್ತಾರೆ. ಅವರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ಆ ಅಧಿಕಾರಿಗಳು ಇರುತ್ತಾರೆ. ಆಮೇಲೆ ಹೊರಟು ಹೋಗುತ್ತಾರೆ. Are you willing to adopt that? ಅದು ಇದಕ್ಕಿಂತ ಅದ್ವಾನ ಆಗುತ್ತದೆ. ಅದನ್ನು ತಾವು ಯೋಚನೆ ಮಾಡಬೇಕು. Supposing I start appointing all my caste people, what will happen?

SRI J.H. PATEL.—To a very great extent, it is being done.

SRI D. DEVARAJA URS.—There, it is still worse. ಕೇವಲ bureaucracy ಕೆಟ್ಟು ಹೋಗಿದೆ ಎನ್ನತಕ್ಕಂಥ ಮಾತಿಗಿಂತ, ನಾನು ಹೇಳುತ್ತೇನೆ, ಎಲ್ಲಿ ಕೆಟ್ಟಿದೆ ಎನ್ನುವುದನ್ನು ಸಾಬೀತು ಮಾಡಬೇಕು. Always by comparison, we understand things. ಮತ್ತು ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿ ಹೇಳಬೇಕು. ಹಾಗೆ ನಮ್ಮ ಅಡ್ಮಿನಿಸ್ಟ್ರೇಷನ್‌ನ್ನು ಕಂಪೇರ್ ಮಾಡಿ ಹೇಳುವುದಾದರೆ, ನಮ್ಮ ಕರ್ನಾಟಕ ರಾಜ್ಯದ ಅಡ್ಮಿನಿಸ್ಟ್ರೇಟೀವ್ ಸರ್ವೀಸ್ ಏನಿದೆ ಅದು by and large ಇಡೀ ಭಾರತದಲ್ಲಿ ಬೇರೆ ಯಾವ ರಾಜ್ಯಕಿಂತ ಕಡಿಮೆ ಇಲ್ಲ. ಒಂದು ತೂಕ ಜಾಸ್ತಿ ಇದೆ. ಹಾಗೆ ಹೇಳುವಾಗ ಮುಖ್ಯ ಮಂತ್ರಿಗಳು ಆಧಾರ ರಹಿತವಾಗಿ ಹೇಳುತ್ತಿದ್ದಾರೆಂದು ಮಾನ್ಯ ಸದಸ್ಯರು ತಿಳಿಯಬಹುದು. ಇಲ್ಲ ಸ್ವಾಮಿ, ನಾನು ಆಧಾರದಿಂದ ಹೇಳುತ್ತಿದ್ದೇನೆ. ನಾನು ಅಡ್ಮಿನಿಸ್ಟ್ರೇಟಿವ್ ವಿಚಾರವನ್ನು ಇವತ್ತಿನಿಂದ ನೋಡುತ್ತಿಲ್ಲ. ಸುಮಾರು ೩೫ ವರ್ಷಗಳಿಂದಲೂ ನೋಡುತ್ತಿದ್ದೇನೆ. ಯಾವ ರೀತಿ ಚೆನ್ನಾಗಿ ಇದೆ ಎಂಬುದನ್ನು ಅಳತೆಗೋಲು ಇಟ್ಟು ಅಳೆಯುವುದಕ್ಕೆ ಸಾಧ್ಯವಿಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೆಲಸ ಕಾರ್ಯಗಳು ಆಗಿವೆ. ನಾವು ಕಳೆದ ೬ ವರ್ಷಗಳಿಂದ ಕೆಲವು ಕಾರ್ಯಕ್ರಮಗಳನ್ನು ಯಾವ ರೀತಿ ಮಾಡಿಕೊಂಡು ಬಂದಿದ್ದೇವೆಂಬುದನ್ನು ಕಂಪೇರ್ ಮಾಡಿ ನೋಡಿ. ಇಲ್ಲಿ ಆಡಳಿತ ಯಂತ್ರ ಅಷ್ಟು ಕೆಟ್ಟು ಹೋಗಿದ್ದ ಪಕ್ಷದಲ್ಲಿ ಭೂಸುಧಾರಣೆಯನ್ನು ಇಷ್ಟೊಂದು ಜಾರಿಗೆ ತರುವುದಕ್ಕೆ ಆಗುತ್ತಿರಲಿಲ್ಲ, ಇಷ್ಟೊಂದು ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಇಷ್ಟೊಂದು ಮನೆ ನಿವೇಶನಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಇಷ್ಟೊಂದು ಸಾಲ ಹಂಚುವುದಕ್ಕೆ, ಭೂಮಿ ಹಂಚುವುದಕ್ಕೆ, ಕೆರೆಕಟ್ಟೆಗಳನ್ನು ಕಟ್ಟಿ ಇಷ್ಟೊಂದು ಸಂಖ್ಯೆಯಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಪ್ರಾಜೆಕ್ಟ್‌ಗಳ ಬಗ್ಗೆ ನಾನು ಹೇಳಬೇಕಾಗಿತ್ತು. ಆದರೆ ನನಗೆ ಟೈಮ್ ಇಲ್ಲ. ಒಂದೊಂದು ಪ್ರಾಜೆಕ್ಟನ್ನೂ ತೆಗೆದುಕೊಂಡು ಅದರ ಗತಿ ಏನಾಗಿದೆ ಎಂಬುದನ್ನು ಹೇಳಬೇಕೆಂದಿದ್ದೆನು. ಆದರೆ ಟೀಕೆ ಮಾಡುವುದು ನ್ಯಾಯವಲ್ಲ ಎಂಬುದಾಗಿ ತಿಳಿದು ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡಾಗ You have to take the overall, what we call implementation, over all progress. ಇದರಿಂದ ನನಗೆ ಅರ್ಥವಾದಹಾಗೆ ಇವನ್ನೆಲ್ಲಾ ತೆಗೆದುಕೊಂಡು ಬಿಟ್ಟರೆ ಕ್ರಿಟಿಸಿಸಂ ಮಾಡುವುದಕಾಗುವುದಿಲ್ಲ, ಸುಮ್ಮನೆ ಮಾತನಾಡಿ ಎಂಬುದಾಗಿ ಹೇಳಿದಹಾಗಾಯಿತು. ಕೊಟ್ಟಿರುವ ಮಾಹಿತಿಯನ್ನು ದಯಮಾಡಿ ಓದಿ ನೋಡಿ. ಸುಮ್ಮನೆ ಮಾತನಾಡಿದರೆ ಏನು ಪ್ರಯೋಜನ? You need not take trouble now. I am going to give you all the figures. ಈ ದೃಷ್ಟಿಯಿಂದ ಒಂದು ವಿಷಯ ಹೇಳುತ್ತೇನೆ, ಏನೆಂದರೆ, ಇಂಪ್ಲಿಮೆಂಟೇಷನ್ ಚೆನ್ನಾಗಿದೆ ಎಂದರೆ, I would like to share the credit with all of you. Not only with the administrative services or the servants even with the politicians and the Members of this Honourable House as well as

other House. ನಿಮ್ಮೆಲ್ಲರ ಸಹಕಾರವೂ ಇತ್ತು. ಇಲ್ಲವೆಂದು ನಾನು ಹೇಳುವುದಿಲ್ಲ. ಈ ಮೊದಲು ನಾವು ಯಾವುದೇ ಒಂದು ಹೊಸ ಕಾನೂನನ್ನು ಮಾಡುವುದಕ್ಕೆ ಹೊರಟಾಗ ಅಂದರೆ ಸಾಮಾನ್ಯ ಜನರಿಗೆ ಒಳ್ಳೆಯದಾಗುತ್ತದೆಂದು ನಮಗೆ ತಿಳಿದುಬಂದಾಗ, ಅದಕ್ಕೆ ಸಂಬಂಧಪಟ್ಟ ಪ್ರಗತಿದಾಯಕ ವಾದಂಥ ಬಿಲ್‍ನ್ನು ಈ ಸಭೆಯ ಮುಂದೆ ತಂದಾಗ ಆಗ ವಿರೋಧಪಕ್ಷದ ನಾಯಕರಾಗಿದ್ದ ಶ್ರೀ ದೇವೇಗೌಡರು ಮತ್ತು ಇತರೇ ವಿರೋಧಿ ಸದಸ್ಯರು ಬೆಂಬಲ ಕೊಟ್ಟರು. ಯಾರೂ ವಿರೋಧ ಮಾಡಲಿಲ್ಲ. ಭೂಸುಧಾರಣಾ ಕಾನೂನನ್ನು ಈ ಸಭೆಯಲ್ಲಿ ಮಂಡಿಸಿದಾಗ it was unanimously passed in this House. I am trying to compliment and share whatever the credit we have earned all along as a whole. ಈ ಒಂದು ಇಂಪ್ಲಿಮೆಂಟೇಷನ್ ವಿರೋಧಪಕ್ಷದವರ ಸಹಕಾರದಿಂದ ಮತ್ತು ಸಹಾಯದಿಂದ ಆಗಿದೆ ಎಂದು ಹೇಳುವ ಸೌಜನ್ಯ ನನಗಿದೆ. ಅನವಶ್ಯಕ ಇಂಟರ್‌ಫಿಯರೆನ್ಸ್ ಮಾಡುವುದು ಯಾರಿಗೂ ಒಳ್ಳೆಯದಲ್ಲ. ಆಡಳಿತದ ಮಟ್ಟ ಇನ್ನೂ ಉತ್ತಮವಾಗಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಏನೂ ಕೆಲಸವಾಗಿಲ್ಲ, ಎಲ್ಲವೂ ಕೆಟ್ಟು ಹೋಗಿದೆ ಎಂದುಕೊಂಡು ಎಲ್ಲರನ್ನೂ ಹೊಡೆಯುವುದಕ್ಕೆ ಹೋದರೆ ಆಗ, ಆಗತಕ್ಕಂಥ ಕೆಲಸಗಳೂ ಸಹ ಆಗುವುದಿಲ್ಲ. ಅದು ಚಂಡಿ ಕಥೆಯಂತೆ ಆಗುತ್ತದೆ. ಅದರಿಂದ ಏನು ಲಾಭ? ಈ ಬಗ್ಗೆ ನಾವು ಬೇರೆ ಒಂದು ಹೊಸ ಸೆಟ್-ಅಪ್ ತರುತ್ತೇವೆಂದು ಆಲೋಚನೆ ಮಾಡುವುದಾದರೆ, I have not been able to understand that new setup. I.A.S., I.C.S., I.P.S., ಈ ಕೇಡರ್‌ಗಳಲ್ಲಿ ನಮ್ಮ ಜಾತಿಯವರು ಬರಲಿಲ್ಲವೆಂಬ ಕಾರಣದಿಂದಲೇ ಎಲ್ಲವೂ ಚನ್ನಾಗಿ ನಡೆಯುತ್ತಿಲ್ಲ ವೆಂದು ಹೇಳುವುದು ಬೇಡ. ಕೆಲವು ಜಾತಿಗಳಿಂದ ಬರದಿದ್ದರೆ ಬರುವಂತೆ ಮಾಡಲು ಪ್ರಯತ್ನ ಮಾಡೋಣ. ಎಲ್ಲ ಕಾಲಕ್ಕೂ ಇದೇರೀತಿ ಇರುವುದಿಲ್ಲ. ಹಾಗೆ ನೋಡಿದರೆ ಒಂದು ಕಾಲಕ್ಕೆ ಬ್ರಾಹ್ಮಣರೇ ಬುದ್ಧಿವಂತರೆಂದು ಹೇಳುತ್ತಿದ್ದರು. ಆದರೆ ಇಂದು ಬ್ರಾಹ್ಮಣರನ್ನು ಮೀರಿಸುವಂತಹ ಜನರು ಬೇರೆ ಜಾತಿಗಳಿಂದ ಬರುತ್ತಿದ್ದಾರೆ. ಈ ಮೊದಲು ಬಿ.ಎ., ಬಿ.ಎಸ್.ಸಿ. ಮುಂತಾದ ಪರೀಕ್ಷೆ ಗಳಲ್ಲಿ ಶೇಕಡಾ ೯೦ರಷ್ಟು ಬ್ರಾಹ್ಮಣರೇ ತೇರ್ಗಡೆಯಾಗುತ್ತಿದ್ದರು. ನಾನ್-ಬ್ರಾಹ್ಮಿನ್ಸ್ ಮುಂದೆ ಬರುತ್ತಿಲ್ಲವೆಂದು ಹೇಳುವ ಕಾಲವೂ ಇತ್ತು. ಆದರೆ ಇಂದು ಬ್ರಾಹ್ಮಣರನ್ನೂ ಮೀರಿಸುವಂತಹವರು ಲಿಂಗಾಯಿತರಲ್ಲಿ, ಒಕ್ಕಲಿಗರಲ್ಲಿ ಇದ್ದಾರೆ. ಹರಿಜನರಲ್ಲಿ ಈಗ ಇಲ್ಲದಿರಬಹುದು, ಒಂದು ಕಾಲ ಬಂದಾಗ ಅವರಲ್ಲಿಯೂ ಬರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಮುಂದೆ ಬರಲು ಅವಕಾಶ ಸಿಕ್ಕೇ ಸಿಗುತ್ತದೆ. ಅದಕ್ಕೆ ಸ್ವಲ್ಪ ಕಾಲ ಕಾಯಬೇಕಾಗುತ್ತದೆ. ಇಂದು ಅಧಿಕಾರದಲ್ಲಿರತಕ್ಕಂಥ ಅಧಿಕಾರಿಗಳ ತಪ್ಪು ಮಾಡಿದ್ದರೆ ಕೇಳೋಣ. ಅದು ಬಿಟ್ಟು ಅವರಲ್ಲಿ ಬುದ್ಧಿವಂತರಿದ್ದಾರೆ, ನಮ್ಮಲ್ಲಿ ಬುದ್ಧಿವಂತರಿಲ್ಲ ಎಂದುಕೊಂಡು, ಆ ವಿಷಯವನ್ನು ನಿಮ್ಮ ಮಟ್ಟಕ್ಕೆ ಎಳೆದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಮಳ್ಳೂರು ಆನಂದರಾವ್.—ಹಾವನೂರು ಕಮಿಷನ್ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ನಿಮ್ಮ ಸರ್ಕಾರವೇ ಇದನ್ನೆಲ್ಲಾ ಮಾಡುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್.—ನೀವು ವಿಪರೀತ ಬುದ್ಧಿವಂತರು. ನಮ್ಮ ಕಾಲದಲ್ಲಿ ನೀವು ತಣ್ಣಗಿದ್ದೀರಿ ಮತ್ತು ಕ್ಷೇಮವಾಗಿದ್ದೀರಿ. ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಜೈಲಿನಲ್ಲಿ ಕ್ಷೇಮವಾಗಿದ್ದೆವು.

ಶ್ರೀ ಡಿ. ದೇವರಾಜ ಅರಸ್.—ಜೈಲಿನಲ್ಲಿ ಇವರನ್ನು ಚೆನ್ನಾಗಿ ನೋಡಿಕೊಳ್ಳಲಾಯಿತು, ಆದ್ದರಿಂದಲೇ ಅವರು ತಮ್ಮ ತೂಕವನ್ನು ಹೆಚ್ಚಿಸಿಕೊಂಡು ಹೊರಗೆ ಬಂದರು. ಜೈಲಿನಲ್ಲಿದ್ದೆವು ಎಂಬ ಮಾತನ್ನು ನೀವು ಸಾಯುವವರೆಗೂ ಹೇಳುವುದನ್ನು ಬಿಡಬೇಡಿ. ನಮಗೆ ಸ್ವರಾಜ್ಯ ತಂದುಕೊಟ್ಟವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲಿನಲ್ಲಿದ್ದೆವು ಎಂದು ಹೇಳುತ್ತಿದ್ದರು. ಅವರ ಪೈಕಿ ಎಷ್ಟೋ ಜನರು ಸತ್ತರು, ಕೆಲವರು ಇಂದು ಮುದುಕರಾಗಿರಬಹುದು. ಅಂತಹವರದ್ದು ಒಂದು ಗುಂಪಾದರೆ, ಇಂತಹವರದ್ದು ಒಂದು ಗುಂಪಾಗಿದೆ. ಇವರ ಕ್ವಾಲಿಫಿಕೇಷನ್ ಅಷ್ಟೆ, ಅದಕ್ಕಿಂತ ಹೆಚ್ಚಾಗಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಆ ವಿಷಯವನ್ನು ತಾವು ಹೆಚ್ಚು ಎಳೆಯುವುದಕ್ಕೆ ಹೋಗಬಾರದು ಮತ್ತು ಅದನ್ನು ಹಗುರ ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹಗುರ ಮಾಡಲಿಲ್ಲ. ನೀವು ಹಗುರ ಮಾಡಿಕೊಳ್ಳಬೇಡಿ ಎಂದು ಅವರಿಗೆ ಹೇಳುತ್ತಿದ್ದೇನೆ. ಎಲ್ಲವೂ ನನ್ನ ಕಾಲದಲ್ಲಿ ಆಯಿತೆಂದು ಅವರು ಹೇಳಿದ್ದಾರೆ. ಇದನೆಲ್ಲಾ ಮಾತನಾಡಲು ನಿಮಗೆ ಎಷ್ಟು ಹಕ್ಕಿದೆಯೋ, ಅದರಂತೆ ಉತ್ತರ ಕೊಡಲೂ ಸಹ ನನಗೆ ಅಷ್ಟೇ ಹಕ್ಕಿದೆ. ನೆನ್ನೆ ದಿವಸ ನೀವು ಖುಷಿಯಾಗಿ ಮಾತನಾಡುವಾಗ ನಾನು ಸುಮ್ಮನೆ ಕೇಳಿದೆ. ಈಗ ನಾನು ಉತ್ತರ ಕೊಡುವಾಗ ನಿಮಗೆ ಮೆಣಸಿನಕಾಯಿ ಹೊಗೆ ಹಾಕಿದಂತೆ ಆಗಿದೆ. ಕೆಮ್ಮುವುದಕ್ಕೂ ಅವರಿಗೆ ಆಗುತ್ತಿಲ್ಲ ಮತ್ತು ದಮ್ಮು ಕಟ್ಟುವುದಕೂ ಅವರಿಗೆ ತ್ರಾಣವಿಲ್ಲ. ನೀವು ಮಾತನಾಡುವಾಗ ನಾನು ಸುಮ್ಮನೆ ಕೇಳಿದ್ದೇನೆ. ಅದರಂತೆ ನಾನು ಹೇಳುವುದನ್ನು ಸಹ ನೀವು ಸಾವಧಾನವಾಗಿ ಕೇಳಿ. ನಮ್ಮ ಕಾಲದಲ್ಲಿ ಏನೂ ಆಗಲಿಲ್ಲವೆಂದು ನೀವು ಹೇಳುವುದಾದರೆ, ನಾನು ಹೇಳುತ್ತೇನೆ, ನಮ್ಮ ಕಾಲದಲ್ಲಿ ಜನರಿಗೆ ಬೇಕಾದಷ್ಟು ಅನುಕೂಲಗಳಾಗಿವೆ, ನೀವೂ ಸಹ ತಣ್ಣಗಿದ್ದೀರಿ ಎಂದು ಹೇಳುತ್ತೇನೆ. ನಾನು ಹೇಳತಕ್ಕಂಥ ಉತ್ತರದಿಂದ ನಿಮಗೆ ತೀವ್ರವಾದಂಥ ನೋವು ಆಗುವುದಿದ್ದರೆ ಅದಕ್ಕೆ ನಾನೇನು ಮಾಡಲಿ?

SRI H.D. DEVEGOWDA.—I request the members of this side to hear the Chief Minister patiently. If you got any norms in democratic set up take things if you have guts and give him back.

SRI D. DEVARAJA URS.—I like that spirit. ನೆನ್ನೆಯೇ ನಾನು ಆ ಮಾತನ್ನು ಹೇಳಿದೆ. ಆದರೆ ಆ ಮಾತು ನನಗೂ ನಿಮಗೂ ಅನ್ವಯವಾಗುವುದಿಲ್ಲ. ಏಕೆಂದರೆ ನಾವು ಮತ್ತು ನೀವು ಗುದ್ದಾಡಿದ್ದೇವೆ. ನಿಮಗೆ ಹೊಡೆಯುವ ಶಕ್ತಿಯೂ ಇದೆ, ತಡೆದುಕೊಳ್ಳುವ ಶಕ್ತಿಯೂ ಇದೆ ಆದರೆ ಇವರಿಗೆ ತಡೆದುಕೊಳ್ಳುವ ಶಕ್ತಿ ಇಲ್ಲ. ಅದಕ್ಕೆ ನಾನೇನು ಮಾಡಲಿ? ಕುಸ್ತಿಗೆ ಇಳಿದ ಮೇಲೆ ಪಟ್ಟು ಹಾಕುವುದನ್ನು ಸಹ ಕಲಿತಿರಬೇಕು. ಅದನ್ನು ಕಲಿಯದೆ, ಕುಸ್ತಿಗೆ ಇಳಿದು ನಾನು ಪಟ್ಟು ಹಾಕುವುದಕ್ಕೆ ಹೋದಾಗ ಅಯ್ಯೋ ಎಂದರೆ ಏನು ಮಾಡುವುದು?

ಶ್ರೀ ಜೆ.ಎಚ್. ಪಟೇಲ್.–ಪಟ್ಟುಗಳ ವಿಚಾರದಲ್ಲಿ ನೀವಿಬ್ಬರೂ ಒಂದೇ ಸ್ಕೂಲಿನಲ್ಲಿ ಕಲಿತಿರುವಂತೆ ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಸ್ಕೂಲು ಯಾವುದು ಎಂಬುದನ್ನು ಹೇಳಿ? ನೀವು ಲೋಹಿಯಾ ಶಿಷ್ಯ ಎಂಬುದು ನನಗೆ ಗೊತ್ತು

ಶ್ರೀ ಮಳ್ಳೂರು ಆನಂದರಾವ್.—ನೀವು ಪಟ್ಟು ಹಾಕಿದ ಮೇಲೆ ಮರುಪಟ್ಟು ಹಾಕುವುದಕ್ಕೆ ನಮಗೂ ಅವಕಾಶವಿರಬೇಕು.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಅವಕಾಶ ಸಿಕ್ಕಿದಾಗ ನೀವು ಪಟ್ಟು ಹಾಕಿ, ನಮಗೆ ಅವಕಾಶ ಸಿಕ್ಕಿದಾಗ ನಾವು ಹಾಕುತ್ತೇವೆ. ನೆನ್ನೆ ದಿವಸ ನಿಮಗೆ ಬೇಕಾದಷ್ಟು ಅವಕಾಶ ಸಿಕ್ಕಿತ್ತು. ಆಗ ಎಲ್ಲ ಪಟ್ಟುಗಳನ್ನೂ ಹಾಕಿದ್ದೀರಿ ಈಗ ನನಗೆ ಅವಕಾಶ ಕೊಟ್ಟಿದ್ದೀರಿ, ಆದಕಾರಣ ನಾನು ಹೇಳುವುದನ್ನು ಕೇಳಿ. ಈ ಆಡಳಿತದಲ್ಲಿರತಕ್ಕಂಥ ಕರಪ್ಷನನ್ನು ತಪ್ಪಿಸಬೇಕು ಎನ್ನುವ ಉದ್ದೇಶ ಎಲ್ಲರಿಗೂ ಇದೆ. ಅದನ್ನು ತಪ್ಪಿಸುವ ಮಾರ್ಗ ಕೈಕೊಂಡಾಗ ಎಲ್ಲರ ಸಹಕಾರವೂ ಬೇಕಾಗುತ್ತದೆ. ನಾನು ಆ ಕಡೆ ಮತ್ತು ಈ ಕಡೆ ಎಂದು ಮಾತನಾಡುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಕೆಲಸಕಾರ್ಯಗಳನ್ನು ಮಾಡುವಾಗ ಸರ್ಕಾರ ಒಂದೆ ಮಾಡುವುದಕ್ಕಾಗುವುದಿಲ್ಲ ಪ್ರಜಾಪ್ರತಿನಿಧಿಗಳ ಸಲಹೆ ಹಾಗೂ ಸಹಕಾರ ಬೇಕೇ ಬೇಕಾಗುತ್ತದೆ. ಆದ್ದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಇನ್ನೂ ಉತ್ತಮಪಡಿಸಬೇಕು, ಉತ್ತಮ ಪಡಿಸೋಣ ಈ ದೃಷ್ಟಿಯಿಂದ ನಾವು ಕೆಲವು ನಾರಮ್ಸ್ ಇಟ್ಟುಕೊಂಡು ಯಾರನ್ನಾದರೂ ವರ್ಗ ಮಾಡಿದಾಗ, ಅದು ಬೇಡ ಎಂದು ಯಾರಾದರೂ ಹೇಳುವುದಾದರೆ, ಅದಕ್ಕೆ ಸಕಾರಣ ಕೊಡಬೇಕು. ಸಕಾರಣವಿದ್ದರೆ ಶಿಕ್ಷೆ ವಿಧಿಸೋಣ. ಆದರೆ ಸುಮ್ಮಸುಮ್ಮನೆ ಯಾರದೋ ಮಾತು ಕೇಳಿಕೊಂಡು ವರ್ಗ ಮಾಡಿದರೆ ಆ ಅಧಿಕಾರಿ ಹೋದಹೋದ ಕಡೆಗಳಲ್ಲೆಲ್ಲಾ ಅದನ್ನೇ ಮಾಡುತ್ತಾನೆ. ಒಬ್ಬರನ್ನು ಹಿಡಿದುಕೊಂಡು ಯಾರನ್ನಾದರೂ ವರ್ಗ ಮಾಡಿಸಿದರೆ ಏನಾಗುತ್ತದೆಂದರೆ, ಆತ ಬೇರೆ ಹತ್ತು ಜನರನ್ನು ಹಿಡಿದುಕೊಂಡು ಆ ವರ್ಗವನ್ನು ರದ್ದು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ಆದಕಾರಣ ಇದನ್ನೆಲ್ಲಾ ತಡೆಗಟ್ಟಬೇಕಾದರೆ, ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವುದಕ್ಕೆ ನೀವು ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಕೊಡಬೇಕು. ಇಲ್ಲದಿದ್ದರೆ, ಎಲ್ಲರೂ ಸೇರಿ ಕೈಹಾಕುವುದಕ್ಕೆ ಹೋದರೆ too many cooks spoil the broth ತರಹ ಆಗುತ್ತದೆ. ಆದಕಾರಣ

ಇತ್ತೀಚೆಗೆ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚು ಮಾಡುವ ಸಲುವಾಗಿ ಎಲ್ಲ ಕ್ರಮಗಳನ್ನೂ ಕೈಕೊಳ್ಳಲಾಗುತ್ತಿದೆ. ಯಾರಿಗೂ ದಾಕ್ಷಿಣ್ಯ ತೋರಿಸುತ್ತಿಲ್ಲ. ಶಿಕ್ಷೆಯನ್ನು ವಿಧಿಸುವುದಕ್ಕೆ ಎಲ್ಲೆಲ್ಲಿ ಸಕಾರಣಗಳು ದೊರಕುತ್ತವೋ ಅಲ್ಲೆಲ್ಲಾ ಶಿಕ್ಷೆಯನ್ನು ವಿಧಿಸದೆ ಬಿಟ್ಟಿಲ್ಲ. ಇದರ ಜೊತೆಗೆ ೨೮ನೇ ರೂಲ್ ಪ್ರಕಾರ ಯಾರಿಗಾದರೂ ತೊಂದರೆಯಾಗಿದ್ದರೆ ಅದನ್ನು ಪುನಃ ರಿವ್ಯೂ ಮಾಡಬೇಕೆಂದು ಹೇಳಲಾಗಿದೆ. ವಿನಾ ಕಾರಣ, ಸರಿಯಾದ ಕಾರಣವಿಲ್ಲದೆ ಯಾರನ್ನಾದರೂ ಕೆಲಸದಿಂದ ತೆಗೆದುಹಾಕಿದ್ದರೆ, ಅಂತಹವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸಹ ಹೇಳಿದ್ದೇನೆ.

ಇನ್ನು ಕಾನ್ಫಿಡೆನ್ಷಿಯಲ್ ರಿಪೋರ್ಟ್ ಬರೆಯಬೇಕಾದರೆ ಶಾಸಕರು ಹಾಗೂ ಎಂ.ಪಿ.ಗಳ ಅಭಿಪ್ರಾಯ ಪಡೆದುಕೊಳ್ಳಬೇಕೆಂದು ಕೆಲವರು ಹೇಳಿದರು.

It is a novel idea I do not want to comment much on it. I want the hon'ble Member to ponder over it carefully. After everybody in a district belongs to some caste or the other. All the M.L.As do not belong to the same caste and whoever has an upper voice, his voice will prevail. What about the other M.L.As who may not have that much big voice and are in a minority. If the mejority of members belong to one caste and the officer also belongs to the same caste, you can invariably take it that all the reports will be in his favour. But what about those who have suffered and are in a minority? Are they going to make two confidential reports? Can an M.L.A. do it? These are all impractical things. The hon'ble Member read out from a proforma where confidential reports are written in a certain column. Let us see whether we can change and improve upon it.

11-00 A.M.

ಇವನ್ನೆಲ್ಲಾ ನಾವು ನೋಡಿ ಮಾಡೋಣ. ಆದರೆ ಈ ಸಿಸ್ಟಂನ್ನು ಅನುಸರಣೆ ಮಾಡುವುದಕ್ಕೆ ಸಧ್ಯದಲ್ಲಿ ಸಾಧ್ಯವಾಗುವುದಿಲ್ಲ. ಅಧಿಕಾರದಲ್ಲಿ ಇರತಕ್ಕಂಥವರು ಮೆಜರ್ ಮಾಡಬೇಕಾಗುತ್ತದೆ. ತಪ್ಪು ಏನಾದರೂ ಇದ್ದದ್ದನ್ನು ಪರಿಹಾರ ಮಾಡಿಕೊಂಡು ಹೋಗುವುದು ಒಂದೇ ಮಾರ್ಗ ನಮಗೆ ಉಳಿದಿರುವುದು. ಇನ್ನು ಲೋಯರ್ ಲೆವಲ್‌ನಲ್ಲಿ ಎಲ್ಲಾ ಸರಿಯಾಗಿದೆಯೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಕಾರಣ ನನ್ನ ಮನಸ್ಸಿಗೂ ಗೊತ್ತಿರುವಂತೆ ಅನೇಕ ದೋಷಗಳು ಕಂಡು ಬಂದಿವೆ. ಇನ್‌ಫ್ಲ್ಯುಯೆನ್ಸ್‌ಗೆ ಒಳಗಾಗಿ ಕೆಲಸ ಮಾಡತಕ್ಕಂಥ ದೋಷಗಳು ಇವೆ. ಅದನ್ನು ನಾನು ಒಪ್ಪುತ್ತೇನೆ. ಇದನ್ನು ಸರಿಮಾಡಬೇಕು ಮತ್ತು ಆಡಳಿತ ಯಂತ್ರ ಸುಗಮವಾಗಿ ಕೆಲಸ ಮಾಡುವಂತೆ ನಾವು ಮಾಡುತ್ತಿರುವ ಪ್ರಯತ್ನ ಏನು ಎಂದು ಹೇಳುವುದಾದರೆ ನಾವು ಒಂದು ಮುಖ್ಯ ಪ್ರಯತ್ನಕ್ಕೆ ಹೊರಟಿದ್ದೇವೆ. ಇನ್ನು ಬಹಳ ಮಾನ್ಯ ಸದಸ್ಯರು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಡಳಿತ ಯಂತ್ರದ ಕೊರತೆಗಳು ಹೆಚ್ಚಾಗಿ ಕಾಣುತ್ತವೆಂದು ಹೇಳಿದರು. ಅದಕ್ಕೋಸ್ಕರವಾಗಿಯೇ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಅವರ ಕೈಕೆಳಗಿನ ಅಧಿಕಾರಿಗಳು ಕೂಡಿಕೊಂಡು ಹಿಂದೆ ಜಮಾಬಂದಿ ಎಂದು ಏನು ಒಂದು ಪದ್ಧತಿ ಇತ್ತೋ ಅದನ್ನೇ ಮತ್ತೆ ಪ್ರಾರಂಭ ಮಾಡಿ ಕೇಳಲ್ಪಟ್ಟ ತೊಂದರೆಗಳನ್ನು ನಿವಾರಿಸುವುದಾಗಿ ನಮ್ಮ ರೆವಿನ್ಯೂ ಮಂತ್ರಿಗಳು ಅವರ ಡಿಮ್ಯಾಂಡ್ ಮೇಲೆ ಉತ್ತರ ಕೊಡುವಾಗ ಹೇಳಿದ್ದಾರೆ. ಹೋಬಳಿ ಮಟ್ಟದಲ್ಲಿ ಹಾಗೂ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಬರುವ ಅರ್ಜಿಗಳನ್ನು ಎಲ್ಲರೂ ಕುಳಿತುಕೊಂಡು ಯಾವ ರೀತಿ ಬಗೆಹರಿಸಬೇಕೆಂದು ತೀರ್ಮಾನ ಮಾಡಬಹುದು. ಇನ್ನು ಜಿಲ್ಲಾಧಿಕಾರಿಗಳು ಕೂಡಾ ಹಳ್ಳಿಗಳಿಗೆ ಹೋಗಬೇಕೆಂದು ಆಜ್ಞೆ ಮಾಡಿದ್ದೇವೆ. ಇದನ್ನು ಸರ್ಕ್ಯುಲರ್ ಮುಖೇನ ಕಳುಹಿಸಿಕೊಟ್ಟಿದ್ದೇವೆ. ಇದರ ಜೊತೆಗೆ ಕಳೆದ ೬ ವರ್ಷಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕೆಲವು ಕಾರ್ಯಕ್ರಮಗಳನ್ನು ಅಂದರೆ ೨೦ ಪಾಯಿಂಟ್ ಪ್ರೋಗ್ರಾಂ ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರವಾಗಿ ಸಮಿತಿಗಳನ್ನು ಮಾಡಿ ಅದರಲ್ಲಿ ನಾನ್ ಅಫಿಷಿಯಲ್ಸ್‌ನ್ನು ಅಸೋಸಿಯೇಟ್ ಮಾಡಬೇಕೆಂದು ಆಗ ಮಾಡಿದ್ದೆವು. ಆದರೆ ೨೦ ಪಾಯಿಂಟ್

ಪ್ರೋಗ್ರಾಂ ಎಂದು ಹೇಳಿದರೆ ಕೆಲವರಿಗೆ ಅಲರ್ಜಿ ಆಗಬಹುದು. ಆದ್ದರಿಂದ ಅದನ್ನು ಮನೆ ಕಟ್ಟಿ ಕೊಡುವುದು, ಸಾಲ ಕೊಡುವ ವಿಚಾರ ಅಥವಾ ಡಿವಲಪ್‌ಮೆಂಟ್ ಪ್ರೋಗ್ರಾಂ ಎಂದು ಹೇಳೋಣ. ಆ ಸಮಿತಿಗಳನ್ನು ಇಟ್ಟುಕೊಂಡು ತಾಲ್ಲೋಕು ಮಟ್ಟದಲ್ಲಿ ಕೆಲಸ ನಡೆಯುತ್ತದೆಯೋ ಎಂದು ನೋಡೋಣ. ಇನ್ನು ಇತ್ತೀಚೆಗೆ ತಾಲ್ಲೋಕು ಡೆವಲಪ್‌ಮೆಂಟ್ ಬೋರ್ಡುಗಳು ಬಂದಿವೆ. ಮೊದಲಿಗೆ ಅವು ಇರಲಿಲ್ಲ ಆದ್ದರಿಂದ ಸ್ವಲ್ಪ ದೋಷವಿತ್ತು. ಆದರೆ ಅವು ಕಾನ್‌ಸ್ಟಿಟ್ಯೂಟ್ ಆಗಿವೆ. ಆದರೆ ಕೆಲವು ಸದಸ್ಯರು ಅಧಿಕಾರವನ್ನು ಕೊಟ್ಟಿಲ್ಲ, ಅಧಿಕಾರ ವಿಕೇಂದ್ರೀಕರಣ ಮಾಡಿಲ್ಲವೆಂದು ಹೇಳುತ್ತಾ ಇಲ್ಲಿ ತಾಲ್ಲೂಕು ಮಟ್ಟದಲ್ಲಿರುವ ಸಂಸ್ಥೆಗಳಿಗೆ ಅಧಿಕಾರ ಕೊಟ್ಟಿಲ್ಲವೆಂದೂ ಹಾಗೂ ಮಹಾರಾಷ್ಟ್ರ ಹಾಗೂ ಆಂಧ್ರದಲ್ಲಿ ತಾಲ್ಲೂಕು ಮಟ್ಟದ ಸಂಸ್ಥೆಗಳಿಗೆ ಅಧಿಕಾರವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ನಾವು ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಅಧಿಕಾರವನ್ನು ಕೊಟ್ಟಿದ್ದೇವೆ ಆದರೆ ಅವರಿಗೆ ಇನ್ನು ಹಣ ಕೊಟ್ಟಿಲ್ಲ ಅಷ್ಟೆ. ಇದು ಥಿಯಾರಿಟಿಕಲ್ ಆಗಿ ಡೀಸೆಂಟ್ರಲೈಸ್ ಆಗಿದೆ, ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೇವೆ. ಆದರೆ ಹಣವನ್ನು ಇನ್ನೂ ಒದಗಿಸಿಲ್ಲ. ಹಣವಿಲ್ಲವೆ ತಾಲ್ಲೂಕು ಮಟ್ಟದ ಸಂಸ್ಥೆಗಳು ಹಾಗೂ ಪಂಚಾಯತಿಗಳು ಏನು ಮಾಡಲು ಸಾಧ್ಯ? ಇತ್ತೀಚೆಗೆ ಹಣವನ್ನು ಕೊಡಬೇಕೆಂದು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಇದರಲ್ಲಿ ಒಂದು ಎಷ್ಟು ಪರ್ಸೆಂಟ್ ಕಂದಾಯವನ್ನು ಕೊಡೋಣವೆಂದು ಯೋಚನೆಯಾಗಿದೆ. ಆದರೆ ಕೆಲವು ಕಡೆ ವಾಟರ್ ರೇಟ್ ಅಂದರೆ ಖುಷ್ಕಿ ಕಂದಾಯ ಬಹಳ ಕಡಿಮೆ ಸಿಕ್ಕುತ್ತಾ ಇದೆ. ಇನ್ನು ಒಂದು, ಉದಾಹರಣೆ ಹೇಳುವುದಾದರೆ ನಮ್ಮ ನಾರ್ತ್ ಕೆನರಾ ಭಾಗದಲ್ಲಿ ೮೦ ಪರ್ಸೆಂಟ್ ಫಾರೆಸ್ಟ್ ಇದೆ, ಆದ್ದರಿಂದ ಅಲ್ಲಿ ಫಾರೆಸ್ಟ್ ಆದಾಯದಲ್ಲೇ ನಮಗೆ ಕೊಡಬೇಕೆಂದು ಕೇಳುತ್ತಾರೆ, ಅದನ್ನು ನಾನು ಒಪ್ಪಬೇಕಾಗುತ್ತದೆ. ಇನ್ನು ಈಗಾಗಲೇ ತಾಲ್ಲೋಕು ಬೋರ್ಡ್ ಚುನಾವಣೆಗಳು ಆಗಿದ್ದಾವೆ. ಜೊತೆಗೆ ಪಂಚಾಯತ್‌ಗಳು ಕೂಡ ೧೦೦ಕ್ಕೆ ೯೦ ಪಂಚಾಯತ್‌ಗಳಲ್ಲಿ ಮನೆಗಂದಾಯವನ್ನು ಎತ್ತುವುದಿಲ್ಲ. ಈ ರೀತಿಯಾದರೆ ಹೇಗೆ? ಅನೇಕ ಜಿಲ್ಲೆಗಳಲ್ಲಿ ನೂರಾರು ಹಳ್ಳಿಗಳಿಗೆ ದೀಪಗಳನ್ನು ಕೊಟ್ಟಿದ್ದರೂ ಕೂಡ ಅಲ್ಲಿ ಒಬ್ಬರೂ ದುಡ್ಡು ಕಟ್ಟದೇ ಅಲ್ಲಿ ದೀಪಗಳನ್ನು ಕಿತ್ತುಹಾಕಿದ್ದಾರೆ. ಅಲ್ಲಿ ಒಬ್ಬರೂ ದುಡ್ಡು ಕೊಡುವುದಿಲ್ಲ. ಮನೆಗಂದಾಯವನ್ನು ಎತ್ತುವವರು ಇಲ್ಲ. ಇನ್ನು ನೀರಿನ ನಲ್ಲಿ ಹಾಕಿಕೊಟ್ಟರೆ ಅದಕ್ಕೆ ಕಟ್ಟಬೇಕಾದ ಹಣವನ್ನು ಕಟ್ಟದೆ ದೂರು ಹೇಳುತ್ತಾ ಕೂತುಕೊಂಡರೆ ನಾವು ಮಾಡುವುದಾದರೂ ಏನು? ಇನ್ನು ನಲ್ಲಿ ಸರಿಮಾಡಿಕೊಳ್ಳುವುದು, ಬಲ್ಬು ಹೋದರೆ ಕೂಡ ಸರ್ಕಾರಕ್ಕೆ ಹೇಳುವುದಾದರೆ ಇನ್ನು ಏತಕ್ಕೆ ತಾಲ್ಲೋಕು ಬೋರ್ಡು ಹಾಗೂ ಪಂಚಾಯತಿಗಳು ಇರಬೇಕು? ಇನ್ನು ಶ್ರೀಮಾನ್ ಶಂಕರ್‌ರಾವ್ ಅವರು ಡಿಸ್ಟ್ರಿಕ್ಟ್ ಲೆವೆಲ್ ಆಫೀಸರ್‍ಸ್ ಕಾನ್‌ಫಿಡೆನ್ಷಿಯಲ್ ರಿಪೋರ್ಟು ಬರೆಯುವುದಕ್ಕೆ ಡೆಪ್ಯುಟಿ ಕಮಿಷನರ್‌ಗೆ ಅಧಿಕಾರವನ್ನು ಕೊಟ್ಟು ಬಿಟ್ಟಿದ್ದೀರಿ ಎಂದು ಹೇಳಿದರು. ಒಂದು ಕಾಲಕ್ಕೆ ಮಾನ್ಯ ಶಂಕರ್‌ರಾವ್‌ರವರು ಕೂಡ ಆಡಳಿತದಲ್ಲಿ ಇದ್ದವರು ಹಾಗೂ ಅವರಿಗೆ ಆಡಳಿತದ ಅನುಭವವು ಕೂಡ ಇದೆ. ಆದ್ದರಿಂದ ಇದನ್ನು ಏತಕ್ಕೆ ಹೇಳುತ್ತೇನೆಂದರೆ ಮೊದಲು ಈ ರೀತಿ ಇರಲಿಲ್ಲ ಆದರೆ ಅದರ ಪರಿಣಾಮ ಏನಾಗಿತ್ತು ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನವರು ಇಂಡಿಪೆಂಡೆಂಟ್ ಆಗಿ ನಮ್ಮನ್ನು ಕೇಳುವವರು ಬೇರೆ ಇದ್ದಾರೆಂದು ಬಹಳ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದದ್ದನ್ನು ನೋಡಿ ಈ ರೀತಿ ಮಾಡಬೇಕಾಯಿತು. ಒಬ್ಬರು ನಮಗೆ ಐ.ಜಿ.ಪಿ. ಇನ್ನೊಬ್ಬರು ನಮಗೆ ಚೀಫ್ ಇಂಜಿನೀಯರ್ ಮುಖ್ಯಸ್ಥರು ಎಂದು ಹೇಳಿಕೊಂಡು ಹೋಗುತ್ತಾ ಇದಕ್ಕೆ ಒಂದು ಚೆಕ್ ಇರಲಿಲ್ಲವಾದ ಕಾರಣ ಈಗ ಡಿಸ್ಟ್ರಿಕ್ಟ್ ಹಾಗೂ ತಾಲ್ಲೂಕು ಲೆವೆಲ್ ಆಫೀಸರ್‍ಸ್‌ಗೆ ಡೆಪ್ಯುಟಿ ಕಮಿಷನರು ಕಂಟ್ರೋಲ್ ಮಾಡಿದರೆ ಕೆಲಸಗಳು ಸುಗಮವಾಗಿ ನಡೆಯುವುದಕ್ಕೆ ಸಹಕಾರಿಯಾಗುತ್ತದೆ, ಜೊತೆಗೆ ಅಧಿಕಾರಿಗಳು ಕೂಡ ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡಲು ಸಹಾಯವಾಗುತ್ತದೆಂದು ತಿಳಿದು ಈ ರೀತ ಮಾಡಬೇಕಾಯಿತು. ಇವೊತ್ತು ಈ ಕಮ್ಯುನಿಟಿ ಡೆವಲಪ್‌ಮೆಂಟ್ ಸಿಸ್ಟಂ ತೆಗೆದುಬಿಟ್ಟಿದ್ದಾರೆ. Tahsildar is a relegated to the background today. ಅವನಿಗೆ ಇಂಪಾರ್ಟೆನ್ಸ್ ಇಲ್ಲ. ಹಿಂದೆ ಯಾವ ರೀತಿ ಇತ್ತು ಎಂದರೆ, ತಹಶೀಲ್ದಾರ್ ಊರಿಗೆ ಹೋಗಿ ಇಂತಹ ಕೆಲಸ ಮಾಡಬೇಕು ಎಂದರೆ ಎಲ್ಲರೂ ಸೇರಿ ಮಾಡುತ್ತಿದ್ದರು. ಈ ಕಮ್ಯೂನಿಟಿ ವರ್ಕ್ಸ್ ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡತಕ್ಕದ್ದು. ಇವೊತ್ತು ನಾವು ಹೋದ ಕಡೆಗಳಲ್ಲೆಲ್ಲಾ ಜನರು ಏನು ಹೇಳುತ್ತಿದ್ದಾರೆ ಎಂದರೆ, ಈ ಸಣ್ಣ ಸಣ್ಣ ಓಣಿಗಳನ್ನು ಸರ್ಕಾರದವರೇ ರಿಪೇರಿ ಮಾಡಿಸಿಕೊಡಿ ಎಂದು ಹೇಳುತ್ತಿದ್ದಾರೆ. ಹಿಂದೆ ಪ್ರತಿಯೊಂದು ರಸ್ತೆಯೂ ಒಂದು ಚೈನಷ್ಟು ಅಗಲ ಅಂದರೆ ೩೩ ಅಡಿಯಷ್ಟು ಅಗಲ ಇರಬೇಕು ಎಂದು ಅಳತೆ ಮಾಡಿ ಬಿಡುತ್ತಿದ್ದರು. ಇವೊತ್ತು ಏನಾಗಿದೆ ಎಂದರೆ ಆ ಊರುಗಳಲ್ಲಿರತಕ್ಕಂತಹ ದೊಡ್ಡ ಮನುಷ್ಯರು ಅದನ್ನೆಲಾ ಉತ್ತುಕೊಂಡು

ಬಿಟ್ಟಿದ್ದಾರೆ. ಕೆಲವು ಕಡೆ ಆ ಜಾಗಗಳನ್ನು ನೋಡಬೇಕು ಎಂದರೆ ಪತ್ತೆ ಇಲ್ಲ. ಈಗ ಇದು ಇನ್ನೂ ಜಾಸ್ತಿಯಾಗಿದೆ. ಇವೊತ್ತು ರೆವಿನ್ಯೂ ಅಧಿಕಾರಿಗಳಿಗೆ ಯಾರು ಹೆದರುತ್ತಾ ಇಲ್ಲ. ಇವೊತ್ತು ರೆವಿನ್ಯೂ ಕೋಡ್ ತೆಗೆದುಕೊಂಡು ನೋಡಿದರೆ, ಒಂದು ಬಾಂಡುಕಲ್ಲು ಸರಿ ಮಾಡದೇ ಇದ್ದರೂ ಜುಲ್ಮಾನೆ ಹಾಕುವುದಕ್ಕೆ ಅಧಿಕಾರ ಇದೆ. You were all young at that time. ಶ್ರೀಮಾನ್ ಗುಂಡಪ್ಪಗೌಡರು ದಿವಾನ್ ಮಾಧವರಾವ್ ಅವರ ಕಾಲದಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಎಂದು ತಂದರು. I must say he started it. It was to his credit. A revenue Inspector was able to go to the village and get all things done through community or collective labour. ಇವೊತ್ತು ಪ್ರತಿಯೊಂದನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತಾರೆ. ನಮ್ಮ ಊರಿಗೆ ರಸ್ತೆ ಇಲ್ಲ ಎಂದು ಹೇಳುತ್ತಾರೆ, ಅದರಲ್ಲೂ ಕಲ್ಲು ಹಾಕಬಾರದು ಟಾರ್ ಹಾಕಬೇಕು ಎಂದು ಹೇಳುತ್ತಾರೆ. ಅದು ೧೦-೨೦ ವರ್ಷಗಳಲ್ಲಿ ಆಗುತ್ತದೆ. You have to wait.

ಶ್ರೀ ಜಿ. ಬಿ. ಶಂಕರ್‌ರಾವ್.—ಇವೊತ್ತು ಸರ್ಕಾರದ ಅಧಿಕಾರಿಗಳು ಮಾಡಬೇಕು ಎಂದು ಅಲ್ಲ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಅರ್ಥ ತಿಳಿದುಕೊಂಡು ಮಾತನಾಡಬಾರದು. ಇವೊತ್ತು ಕೋಯರ್‌ಷನ ಇರಕೂಡದು ಎಂದು ಹೇಳುತ್ತಾರೆ. ಅದು ಇಲ್ಲದೇ ಜನರು ಕೆಲಸ ಮಾಡುತ್ತಾರೆಯೇ? ಹಿಂದೆ ಎಲಿಮೆಂಟ್ ಆಫ್ ಕೋಯರ್‌ಷನ್ ಇತ್ತು. ತಹಶೀಲ್ದಾರರು ಹೇಳಿದರು ಎಂದರೆ ಮಾಡದೇ ಇದ್ದರೆ ಜುಲ್ಮಾನೆ ಹಾಕುವುದು ಇತ್ತು. ಆಗ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಹೇಳಿದರೂ ಕೆಲಸ ಮಾಡುತ್ತಿದ್ದರು. ಈಗ ಒಳ್ಳೆಯ ಮಾತಿನಲ್ಲಿ ಹೇಳಿದರೂ ಕೆಲಸ ಮಾಡುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೋಯರ್‌ಷನ್ ಇಲ್ಲದೇ ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. I can understand saying that people have to co-operate. The Chief Minister says things have to be doneby coercion. I do not agree.

ಶ್ರೀ ಡಿ. ದೇವರಾಜ್ ಅರಸ್.—ಅವರ ಥಿಯರಿಯನ್ನು ಅವರು ಬಂದಾಗ ಅಪ್ಲೈ ಮಾಡಲಿ. ಕೋಯರ್‌ಷನ್ ಎಂದರೆ ಜನರನ್ನು ಹೊಡೆಯಬೇಕು ಎಂದು ಅರ್ಥ ಏನು?

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಮುಖ್ಯ ಮಂತ್ರಿಗಳವರ ಬಾಯಿಂದ ಈ ರೀತಿ ಬರಬಾರದು.

ಶ್ರೀ ಡಿ. ದೇವರಾಜ್ ಅರಸ್.—ನಾನು ತಿಳಿದುಕೊಂಡು ಹೇಳುವುದಕ್ಕೆ ಇರುವುದು. Let him hold his opinion. I am going to say that this my view, If he thinks it is not so, he is free to have his view. Coercion does not mean going and beating a man. There are indirect methods, sanctions and other things where by a man is made to work. ಇದು ಯಾರ ಮನೆಯ ಕೆಲಸವೂ ಅಲ್ಲ ವಿಲೇಜ್ ವರ್ಕ್. ಇದು ಸಾರ್ವಜನಿಕರಿಗೆ ಆಗಬೇಕಾದಂತಹ ಕೆಲಸ. ನಾವು ಇಂಡ್ಯೂಸ್‌ಮೆಂಟ್ ಕೊಡುತ್ತೇವೆ. We also give subsidy. ಊರಿನ ರಸ್ತೆ ಸರಿ ಮಾಡಲಿಕ್ಕೆ ೨೦ ರೂಪಾಯಿ ಖರ್ಚು ಆದರೆ ೧೦ ರೂಪಾಯಿ ಕೊಡುತ್ತೇವೆ. It is also a kind of inducement. So coercion does not mean physical beating. I said it was possible in those days. Now it is not possible, nobody is doing. This is the matter which everybody must take note of. ಕೆಲವು ಕಡೆ ಭೂದಾನ ಮಾಡಿದರು. ಕೋಯರ್‌ಷನ್ ಏನೂ ಇಲ್ಲ. ಭೂಮಿಯನ್ನು ವಾಲಂಟರಿಯಾಗಿ ಕೊಟ್ಟರು. ಆದ್ದರಿಂದ ಇದಕ್ಕೆ ಬೇರೆ ಒಂದು ಡಿಬೇಟ್ ಮಾಡಿ ನಾವು ನೀವು ಮಾತನಾಡೋಣ. ನಾನು ಮೊನ್ನೆ ಆಚಾರ್ಯ ವಿನೋಬಾ ಅವರ ಜೊತೆ ಇದ್ದು ಎಲ್ಲವನ್ನು ನೋಡಿಕೊಂಡು ಬಂದಿದ್ದೇನೆ. I want to sum up my remarks on the system of administration.

> "Responsibility for policies rests upon the ministers whether they are weak or strong and it is important that

civil servants should be an instrument and not masters of polices''.

This is what Herbert Morrisan said on a particular occasion and it holds good even today.........

ಈಗ ಕೆಲವರು ಏನು ಹೇಳುತ್ತಾರೆ ಎಂದರೆ ಮಂತ್ರಿಗಳು ಸುಮ್ಮನೆ ಇದ್ದುಬಿಡುತ್ತಾರೆ. ಅಧಿಕಾರಿಗಳೇ ಎಲ್ಲಾ ಕೆಲಸ ಮಾಡಿಕೊಂಡು ಹೋಗುತ್ತಾರೆ. ಮಂತ್ರಿಗಳ ಮಾತು ಕೇಳುತ್ತಾ ಇಲ್ಲ ಎಂದು ಹೇಳುತ್ತಾರೆ. That is not correct. So far as our Covernment is concerned. ನಾವು ಪಾಲಿಸಿ ಮ್ಯಾಟರ್ಸ್ ಬಗ್ಗೆ ತೀರ್ಮಾನ ಮಾಡುತ್ತೇವೆ. ಎಲ್ಲವನ್ನೂ ಅಧಿಕಾರಿಗಳ ಕೈಯ್ಯಲ್ಲಿ ಕೊಟ್ಟು ನಮ್ಮ ಪಾಡಿಗೆ ನಾವು ಸುಮ್ಮನೆ ಇದ್ದು ರುಜು ಹಾಕುತ್ತೇವೆ. ಎಂದು ಹೇಳತಕ್ಕ ಮಾತು ಸರಿಯಲ್ಲ. ಇನ್ನು ಕೆಲವು ಸದಸ್ಯರು, ನಮ್ಮ ಅಪೋಸಿಷನ್ ಲೀಡರ್ ಅವರು ಮಂತ್ರಿಗಳು ಚೀಫ್ ಸೆಕ್ರೆಟರಿ ಇವರ ಕೈಗೊಂಬೆಯಾಗಿದ್ದಾರೆ ಎಂದು ಹೇಳುತ್ತಾರೆ. ಮಂತ್ರಿಗಳ ಮಾತು ಅಧಿಕಾರಿಗಳು ಕೇಳುತ್ತಾ ಇಲ್ಲ ಎಂದು ಇನ್ನೂ ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಅಧಿಕಾರಿಗಳು ಮಂತ್ರಿಗಳ ಕೈಗೊಂಬೆಯಾಗಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿಯೋ ಒಂದೂ ಗೊತ್ತಾಗುವುದಿಲ್ಲ,

ನಮ್ಮ ವಿರೋಧಪಕ್ಷದ ನಾಯಕರಿಗೆ ಹೇಗೆ ಹೇಳಬೇಕೋ ನನಗೆ ಅರ್ಥವಾಗುವುದಿಲ್ಲ. ಇವರನ್ನು ಕೇಳಿ ನಾನು ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳಬೇಕೆ ? ಈಗ ಇರತಕ್ಕ ಕಾರ್ಯದರ್ಶಿಯವರು ನನ್ನ ಮಾತನ್ನು ಕೇಳುತ್ತಾರಂತೆ. ಇವರು ಹೇಳುವುದರಲ್ಲಿ ಏನಾದರೂ ಅರ್ಥ ಇದೆಯೆ ? I do not know what is the basis on which he made that remark. I am extremely sorry, he should not have made this remark with reference to a particular officer who is one of the best officers. ಅವರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಇವತ್ತು ನಾವು ಡೆಮಾಕ್ರಟಿಕ್ ಸೆಟಪ್‌ನಲ್ಲಿದ್ದೇವೆ. ಕಾರ್ಯದರ್ಶಿಯಾಗಲೀ, ಮುಖ್ಯ ಕಾರ್ಯದರ್ಶಿಯಾಗಲೀ ತಮಗೆ ಸರಿ ಅಂತ ತೋಚಿದ್ದನ್ನು ಮಾಡುವುದಕ್ಕೆ ಸಂಪೂರ್ಣವಾದ ಅಧಿಕಾರ ಅವರಿಗೆ ಇದೆ. ಅದನ್ನು ನಾವು ಕೊಟ್ಟಿದ್ದೇವೆ. ಅದೇ ರೀತಿಯಾಗಿ ಮುಖ್ಯ ಮಂತ್ರಿಯಾಗಿ, ಮಂತ್ರಿಯಾಗಿ ತನಗೆ ತೋಚಿದ್ದನ್ನು ಮಾಡುವ ಅಧಿಕಾರ ಸಂಪೂರ್ಣವಾಗಿ ಮಂತ್ರಿಗೂ ಇದೆ. ಮುಖ್ಯ ಮಂತ್ರಿಗೂ ಇದೆ. ಕಾರ್ಯದರ್ಶಿಗಳ ಸಲಹೆ ತೆಗೆದುಕೊಳ್ಳುತ್ತೇವೆ. ಕಾರ್ಯದರ್ಶಿಗಳು ಹೇಳಿದ್ದೇ ಮಾಡಬೇಕೂಂತ ಯಾವ ಕಾನೂನಿನಲ್ಲಿ ಬರೆದಿಟ್ಟಿದ್ದೀರಿ? ನಮಗೂ ಜವಾಬ್ದಾರಿ ಇದೆ.

I think my friend Sri Arumugham will agree with me. Supposing I do things on the dictates of a Chief Secretary, he will say. 'you are no good'. I am not here to simply listen to whatever they say. I have that power of discretion. I know what is good and what is wrong If you people think that I am not in a position to do things properly, other remedies are open. As long as I hold this office, it is I who has to decide things.

ಮುಖ್ಯ ಕಾರ್ಯದರ್ಶಿಯವರು ಹೇಳಬಹುದು. ಮತ್ತೊಬ್ಬರು ಹೇಳಬಹುದು. ಸರಿಯಿಲ್ಲ ಅಂದರೆ ನಾವು ತೋಚಿದ್ದು ಮಾಡುತ್ತೇವೆ. ನಿಮಗೆ ಇಷ್ಟ ಬಂದಂತೆ ಮಾಡುವುದಕ್ಕೆ ಆಗುವುದಿಲ್ಲ. ಶ್ರೀ ಮುರಾರ್ಜಿ ದೇಸಾಯಿಯವರ ಹತ್ತಿರ ಹೋಗಿ ನೀವು ಅಂಥ ಸೆಕ್ರೆಟರಿ ಹಾಕಿ. ಇಂಥ ಸೆಕ್ರೆಟರಿ ಹಾಕಿ ಎಂದು ಹೇಳಿದರೆ ಕಪಾಳಕ್ಕೆ ಹೊಡೆಯುತ್ತಾರೆ.

It is his right to appoint whomsoever he wants, and it is my right to appoint whomsoever I think proper from the point of view of administration ಅಡ್ಮಿನಿಸ್ಟ್ರೇಷನ್ ಬಗ್ಗೆ ನಾವು ತಪ್ಪು ನಡೆದರೆ ಹೇಳಿ ಸರಿಮಾಡಿಕೊಳ್ಳುತ್ತೇವೆ. ಅದರ ಬಗ್ಗೆ ಅಭ್ಯಂತರ ಏನೂ ಇಲ್ಲ. ಇದನ್ನು ವಿತಕ್ಕೆ ಮಾಡಿದಿರಿ. ಅವರನ್ನು ವಿತಕ್ಕೆ ಬಿಟ್ಟಿರಿ ಎಂದರೆ, ನಮಗೆ ತೋಚಿದ್ದನ್ನು ಮಾಡಿದ್ದೇವೆ. ನೀವು ಬಂದು ಮಾಡಿ. ಎರಡು ತಿಂಗಳಲ್ಲಿ ನಿಮಗೆ ಬೇಕಾಗಿಲ್ಲದವರನ್ನೆಲಾ ಓಡಿಸಿದಿರಿ.

Your measuring rod of this set of people whom we have appointed during our time, you found them to be all bad. That is your way of looking at it. That is all right for you, I have no objection. What is it I can do ? You had all the ears and eyes of the Governor. So, you did it. People elected us, we came back and we did we thought proper. ಸ್ವಾಮಿ, ಇದನ್ನು ಅಷ್ಟಕ್ಕೆ ಬಿಡುತ್ತೇನೆ.

ಸ್ವಾಮಿ, ರೇಷ್ಮೆ ಅಭಿವೃದ್ಧಿ ಬಗ್ಗೆ ಅನೇಕ ಜನ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಲೋಪದೋಷಗಳು ಇವೆ ಎನ್ನುವುದು ತಿಳಿಸಿದ್ದಾರೆ. ನಾನು ಈಗ ನೇರವಾಗಿ ರೇಷ್ಮೆ ವಿಚಾರಕ್ಕೆ ಏತಕ್ಕೆ ಬರುತ್ತಿದ್ದೇನೆಂದರೆ, ಬಹುಶಃ ಮಾನ್ಯ ಸಭೆಯವರು ಎಲ್ಲರೂ ಒಪ್ಪಬಹುದು. ನಮ್ಮ ದೇಶದಲ್ಲಿ ೩೬ ಲಕ್ಷ ವ್ಯವಸಾಯ ಮಾಡತಕ್ಕ ಖಾತೆದಾರರು, ಹಿಡುವಳಿದಾರರು ಇದ್ದಾರೆ. ಅದರಲ್ಲಿ ೨೬ ಲಕ್ಷ ಸಂಸಾರ ಗಳು ಇವೆ, ಈ ೨೬ ಲಕ್ಷ ಕುಟುಂಬಗಳು ೧೦ ಎಕರೆಗಿಂತ ಕಡಿಮೆ ಒಣ ಭೂಮಿಯನ್ನು ಹೊಂದಿವೆ. ಇವ ರೆಲ್ಲಾ ವ್ಯವಸಾಯ ಕೂಲಿಗಾರರೇ ಆಗಿದ್ದಾರೆ. ಇವರಲ್ಲಿ ಹರಿಜನ ಗಿರಿಜನರು ಬರುತ್ತಾರೆ. ಇವರುಗಳಿಗೆ ಜಮೀನೇ ಇಲ್ಲ. ಇದ್ದರೂ ಬಹಳ ಕಡಿಮೆ ೫ ಪರ್ಸೆಂಟ್ ಕೂಡ ಜಮೀನು ಇಲ್ಲ. ಇವರಲ್ಲಿ ಕುಶಲ ಕರ್ಮಿಗಳೂ, ಕ್ರಾಫ್ಟ್ಸ್‌ಮನ್‌ಗಳು ಬರುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆ ಬಹಳ ಮುಖ್ಯವಾದಂಥ ಗೃಹ ಕೈಗಾರಿಕೆಯಾಗಿದೆ. ರೇಷ್ಮೆ ಕೈಗಾರಿಕೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಇವು ಮೂರನ್ನೂ ಕೂಡ ಎಲ್ಲೆಲ್ಲಿ ಹೆಚ್ಚು ನೀರಾವರಿ ಒದಗಿಸುವುದಕ್ಕೆ ಆಗುವುದಿಲ್ಲ. ಅಂಥ ಕಡೆ ಸಣ್ಣ ಪುಟ್ಟ ಹಿಡುವಳಿದಾರರಿಗೆ ಇವುಗಳ ಒಂದು ಅನುಕೂಲ ಒದಗಿಸಿಕೊಡಬೇಕೆಂದು ಯೋಚನೆ ಮಾಡಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಎಷ್ಟು ಪ್ರಯತ್ನ ಮಾಡಿದರೂ ನೀರಿನ ಎಲ್ಲಾ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಂಡರೂ ೩೦-೩೫ ಪರ್ಸೆಂಟ್ ಭೂಮಿಯನ್ನು ನೀರಾವರಿಗೆ ತರಬಹುದು. ಇನ್ನು ೭೦ ಭಾಗ ಏನು ಮಾಡಬೇಕು ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೆ ಈ ರೇಷ್ಮೆ ಕೈಗಾರಿಕೆ ಒಳ್ಳೆಯ ಅನು ಕೂಲಕರವಾದ ಕೈಗಾರಿಕೆಯಾಗಿದೆ. ಈ ಕೈಗಾರಿಕೆಯನ್ನು ಬೆಳೆಸುವ ಬಗ್ಗೆ ಅನೇಕ ಜನ ಸದಸ್ಯರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇದು ನಮ್ಮ ರಾಜ್ಯದಲ್ಲಿ ಈಗಾಗಲೇ ಬಹಳ ಪ್ರಮುಖವಾದ ಕೈಗಾರಿಕೆಯಾಗಿ ಬೆಳೆದಿದೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳದೆ ಮುಖ್ಯವಾದ ಅಂಶಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ಕೆಲಸಗಾರರಿಗೆ ಸದಾಕಾಲವು ಕೆಲಸ ಸಿಗುತ್ತದೆ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿಯೂ ಜನಜೀವನವನ್ನು ಸುಧಾರಣೆಗೊಳಿಸುವಂತಹ ಎಲ್ಲಾ ಗುಣ ಗಳು ಈ ರೇಷ್ಮೆ ಕೈಗಾರಿಕೆಗೆ ಇದೆ. ಹಿಂದೆ ಈ ಬಗ್ಗೆ ಒಂದು ಸ್ಕೀಮು ಹಾಕಿದ್ದು ನಿಜ.

When Sri B. Rachaiah was the Minister in-charge of Sericulture though I was not in the Government at that time. I was a member of the Assembly, ಅವರ ಜೊತೆಯಲ್ಲಿ ಹೋಗಿದ್ದೆ, ನಮ್ಮಲ್ಲಿ ಏನಾಗಿದೆ ಅಂದರೆ, ಒಳ್ಳೆಯ ಉದ್ದೇಶದಿಂದ ಏನು ಕೆಲಸ ಮಾಡಿದರೂ ಅದರ ಬಗ್ಗೆ ಕೋರ್ಟಿಗೆ ಹೋಗುವುದು. ಅಲ್ಲಿ ೨-೩ ವರ್ಷ ಮುಂದಕ್ಕೆ ಹೋಗಿರೋದು ಆಗಿದೆ. ಇತ್ತೀಚೆಗೆ ಅಂದರೆ ೧೯೭೭—೭೭ ರಲ್ಲಿ ೧೧೩ ಸಿರಿಕಲ್ಚರ್ ಕಂ ಫಾರ್ಮರ್ಸ್ ಕೋ-ಆಪರೇಟೀವ್ ಸೊಸೈಟಿಗಳನ್ನು ಶುರು ಮಾಡಿದ್ದೆವು. ಜುರಿಸಿಡಿಕ್ಷನ್ ಬಗ್ಗೆ ಹೈಕೋರ್ಟಿಗೆ ಹೋದರು. ಇದರಿಂದ ಏನಾಗುತ್ತದೆ ಅಂದರೆ ಫೈನಾನ್ಸ್ ಕೊಡುವುದಕ್ಕೆ ಆಗುವುದಿಲ್ಲ. ೮೭ ಸೊಸೈಟಿಗಳು ಫಂಕ್ಷನ್ ಮಾಡುವುದಕ್ಕೆ ಶುರು ಮಾಡಿದವು. ಸುಮಾರು ೫ ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೇವೆ. ಇದೇನೂ ಸಾಲದು, ಇನ್ನೂ ಹೆಚ್ಚು ಕೊಡಬೇಕು. ಇದರಿಂದ ೨೪ ಸಾವಿರ ಫಾರ್ಮರ್ಸ್‌ಗೆ ಅನುಕೂಲವಾಗುತ್ತದೆ. ೬೫-೭೦ ಬಾವಿಗಳಿಗೆ ಸಾಲ ಕೊಟ್ಟಿದ್ದೇವೆ. We are making our best efforts, we will try to cover more. We have projected our plan so as to give nearly Rs. 60 crores of loan in a period of 5 years. ಇದರ ಜೊತೆಗೆ ಈಗತಾನೇ ಗುಲ್ಬರ್ಗದ ಮಾನ್ಯ ಸದಸ್ಯರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ಕೆಲವೊಂದು ಮಲೆನಾಡು ಪ್ರದೇಶಗಳನ್ನು ಬಿಟ್ಟು ಬೇರೆ ಎಲ್ಲಾ ಜಿಲ್ಲೆಗಳಲ್ಲೂ ಈ ರೇಷ್ಮೆ ಕೈಗಾರಿಕೆಯನ್ನು ಜಾರಿಗೆ ತರಬಹುದು ಎನ್ನುವ ವಿಚಾರ ಗೊತ್ತಾಗಿದೆ. ಗುಲ್ಬರ್ಗ, ಬೆಳಗಾಂ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಈಗಾಗಲೇ ಈ ಕೈಗಾರಿಕೆ ಚಾಲ್ತಿಯಲ್ಲಿದೆ, ನಮ್ಮ ಆಸೆ ಇರತಕ್ಕಂಥಾದ್ದು ಏನೆಂದರೆ, ಯಾವ ಯಾವ ಜಿಲ್ಲೆಗಳಲ್ಲಿ ಇದನ್ನು ಬೆಳೆಯುವುದಕ್ಕೆ ಸಾಧ್ಯ ಇದೆ. ವ್ಯಾಪ್ತಿ ಇದೆ, ಅಲ್ಲೆಲ್ಲಾ ಬೆಳೆಸ ಬೇಕೆಂಬುದೇ ಸರ್ಕಾರದ ಅಭಿಪ್ರಾಯವೂ ಆಗಿದೆ.

ಅನಂತರ ವರ್ಲ್ಡ್ ಬ್ಯಾಂಕ್ ಸ್ಕೀಮ್ ಎಂದು ಮಾಡಿದ್ದೇವೆ. ಡೈರಿ ಡಿಪಾರ್ಟಮೆಂಟಿಗೂ ಮಾಡಿದ್ದೇವೆ, ಮಾರ್ಕೆಟಿಂಗ್‌ಗೋಸ್ಕರವಾಗಿಯೂ ಮಾಡಿದ್ದೇವೆ, ಹಾರ್ಟಿಕಲ್ಚರ್‌ಗೂ ಮಾಡಿದ್ದೇವೆ. ಸಿರಿಕಲ್ಚರ್‌ಗೂ ಮಾಡಿದ್ದೇವೆ, ಮೈನರ್ ಇರಿಗೇಷನ್‌ಗೂ ಮಾಡಿದ್ದೇವೆ. ಇದಕ್ಕಾಗಿ ೧೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ. ಈಗ ಮಲ್‌ಬರಿ ತೆಗೆದುಕೊಂಡರೆ ಇದರಿಂದ ನಮಗೆ ಬರತಕ್ಕಂಥ ಪ್ರೊಡಕ್ಷನ್ ೨,೨೦೦ ಮೆಟ್ರಿಕ್ ಟನ್‌ಗಳಿಂದ ೨.೪೦೦ ಮೆಟ್ರಿಕ್ ಟನ್‌ಗಳವರೆಗೂ ಹೆಚ್ಚು ಮಾಡಬೇಕೆಂದು ಈ ಸ್ಕೀಮ್‌ನಲ್ಲಿ ಅಳವಡಿಸಿಕೊಂಡಿರುತ್ತೇವೆ. ಇದರಿಂದ ಎಂಪ್ಲಾಯ್‌ಮೆಂಟ್ ಜಾಸ್ತಿ ಯಾಗುವುದರ ಜೊತೆಗೆ ಚಕರಿಂಗ್ ಸೆಂಟರ್ಸ್ ಕೂಡ ಜಾಸ್ತಿಯಾಗುತ್ತದೆ. ಈಗ ನಾವು ೨೦೦ ಚಕರಿಂಗ್ ಸೆಂಟರ್ಸನ್ನು ಶುರುಮಾಡಿದ್ದೇವೆ, ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕು ಎನ್ನುವ ಅಭಿಪ್ರಾಯ ವನ್ನೂ ಕೂಡ ಇಟ್ಟುಕೊಂಡಿರುತ್ತೇವೆ. ಈ ವರ್ಷ ೭೮—೭೯ ಚಕರಿಂಗ್ ಸೆಂಟರ್ಸ್ ಜಾಸ್ತಿ ಮಾಡು ತ್ತೇವೆ. ಅದರ ಜೊತೆಗೆ ತಾವು ಹೇಳಿದಂತೆ ೧೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ೧೦—೧೦ ರೂಪಾಯಿಗಳನ್ನು ತೆಗೆದುಕೊಳ್ಳುವುದರಿಂದ ಅದರೊಂದಿಗೆ ಹುಳುಗಳನ್ನು ಸಾಕಿ ಕೊಡುವಂತೆ ಮಾಡಿದ್ದೇವೆ.

೧೧-೩೦ ಎ.ಎಂ.

ಇನ್ನು ಚಂದ್ರಿಕೆ ವಿಷಯವಾಗಿ ಹೇಳುವುದಾದರೆ, ಇವು ವೇಳೆಗೆ ಸರಿಯಾಗಿ ಸಿಗುತ್ತಿಲ್ಲ, ಅವು ಗಳನ್ನು ಬಾಡಿಗೆಗೆ ಕೊಟ್ಟುಬಿಟ್ಟಿರುತ್ತಾರೆ. ರೇಷ್ಮೆ ಹುಳುಗಳನ್ನು ಚಂದ್ರಿಕೆಗೆ ಬಿಡಬೇಕೆಂದಾಗ ಇನ್ನೊ ಬ್ಬನಿಗೆ ಬಾಡಿಗೆಗೆ ಕೊಟ್ಟಿರುವುದರಿಂದ ೨-೩ ದಿವಸಗಳಾದರೂ ಕಾಯಬೇಕಾಗುತ್ತದೆ. ಮತ್ತೆ ಅವನ ಕೈಗೆ ಚಂದ್ರಿಕೆ ಸಿಗಬೇಕೆಂದರೆ ಕನಿಷ್ಟ ೫ ದಿವಸಗಳಾದರೂ ಬೇಕಾಗುತ್ತದೆ, ಆದ್ದರಿಂದ ನಾವು ಏನು ಮಾಡಿದ್ದೇವೆಂದರೆ ೧೫ ಸಾವಿರ ಚಂದ್ರಿಕೆಗಳನ್ನು ಮಾಡಿ ಅವರಿಗೆ ಅದನ್ನು ಒದಗಿಸಿಕೊಡತಕ್ಕಂಥ ಏರ್ಪಾ ಡನ್ನೂ ಕೂಡ ಮಾಡಿದ್ದೇವೆ. ಅನಂತರ ಚಕರಿಂಗ್ ಸೆಂಟರ್ಸ್‌ಗೆ ಇನ್‌ಸ್ಪೆಕ್ಟರ್ ಮತ್ತು ಲೇಬರ್ ಎಂಪ್ಲಾಯಮೆಂಟ್ ಇದನ್ನೂ ಕೂಡ ಈ ವರ್ಷದಿಂದಲೇ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಹಾಗೆ, ನಾವು ಎಷ್ಟು ಸೀಡ್ಸ್ ಬೇಕಾಗಿರುತ್ತದೋ ಅಷ್ಟು ಸೀಡ್ಸ್ ಪ್ರೊಡ್ಯೂಸ್ ಮಾಡುವುದಕ್ಕೆ ಆಗಿಲ್ಲ. ಅದಕ್ಕೋಸ್ಕರವಾಗಿ We are gradually increasing our area of production. ಎಂಟನೂರು ಜನರ ಲೈಸೆನ್ಸ್‌ದಾರರು ಏನು ಇರುತ್ತಾರೆ ಅವರನ್ನು ಕಿತ್ತುಹಾಕಿಬಿಡಿ ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ, ಅಷ್ಟು ಉತ್ಪಾದನೆ ಮಾಡತಕ್ಕಂಥ ಶಕ್ತಿ ಬೇಕಾಗಿರುತ್ತದೆ. ಈವತ್ತಿನ ದಿವಸ ಪರಿಸ್ಥಿತಿಯನ್ನು ನೋಡಿದರೆ ಹಾರ್ಟಿಕಲ್ಚರ್ ಇಂಡಸ್ಟ್ರೀಗಳಿಗೆ ಧಕ್ಕೆ ಆಗುತ್ತಿದೆ ಸೈನ್‌ಟಿಫಿಕ್ ಆಗಿ ಪ್ರೊಡಕ್ಷನ್ ಮಾಡುವುದಕ್ಕೆ ಸಾಧ್ಯ ವಾಗುತ್ತಿಲ್ಲ, ಅವರಿಗೆ ಸಾಲ ಕೊಟ್ಟು ವಯಬಲ್ ಎಕನಾಮಿಕ್ ಯೂನಿಟ್ಟು ಸರಿಯಾಗಿ ಇಟ್ಟು ಕೊಳ್ಳುವುದಕ್ಕೆ ಸಾಧ್ಯವಿದ್ದರೆ ಮಾಡಬೇಕಾಗುತ್ತದೆ. ತಾವು ಏನು ಸಲಹೆ ಕೊಟ್ಟಿದ್ದೀರಿ, ಅದನ್ನು ವಿಚಾರ ಮಾಡುತ್ತೇನೆ. ನಾನು ಹಿಂದೆ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೇನೆ, ರಾ ಮೆಟೀರಿಯಲ್ಸ್ ವಿಚಾರವಾಗಿ ಮಾತನಾಡಿದ್ದೇನೆ. ಒಂದು ಸಿಲ್ಕ್‌ಬೋರ್ಡ್ ಮಾಡಬೇಕೆಂದು ಮಾನ್ಯ ಶ್ರೀ ಇಬ್ರಾಹಿಂ ರವರು ಹೇಳಿದರು. ಸರ್ಕಾರಕ್ಕೂ ಆ ವಿಚಾರ ಗೊತ್ತಿರುತ್ತದೆ. ಸಿಲ್ಕ್ ಇಂಡಸ್ಟ್ರೀಸ್ ಬೆಳೆಯಬೇಕಾದರೆ ಚಕರಿಂಗ್ ಸೆಂಟರ್ಸ್ ಸಾಕಷ್ಟು ಇಲ್ಲ, ಇನ್ನು ಮಲಬರಿ ಹೆಚ್ಚಿಗೆ ಬೆಳೆದಂಥ ರೈತರಿಗೆ ದುಡ್ಡನ್ನು ಕೊಡು ವಾಗ ಮಿಡಲ್‌ಮೆನ್‌ಗಳು ಬಹಳ ಮೋಸಮಾಡುತ್ತಿದ್ದಾರೆ ಅದನ್ನು ತಪ್ಪಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಇವರಿಂದ ರೀಲರ್ಸ್‌ಗೂ, ಮತ್ತು ರೈತರಿಗೂ ತೊಂದರೆಯಾಗುತ್ತಿದೆ. ಬೆಂಗಳೂರು ನಗರದಲ್ಲಿಯೇ ಸುಮಾರು ೨೪೦ ಜನ ಕೋಠಿಯನ್ನು ಇಟ್ಟುಕೊಂಡಿರುತ್ತಾರೆ, ಇವರುಗಳಿಂದ ಬಹಳ ವಾಗಿ ಮೋಸ ನಡೆಯುತ್ತಿದೆ, ಇದನ್ನು ತಪ್ಪಿಸಬೇಕೆಂದು ಹೇಳುತ್ತಿದ್ದಾರೆ. ಈವತ್ತಿನದಿವಸ ೬೦ ಕೋಟಿ ರೂಪಾಯಿಗಳ ವ್ಯವಹಾರ ೨೫೦ ಜನ ಕೋಠಿಯನ್ನು ಇಟ್ಟುಕೊಂಡಿರುವವರಿಂದ ನಡೆಯುತ್ತಿದೆ. ಇದನ್ನು ತಪ್ಪಿಸಬೇಕೆಂದರೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. Now, we are going to bring a legislation to constitute a Silk Board ಅವರು ಏನು ಹೇಳುತ್ತಾರೆ ಅದರಂತೆ ಮಾಡುತ್ತೇವೆ.

ಇನ್ನು ಈ ಬೈಯೋಲ್ಟಿನ್ ಸಿಲ್ಕ್ ವಿಷಯದ ಬಗ್ಗೆ ಹೇಳುವುದಾದರೆ, ಇದನ್ನು ವರ್ಷೇ ವರ್ಷೇ ಹೆಚ್ಚಿಗೆ ಉತ್ಪಾದನೆ ಮಾಡಬೇಕೆಂದು ಸರ್ಕಾರದ ದೃಷ್ಟಿ ಇರುತ್ತವೆ. ಇದರ ಬಗ್ಗೆ ಪ್ರಥಮದಲ್ಲಿ ಜನರಿಗೆ ಸ್ವಲ್ಪ ಅನುಮಾನ ಇತ್ತು. ಇತ್ತೀಚೆಗೆ ಎಲ್ಲ ಕಡೆ ಬೈಯೋಲ್ಟಿನ್ ಬೆಳೆಸಬೇಕು ಎನ್ನುವುದು ಜನರ

ಮನಸ್ಸಿಗೆ ಹಿಡಿಸಿರುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಬೈವೋಲ್ಟಿನ್ ಬಹಳವಾಗಿ ವ್ಯಾಪಕವಾಗುತ್ತದೆ ಎನ್ನುವ ಆಶಯವಿರುತ್ತದೆ, ಇದಕ್ಕೆ ಬಿತ್ತನೆ ಒದಗಿಸುವುದಕ್ಕೆ ನಾವು ತಯಾರಾಗಿರಬೇಕಾಗಿದೆ. ಆದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಬೇರೆಯವರ ಕೈಯಲ್ಲಿ ಕೊಟ್ಟರೆ ಅದು ಸಾಧ್ಯವಾಗುವುದಿಲ್ಲ, ಸರ್ಕಾರದವರೇ ಇದನ್ನು ತಯಾರುಮಾಡಿ ಜನರಿಗೆ ಹಂಚಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ರ್ಯಾಂಡೆಟ್ ಬೆಳೆಯುತಕ್ಕಂಥ ೭-೮ ಸ್ಟೇಟ್‌ಗಳಲ್ಲೂ ಬೈವೋಲ್ಟಿನ್ ಬಂದಿರುತ್ತದೆ. It is favourable to other contries like Japan.

ಮತ್ತೆ ನಮ್ಮದು ಮಲ್ಬರಿ ಬೆಳೆಯುವ ರಾಜ್ಯ ಪ್ರಪಂಚದಲ್ಲಿ ಯಾವ ರಾಜ್ಯಕ್ಕೂ ಕೂಡ ಕಡಿಮೆ ಇರುವುದಿಲ್ಲ. ಹಾಗೆಯೇ ಯಾವ ರೈತನೂ ಕಡಿಮೆ ಇರುವುದಿಲ್ಲ. ನಮ್ಮ ರಾಜ್ಯದ ಕೋಲಾರದಲ್ಲಿ ಬಹಳ ಉತ್ತಮವಾದ ಬೆಳೆ ಬೆಳೆಯುತಕ್ಕಂಥ ಆಶಾದಾಯಕ ಚಿತ್ರ ಇದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರಿಗೂ ಕೂಡ ತುಂಬ ಆಸಕ್ತಿ ಇದ್ದು ಇದರ ವರ್ತನೆಯಲ್ಲಿ ಜನರನ್ನು ಒಳಪಡಿಸುವುದಕ್ಕೆ ಸಾಧ್ಯವಿರುತ್ತದೆ. ಒಂದು ಕುಟುಂಬದಲ್ಲಿ ೩-೪ ಜನರಿದ್ದರೂ ಕೂಡ ಅವರ ಜೀವನವನ್ನು ಸಾಗಿಸಲು ಇದು ಒಂದು ಒಳ್ಳೆಯ ಉದ್ಯಮವಾಗಿರುತ್ತದೆ. ಇಡಿ ವರ್ಷವೆಲ್ಲ ಕೆಲಸ ಇದರಿಂದ ಸಿಗುತ್ತದೆ. ಆದ್ದರಿಂದ ಇಂಥ ಒಂದು ಉದ್ಯಮದಿಂದ ಪ್ರತಿವರ್ಷ ಟಾರ್ಜೆಟ್ ೩೦ ಟನ್‌ಗಳಷ್ಟಾದರೂ ಪ್ರೊಡಕ್ಷನ್ ಮಾಡಬೇಕೆಂದು ಗುರಿ ಇಟ್ಟುಕೊಂಡಿರುತ್ತಾರೆ.

ಇನ್ನು ಸಿರಿಕಲ್ಚರ್ ಸಂಬಂಧವಾಗಿ ಹೇಳಬೇಕಾದರೆ ಇದರಲ್ಲಿ ಬೈಪ್ರೊಲ್ಟೀಜ್ ಹೆಚ್ಚಾಗಬೇಕು, ಮತ್ತು ಬೇರೆ ಸಿಲ್ಕ್‌ನಲ್ಲಿ ರೆಂಡೇಟಾ ಏನು ಬರುತ್ತದೆ ಅದರ ಕ್ವಾಲಿಟಿಯನ್ನು ಕಡಿಮೆ ಮಾಡಬೇಕು. ಈ ಸರ್ಕಾರಿ ಫಿಲೇಚರ್‌ನಲ್ಲಿ ಲಾಸ್ ಆಗುವುದಕ್ಕೆ ಇದೊಂದೇ ಕಾರಣವಲ್ಲ. ನಮ್ಮಲ್ಲಿ ರೇಷ್ಮೆ ಗೂಡನ್ನು ಏನು ಕೊಂಡುಕೊಳ್ಳುತ್ತಾರೋ ಅದರಲ್ಲಿ ಮೋಸ ನಡೆಯುತ್ತಾ ಇದೆ, ಅದನ್ನು ತಪ್ಪಿಸಿದರೆ ಈ ಫಿಲೇಚರ್‌ನಲ್ಲಿ ಆಗತಕ್ಕಂಥಾ ನಷ್ಟವನ್ನು ಕಡಿಮೆ ಮಾಡಬಹುದು. ಎಲ್ಲಾ ಫಿಲೇಚರ್ಸ್‌ನಲ್ಲೂ ಕೂಡ ಆಗತಕ್ಕಂಥಾ ನಷ್ಟವನ್ನು ತಪ್ಪಿಸಿ ಪೂರ್ತಿ ಲಾಭದಾಯಕವಾಗಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅದರಲ್ಲಿ ಆಗತಕ್ಕಂಥಾ ನಷ್ಟವನ್ನು ತಪ್ಪಿಸಬೇಕು ಎನ್ನುವ ಒಂದು ಉದ್ದೇಶ ಇಟ್ಟುಕೊಂಡು ಆ ದಿಶೆಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸಿರಿಕಲ್ಚರ್‌ಗೆ ಸಂಬಂಧಪಟ್ಟ ಹಾಗೆ ಇಷ್ಟು ಹೇಳಿದರೆ ಸಾಕು ಎಂದು ನನಗೆ ಅನ್ನಿಸುತ್ತದೆ.

ಇನ್ನು ಅನೇಕ ಮಾನ್ಯ ಸ್ನೇಹಿತರು ಮೇಜರ್ ಇರ್ರಿಗೇಷನ್, ಮತ್ತು ಮೈನರ್ ಇರ್ರಿಗೇಷನ್ ಬಗ್ಗೆ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ, ಈ ದಿಶೆಯಲ್ಲಿ ಸರ್ಕಾರದ ಪ್ರಯತ್ನ ಸಾಲದು ಅನ್ನುವ ಒಂದು ವಿಷಯ ಹೇಳಿದ್ದಾರೆ. ಇದರ ಬಗ್ಗೆ ಅಂಕಿಅಂಶಗಳನ್ನು ಅವರಿಗೆ ನಾನು ಮೊದಲೇ ಕೊಟ್ಟಿದ್ದೇನೆ, ಕೊಟ್ಟರೂ ಕೂಡ ಅವರು ಅದನ್ನು ಪೂರ್ತಿ ನೋಡಿದರೋ ಇಲ್ಲವೋ ನಿನ್ನೆ ದಿವಸ ನಮ್ಮ ಮಾನ್ಯ ಸ್ನೇಹಿತರಾದಂಥಾ ಶ್ರೀಮಾನ್ ಜೆ. ಹೆಚ್. ಪಟೇಲರವರು ಇದರ ಬಗ್ಗೆ ಅನುಮಾನ ಪಡುತ್ತಾ ಇದ್ದರು. ಅವರು ಹೇಳಿದ್ದು ಏನೆಂದರೆ, ನಿಮ್ಮದು ಸರಿಯಲ್ಲ, ನಾವು ಹಿಂದೆ ಇದ್ದಾಗಲೇ ಇಷ್ಟು ಪರ್ಸೆಂಟ್ ಇನ್‌ಕ್ರೀಸ್ ಆಗಿತ್ತು. ನೀವು ಬಂದಮೇಲೆ ಕಡಿಮೆಯಾಯಿತು ಎಂದು ಹೇಳಿದರು. ಇದರ ಬಗ್ಗೆ ನಾನು ವಾದ ಮಾಡುವುದಕ್ಕಿಂತ ನಿಮ್ಮ ಮುಂದೆ ಇದರ ಅಂಕಸಂಖ್ಯೆಗಳನ್ನು ಇಡುತ್ತೇನೆ. ೧೯೬೧ನೇ ಇಸವಿಯಿಂದ ೧೯೭೨ರವರೆಗೂ ಕೂಡ ನಾವು ಇರ್ರಿಗೇಷನ್‌ಗೆ ಖರ್ಚು ಮಾಡಿರತಕ್ಕಂಥಾ ಹಣ ೧೯೫ ಕೋಟಿ ರೂಪಾಯಿ ಮತ್ತು ೧೯೭೨ ರಿಂದ ೧೯೭೮ರವರೆಗೆ ೬ ವರ್ಷದವರೆಗೆ ಈ ವರ್ಷವೂ ಸೇರಿಕೊಂಡ ಹಾಗೆ ಸುಮಾರು ೪೫೦ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆ. ತಮಗೆ ಇನ್ನೂ ವಿವರವಾಗಿ ಹೇಳಬೇಕಾದರೆ ೧೯೭೪-೭೫ರ ಒಂದೇ ವರ್ಷದಲ್ಲಿ ೩೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಅಂದರೆ ೧೯೭೮-೭೯ನೇ ಇಸವಿಯಲ್ಲಿ ನಾವು ಈ ಬಾಬಿಗೆ ಪ್ರೊವೈಡ್ ಮಾಡಿರುವ ಹಣ ೧೦೩ ಕೋಟಿ ರೂಪಾಯಿಗಳು. ಆ ಮೇಲೆ ತಾವು ಹೇಳಿದಿರಿ ಇದರಿಂದ ಇರ್ರಿಗೇಷನ್ ಗ್ರೋತ್ ಎಷ್ಟು ಆಗಿದೆ ಅಂತ. ೧೯೫೬ನೇ ಇಸವಿಯಲ್ಲಿ ಹೊಸ ಕರ್ನಾಟಕ ಆದಮೇಲೆ, ಆಫ್ಟರ್ ಇಂಟಿಗ್ರೇಷನ್ ಆವಾಗ ಎಷ್ಟು ಇತ್ತು ಎಂದರೆ ೭ ಲಕ್ಷ ಹೆಕ್ಟೇರ್ಸ್ ಇತ್ತು.

ಶ್ರೀ ಜೆ. ಎಚ್. ಪಟೇಲ್.—ಮೊದಲೂ ಇತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—೭ ಲಕ್ಷ ಹೆಕ್ಟೇರ್ಸ್ ಅಲ್ಲ, ೭.೪೦ ಲಕ್ಷ ಹೆಕ್ಟೇರ್ಸ್ ಇದ್ದದು.

ಶ್ರೀ ಡಿ. ದೇವರಾಜ ಅರಸ್.– ಅದು ೧೯೭೭ನೇ ಇಸವಿಯಲ್ಲಿ ಎಷ್ಟಕ್ಕೆ ರೀಚ್ ಆಗಿದೆ ಎಂದರೆ ೧೩.೭೭ ಹೆಕ್ಟೇರ್ಸ್‌ಗೆ ಹೋಯಿತು. ಇದು ಈ ವರ್ಷದ ಕೊನೆಗೆ ೨೬ ಲಕ್ಷ ಹೆಕ್ಟೇರ್ಸ್‌ಗೆ ಬಂದು ಮುಟ್ಟುತ್ತದೆ. Now by the end of this year we are going to reach 26lakh hectares. Now atleast the hon'ble Leader of Opposition and hon'ble Member Mr. Patel will agree with me that in this of 7 years we have increased this to 7 percent.

ಶ್ರೀ ಎಸ್.ಆರ್. ಬೊಮ್ಮಾಯಿ.– ಒಂದು ವರ್ಷಕ್ಕೆ ಒಂದು ಪರ್ಸೆಂಟ್ ಹೆಚ್ಚಾದ ಹಾಗೆ ಆಯಿತು.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ೧೯೫೬ನೇ ಇಸವಿಯಿಂದ ೧೯೭೨ನೇ ಇಸವಿಯವರೆಗೆ ಎಷ್ಟು ಮಾಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದ್ದನ್ನೇ ನಾನು ಮೊದಲು ಹೇಳಿದೆ. ಮೊದಲು ೧೯೫೬-೫೭ರಲ್ಲಿ ೭.೪೦ ಪರ್ಸೆಂಟ್ ಇತ್ತು ಎಂದು. ೧೯೬೮-೬೯ರಲ್ಲಿ ಇದಕ್ಕೆ ಪ್ರಾಶಸ್ತ್ಯ ಕೊಟ್ಟು ಈ ಕಾರ್ಯ ಪ್ರಾರಂಭವಾದುದು. ಆವಾಗ ೧೦.೨೧ಪರ್ಸೆಂಟ್ ಇದ್ದುದು ೧೩.೭೭ ಪರ್ಸೆಂಟ್ ಆಗಿದೆ. ಅಲ್ಲಿಗೆ ಒಂದು ವರ್ಷಕ್ಕೆ ಒಂದು ಪರ್ಸೆಂಟ್ ಮಾತ್ರ ಹೆಚ್ಚಾದ ಹಾಗೆ ಆಯಿತು. ನಿಮಗೆ ಪರ್ಸೆಂಟೇಜ್ ಲೆಕ್ಕ ಹೇಳುವುದಾದರೆ, ೧೯೫೬-೫೭ರಲ್ಲಿ ೭.೩೫ ಪರ್ಸೆಂಟ್, ೧೯೬೮-೬೯ರಲ್ಲಿ ೧೦.೩೮ ಪರ್ಸೆಂಟ್, ೧೯೭೧–೭೨ ರಲ್ಲಿ ೧೩.೩೩ ಪರ್ಸೆಂಟ್. ೧೯೭೬–೭೭ರಲ್ಲಿ ೧೮ ಪರ್ಸೆಂಟ್ ಮತ್ತು ಈ ವರ್ಷ ಅದು ೨೦ ಪರ್ಸೆಂಟ್ ಆಗಬಹುದು. ಒಟ್ಟು ೧೦ ಪರ್ಸೆಂಟ್ ಇದ್ದುದನ್ನು ೧೦.೩೩ ಪರ್ಸೆಂಟ್ ಮಾಡಿದಿರಿ. ಅಲ್ಲಿಗೆ ನೀವು ಒಂದು ಪರ್ಸೆಂಟ್ ಮೇಲೆ ಇನ್‌ಕ್ರೀಸ್ ಮಾಡಲಿಲ್ಲಾ ಅಂತ ನಾನು ಹೇಳಿದ್ದು ಒಟ್ಟಿನಲ್ಲಿ ನೀವು ಕಡಿಮೇನೂ ಮಾಡಲಿಲ್ಲಾ ಹೆಚ್ಚೂ ಮಾಡಿಲ್ಲಾ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ನಾನು ತಮ್ಮ ಮುಂದೆ ಈ ಒಂದು ಅಂಕಿಅಂಶಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ೧೯೬೯–೭೦ ರಿಂದ ಹೇಳುತ್ತೇನೆ.

I will come to the period referred by you, i.e., 1969–70. The total amount spent during different periods on 13 Projects is as follows :—

1969–70	...	Rs. 18.13 crores
1970–71	...	Rs. 24.30 ,,
1971–72	...	Rs. 29.69 ,,
1972–73	...	Rs. 27.56 ,,

In 1972–73 we could not provide more because the drought conditions started in the middle of the year. Again in 1973–74 there was drought and we spend only Rs 27.40 crores ; in 1974–75 we spent Rs 29.85 crores. In 1975-76 the amount spent was Rs 40.11 crores ; in 1976-77 Rs 43.78 crores and in 1977–78 Rs 58.26 crores. During this year, i.e., 1978–79 the budget provision made is Rs 78.10 crores. This is only for these 13 major irrigation projects. I have not included here minor and medium irrigation projects which are 16 in number and which are still going on. ಅವೆಲ್ಲಾ ಹೆಚ್ಚಾಗಿ ಈಚೆಗೆ ತೆಗೆದುಕೊಂಡಿದ್ದು. ಇನ್ನೂ ಕೂಡ ತೆಗೆದುಕೊಳ್ಳುವುದು ಇದೆ. ಆದುದರಿಂದ ಈ ಮೈನರ್ ಇರ್ರಿಗೇಷನ್‌ಗೆ ನಾವು ಎಷ್ಟು ದುಡ್ಡನ್ನು ಹೆಚ್ಚಾಗಿ ಖರ್ಚು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ ಎನ್ನುವ ಬಗ್ಗೆ ಎಲ್ಲಾ ವಿವರಗಳನ್ನೂ ಮತ್ತು ಎಲ್ಲಾ ಅಂಕಿಸಂಖ್ಯೆಗಳನ್ನೂ ಹೇಳಬೇಕು ಎಂದರೆ ಅದನ್ನೆಲ್ಲಾ ಹೇಳುವುದಕ್ಕೆ ತಯಾರಾಗಿದ್ದೇನೆ. ಅದು ನಿಮ್ಮ ಪುಸ್ತಕದಲ್ಲಿ ಕೊಟ್ಟಿರುವುದರಿಂದ ಅದನ್ನು ನಾನು ಹೆಚ್ಚಾಗಿ ಮತ್ತೆ ಮತ್ತೆ ರಿಪೀಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದುದರಿಂದ ನಾವು ಇದಕ್ಕೆ ಹೆಚ್ಚಾಗಿ ಖರ್ಚು ಮಾಡಿದ್ದೇವೆ ಎಂದು ಹೇಳುವಾಗ, ಇದಕ್ಕೆ ನಾವು ಎಷ್ಟು ಹಣ ಹೆಚ್ಚಾಗಿ ಖರ್ಚು ಮಾಡಿದ್ದೇವೆ ಅದರ ಪ್ರತಿಫಲ ಇನ್ನು ಕೆಲವು ವರ್ಷಗಳಲ್ಲಿ ನಮಗೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ ಎಂದು ಹೇಳುತ್ತೇನೆ.

ನಾವು ದೊಡ್ಡ ಜಲಾಶಯ ಕಟ್ಟಿಬಿಟ್ಟೆವು, ಕಾಲುವೆಗಳನ್ನು ಮಾಡಲಿಲ್ಲ. ಜೊತೆಯಲ್ಲೇ ಎಲ್ಲವನ್ನೂ ಮಾಡಬಹುದಿತ್ತು ಎಂದು ಟೀಕೆ ಮಾಡುತ್ತೀರಿ. ಕಾಲುವೆ ಮಾಡಬೇಕಾದರೆ ಜಲಾಶಯ ನಿರ್ಮಾಣಕ್ಕಾಗುವ ವೆಚ್ಚದ ಸುಮಾರು ಮೂರು–ನಾಲ್ಕು ಪಟ್ಟು ಹೆಚ್ಚು ವೆಚ್ಚವಾಗುತ್ತದೆ ಎಂದು ನಾನು ಹಿಂದೆ ಒಂದು ಸಲ ಹೇಳಿದ್ದೆ. ಕೃಷ್ಣಾ ಮೇಲ್ದಂಡೆ ಯೋಜನೆ ಒಂದನ್ನೇ ತೆಗೆದುಕೊಳ್ಳುವುದಾದರೆ, ನಮ್ಮ ಇಂಜನಿಯರುಗಳು ಹೇಳುವ ಪ್ರಕಾರ ಮೊದಲನೆ ಹಂತಕ್ಕೆ ಸುಮಾರು ೨೨೬ ಕೋಟಿ ರೂಪಾಯಿಗಳು ಬೇಕಾಗುತ್ತದೆ–ಅದು ೧೯೮೩–೮೪ಕ್ಕೆ. ಇನ್ನು ಮುಂದೆ ಎರಡನೆ ಹಂತ ತೆಗೆದುಕೊಂಡರೆ ಸುಮಾರು ೩೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದುದರಿಂದ, ತಾವೇ ಯೋಚನೆ ಮಾಡಿ. ಒಂದು ವರ್ಷವಲ್ಲ, ಎರಡು ವರ್ಷಗಳಾದರೂ ಸರಿ ಇಷ್ಟು ಹಣವನ್ನು ಒದಗಿಸುವುದಕ್ಕಾಗುತ್ತದೆಯೆ ? ಅದರಲ್ಲೂ ಒಂದೇ ಯೋಜನೆಗೆ. ಹೀಗಿರುವಾಗ, ನಾವು ೧೩ ಭಾರಿ ಯೋಜನೆಗಳ ಜೊತೆಗೆ ೧೬ ಮಧ್ಯಮ ಯೋಜನೆಗಳನ್ನೂ ಒಂದೇ ಸಾರಿ ತೆಗೆದುಕೊಂಡು ಕೆಲಸ ಮಾಡಿಸಲಾಗುತ್ತಿದೆ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು,

ಶ್ರೀ ಭೀಮಣ್ಣ ಖಂಡ್ರೆ.—ಹಾಗೆ ಮಾಡಬಾರದಿತ್ತು.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಕಾರಂಗ ಯೋಜನೆಯನ್ನು ಬಿದರೆಯಲ್ಲಿ ಮಾಡಿದ್ದು ತಪ್ಪೇ ? ಹಾಗಾದರೆ ಆ ಕೆಲಸ ಪ್ರಾರಂಭ ಮಾಡಿಸಿದ್ದು ನನ್ನ ತಪ್ಪಾಯಿತು. ಈಗದನ್ನು ನಿಲ್ಲಿಸಿಬಿಡುತ್ತೇನೆ ಬಿಡಿ ! ಪ್ರಾರಂಭ ಮಾಡಿದಾಗ ಬಹಳ ಸಂತೋಷವಾಯಿತೆಂದು ಹೇಳಿದರು ; ಈಗ ಇಲ್ಲಿ ಬಂದು ತಪ್ಪು ಮಾಡಿದಿರಿ ಎಂದು ಹೇಳುತ್ತಾರೆ ! ಕಾರಂಗ ಯೋಜನೆಯನ್ನು ಮೊದಲೇ ಏತಕ್ಕೆ ಮಾಡಲಿಲ್ಲವೆಂದು ಅವರು ಕೇಳಬಹುದು. ಅದಕ್ಕೂ ಕಾರಣವಿದೆ. ಅದು ನೀರಿನ ವಿವಾದಕ್ಕೆ ಒಳಪಟ್ಟಿದ್ದ ಪ್ರದೇಶವಾಗಿತ್ತು; ವಿವಾದ ತೀರ್ಮಾನವಾಗದ ಹೊರತು ಯೋಜನೆಯನ್ನು ಪ್ರಾರಂಭ ಮಾಡುವ ಹಾಗಿರಲಿಲ್ಲ. ಆಂಧ್ರದಲ್ಲಿ ಶ್ರೀ ವೆಂಗಲರಾವ್ ಅವರು ಮುಖ್ಯ ಮಂತ್ರಿಯಾಗಿದ್ದಾಗ ಒಂದು ಅಂಡರ್‌ಸ್ಟ್ಯಾಂಡಿಂಗ್‌ಗೆ ಬಂದು ಆ ಕೆಲಸವನ್ನು ಪ್ರಾರಂಭ ಮಾಡಲಾಯಿತು. ಈಗಲೂ ಗೋದಾವರಿ ನೀರಿನ ವಿವಾದ ಇತ್ಯರ್ಥವಾಗಿಲ್ಲ. ಹಾಗೆಯೇ, ಕೃಷ್ಣ ನೀರಿನ ವಿವಾದ ಕೂಡ ಸ್ವಲ್ಪ ಕಾಲವನ್ನು ಎಳೆಯಿತು. ಇವೆಲ್ಲಾ ಕಾರಣಗಳಿವೆ. ಮಾನ್ಯ ಮಾದೇಗೌಡರು ಮಂಡಿಸುತ್ತಿದ್ದ ವಾದವನ್ನು ನಾನು ಬಹಳ ಲಕ್ಷ್ಯಗೊಟ್ಟು ಕೇಳುತ್ತಿದ್ದೆ. ಎಲ್ಲಾ ಕೆಲಸವನ್ನು ಏತಕ್ಕೆ ಮಾಡುತ್ತಿದ್ದೀರಿ, ಎಲ್ಲಾ ಕೆಲಸವನ್ನು ನಿಲ್ಲಿಸಿಬಿಟ್ಟು ಬರೀ ನೀರಾವರಿಗಾಗಿ ಎಲ್ಲ ಹಣವನ್ನು ಏತಕ್ಕೆ ಖರ್ಚು ಮಾಡಬಾರದೆಂದು ಹೇಳಿದರು. ಆಮೇಲೆ ರಸ್ತೆ ವಿಚಾರಕ್ಕೆ ಬಂದು ರಸ್ತೆ ಕಾರ್ಯಗಳಿಗೆ ಏತಕ್ಕೆ ಹೆಚ್ಚು ಹಣ ಕೊಟ್ಟಿಲ್ಲ. ಅದಕ್ಕೂ ಕೊಡಿ ಎಂದರು. ಹೀಗೆ ಅವರ ಮಾತನ್ನು ಅವರೇ ಮರೆತು ಬಿಟ್ಟರು ! ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳುತ್ತಾರೆ. ಆದರೆ, ಒಟ್ಟಿನಲ್ಲಿ ನಾವು ಎಷ್ಟು ಮಾಡಿದ್ದೇವೆ ಎನ್ನುವುದನ್ನು ಅವರು ನೋಡಬೇಕು. ಈ ಯೋಜನೆಗಳ ಮೇಲೆ ನಾವು ವರ್ಷೇ ವರ್ಷೇ ಖರ್ಚು ಮಾಡುತ್ತಿರುವ ಟೆಂಪೋ ಯಾವ ರೀತಿ ಸುಧಾರಿಸುತ್ತಿದೆ ಅಥವಾ ಹೆಚ್ಚಳವಾಗುತ್ತಿದೆ ಎನ್ನುವುದನ್ನು ನಾನು ಅಂಕಿ ಅಂಶಗಳ ಮೂಲಕ ಸ್ಪಷ್ಟಪಡಿಸಿದ್ದೇನೆ. ಅದೇ ರೀತಿ ಸಣ್ಣ ನೀರಾವರಿ ಯೋಜನೆಗಳಿಗೂ ಸಹ ಖರ್ಚು ಮಾಡುತ್ತಿದ್ದೇವೆ. ಈಗ ಒಟ್ಟು ೭.೭ ಲಕ್ಷ ಹೆಕ್ಟೇರು ಜಮೀನು ನೀರಾವರಿಯಾಗುತ್ತಿದೆ, ಇದರಲ್ಲಿ ೧.೫೦ ಲಕ್ಷ ಹೆಕ್ಟೇರು ೧೯೭೭ನೇ ಇಸವಿಯಿಂದ ಅಭಿವೃದ್ಧಿಯಾಗಿರುವುದಾಗಿದೆ. ಇಷ್ಟು ಅಭಿವೃದ್ಧಿಯಾಗಬೇಕಾದರೆ ಸಾಕಷ್ಟು ಹಣ ಖರ್ಚು ಮಾಡದೆ, ಕೆಲಸವಾಗದೆ ಸಾಧ್ಯವಾಗುವುದಿಲ್ಲ. ಈಗ ಒಟ್ಟು ಎರಡು ಸಾವಿರ ಚಿಲ್ಲರೆ ಸಣ್ಣ ನೀರಾವರಿ ಕೆಲಸಗಳಿವೆ. ಅದರಲ್ಲಿ ಈ ವರ್ಷ ಮುಗಿಯಬೇಕಾದ ಕೆಲಸಗಳಿಗೆ ಬೇಕಾಗಿರುವುದು ಸುಮಾರು ೧೦೦ ಲಕ್ಷ ರೂಪಾಯಿಗಳು. ಇದರಲ್ಲಿ ೩೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮುಂದೆ ಇನ್ನು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಹೆಚ್ಚು ಕಡಿಮೆ ಮುಗಿದಹಾಗಾಗುತ್ತದೆ. ಆದುದರಿಂದ, ಇವೆಲ್ಲವನ್ನೂ ಇನ್ನು ಮೂರು ವರ್ಷದೊಳಗೆ ಮುಗಿಸಬೇಕೆಂದು ಒಂದು ಗುರಿಯನ್ನಿಟ್ಟುಕೊಳ್ಳಲಾಗಿದೆ ಎಂದು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅಂದಾಕ್ಷಣ, ಇನ್ನು ಮೂರು ವರ್ಷಗಳಲ್ಲೇ ಎಲ್ಲ ಸಣ್ಣ ನೀರಾವರಿ ಕಾರ್ಯಗಳು ಮುಗಿದು ಹೋಗುತ್ತವೆಂದಲ್ಲ. ಮಾನ್ಯ ಮಸಿಯಪ್ಪನವರು ಹಾಗೂ ಇನ್ನಿತರ ಸ್ನೇಹಿತರು ಹೇಳಿದ ಹಾಗೆ, ಒಣ ಬಯಲು ಪ್ರದೇಶಗಳಾದ ಚಳ್ಳಕೆರೆ, ಮೊಳಕಾಲ್ಮೂರು, ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳು, ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ನಾಗಮಂಗಲ ಮತ್ತು ಮದ್ದೂರಿನ ಕೆಲವು ಹೋಬಳಿಗಳು ಹಾಗೂ ಹಾಸನ ಜಿಲ್ಲೆಯ ಕೆಲವು ಭಾಗಗಳು ಇಂತಹ ಕಡೆಗಳಲ್ಲಿ ಮಳೆ ಕಡಿಮೆ ಬೀಳುವುದರಿಂದ, ಮತ್ತು ಅಲ್ಲಿ ಯಾವ ನೀರಾವರಿಯೂ ಆಗದೆ ಇರುವುದರಿಂದ ನಾನ್ ಫೀಸಿಬಿಲಿಟಿ ಕೆಳಗಡೆ ಬರುತ್ತವೆ. ಮಾನ್ಯ ದೇವೇಗೌಡರು, ಅವರ ಕ್ಷೇತ್ರದಲ್ಲಿನ ಒಂದು ಕೆರೆ ನಿರ್ಮಾಣದ ಬಗೆ ಪ್ರಶ್ನಿಸಿದಾಗ, ಎಕರೆಗೆ ಆರು ಸಾವಿರ ರೂಪಾಯಿ

ಖರ್ಚು ಬೀಳುವುದರಿಂದ ಅದನ್ನು ಕೈಬಿಡಲಾಗಿದೆ ಎಂದು ಹೇಳಿದೆ. ಆದರೂ, ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಅವರು ಹೇಳಿದರು. ಇಂತಹ ಕೆರೆಗಳು ನೂರಾರು ಉಳಿಯಬಹುದು. ಈಗ ನಾವು ಏನು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಪ್ರಾರಂಭ ಮಾಡಿದ್ದೇವೆ. ಅವುಗಳನ್ನು ಇನ್ನು ಮೂರು ವರ್ಷದಲ್ಲಿ ಮುಗಿಸಬೇಕೆಂದಿದ್ದೇವೆ. ಉಳಿದರೆ. ಬಹಳ ಉಳಿಯುವುದಿಲ್ಲ; ಸ್ವಲ್ಪ ಕೆರೆಗಳು ಉಳಿಯಬಹುದು. ಆಗ ಇಂದು ನಾನ್-ಫೀಸಿಬಿಲಿಟಿ ಎಂದು ಹೇಳಿದ ಕೆರೆಗಳನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಇದನ್ನೆಲ್ಲಾ ನೋಡಿಯೂ ಮಾನ್ಯ ಸದಸ್ಯರು ನಾವು ಏನೂ ಮಾಡಲಿಲ್ಲವೆಂದರೆ, ನಾವು ಇನ್ನೇನು ಮಾಡಬೇಕೆಂಬುದು ಅರ್ಥವಾಗುತ್ತಿಲ್ಲ. ಎಲ್ಲ ಹಣವನ್ನೂ ಇದಕ್ಕಾಗಿಯೇ ಖರ್ಚು ಮಾಡಬೇಕೆಂಬುದನ್ನು ತಾವೂ ಒಪ್ಪುವುದಿಲ್ಲ. ಹಾಗಾದರೆ ಇವುಗಳಿಗೆ ಹಣ ಹೇಗೆ ಒದಗಿಸಬೇಕು ? ಈ ಬಗ್ಗೆ ಯಾವೊಬ್ಬ ಮಾನ್ಯ ಸದಸ್ಯರೂ ಸರ್ಕಾರಕ್ಕೆ ಸಲಹೆ ಮಾಡಲಿಲ್ಲ. ಪ್ರತಿಬೇಡಿಕೆಗೂ ಹಣ ಸಾಲದು, ಸಾಲದು ಎಂದು ಹೇಳಿದರೇ ಹೊರತು, ಈ ಯೋಜನೆಯಲ್ಲಿ ಖೋತ ಮಾಡಿ ಇನ್ನೊಂದು ಯೋಜನೆಗೆ ಹಾಕಿ ಎಂದು ಯಾವೊಬ್ಬ ಮಾನ್ಯ ಸದಸ್ಯರು ಸಲಹೆ ಮಾಡಿದ್ದನ್ನು ನಾನು ಕಾಣೆ. ಒದಗಿಸಿರುವ ಹಣ ಸಾಲದು ಎಂದು ಮಾತ್ರ ಹೇಳುತ್ತಾರೆ.

ಇನ್ನು ಕೆರೆಗಳಲ್ಲಿರುವ ಹೂಳಿನ ಬಗ್ಗೆ ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾನೊಂದು ಪ್ರಯೋಗ ಮಾಡಿಸೋಣವೆಂದು ಪ್ರಯತ್ನ ಮಾಡಿದ್ದೇನೆ. ಮೊದಲು ೪೦ ಕೆರೆಗಳನ್ನು ತೆಗೆದುಕೊಂಡು ಯಾವ ರೀತಿ ಖರ್ಚು ಬೀಳುತ್ತದೆಂಬುದನ್ನು ವರ್ಕ್‌ಔಟ್ ಮಾಡಬೇಕೆಂಬ ಅಭಿಪ್ರಾಯ ವಿದೆ. ಹೂಳು ತೆಗೆಸುವ ಕಾರ್ಯಕ್ಕೆ ಬಹಳ ವೆಚ್ಚವಾಗುತ್ತದೆ, ಹೊಸ ಕೆರೆ ಕಟ್ಟಿಸುವುದಕ್ಕಿಂತಲೂ ವೆಚ್ಚ ಜಾಸ್ತಿಯಾಗಿಬಿಡುತ್ತದೆ ಎನ್ನುವ ಅಭಿಪ್ರಾಯವನ್ನು ಇಲಾಖೆಯವರು ನೀಡಿದ್ದಾರೆ. ಈ ಬಗ್ಗೆ ನಾನೊಂದು ಪ್ರಯೋಗ ಮಾಡಬೇಕೆಂದಿದ್ದೇನೆ. ಅದೇನೆಂದರೆ, ಎಲ್ಲಿ ಹೂಳನ್ನು ತೆಗೆಯುತ್ತಾರೆ ಆ ಊರಿನ ಜನರು ಸಹಕರಿಸಬೇಕು. ಕೆರೆ ಮಣ್ಣನ್ನು ಅಗೆಯುವುದಕ್ಕಿಂತ ಅಲ್ಲಿಂದ ಹೊತ್ತುಕೊಂಡು ಹೋಗಿ ಇನ್ನೊಂದು ಕಡೆ ಹಾಕುವುದಕ್ಕೇ ಹೆಚ್ಚು ಹಣ ಖರ್ಚಾಗುತ್ತದೆ. ಇದನ್ನು ಕಡಿಮೆ ಮಾಡಲು ಅಲ್ಲಿನ ರೈತರು ಮುಂದೆ ಬರಬೇಕು. ಕೆರೆಯಲ್ಲಿನ ಗೋಡನ್ನು ಅಗೆದ ಹಾಗೆಲ್ಲಾ ಎತ್ತಿನ ಗಾಡಿ ಇರುವ ರೈತರು ಅದನು ಸಾಗಿಸಿ ಕೊಂಡು ಹೋಗಿ, ಬೇಸಿಗೆ ಕಾಲದಲ್ಲಿ ತಮ್ಮ ಜಮೀನಿನ ಬಳಿ ಹಾಕಿಕೊಳ್ಳಬಹುದು ಅಥವಾ ಕೆರೆ ಹತ್ತಿರವೇ ಹಾಕಿಕೊಂಡಿದ್ದು ಅನಂತರ ಜಮೀನುಗಳಿಗೆ ಸಾಗಿಸಬಹುದು. ಆ ಗೋಡಿಗೇನೂ ಅವರು ದುಡ್ಡು ಕೊಡುವುದು ಬೇಡ.

ಈ ರೀತಿ ಸಹಕಾರ ಬಂದರೆ ಆಗ ಆಗತಕ್ಕಂಥಾ ಹಣದ ಖರ್ಚು ಕಡಿಮೆಯಾಗುತ್ತದೆ. ಡೀಸ್ಟಿಲಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತವೆಂದು ನನ್ನ ಒಂದು ಬ್ರಾಡ್ ಥಿಂಕಿಂಗ್ ಇದೆ. ಇದರಲ್ಲಿ ಅವರೂ ಕೂಡ ಹಳ್ಳಿಗಳಲ್ಲಿ ಸಹಾಯ ಮತ್ತು ಸಹಕಾರ ಕೊಡಿಸಬೇಕು. ಅದರಿಂದ ರೈತರಿಗೆ ಭೂಮಿ ಉತ್ತಮವಾಗುತ್ತದೆ. ಫಲದಾಯಕವಾಗುತ್ತದೆ. ನಾನೂ ಕೂಡ ಒಂದು ಸಾರಿ ಅರಸೀಕೆರೆಯ ಹತ್ತಿರ ಒಂದು ಹಳ್ಳಿಯಲ್ಲಿ ನೋಡಿದೆ. ಆ ಊರಿನ ಮುಂದೆ ಒಂದು ಕಡೆ ಈ ನಮ್ಮ ಅಸೆಂಬ್ಲಿ ಹಾಲಿನ ಅಗಲದಷ್ಟು ೫ ಅಡಿ ಅಗೆದಿದ್ದರು. ನಾನು ಅಲ್ಲಿಗೆ ಹೋಗಬೇಕಾದರೆ ಊರಿನ ಜನ ಅಗೆಯುತ್ತಿದ್ದರು. ನಾನು ಅದನ್ನು ಅರ್ಧಗಂಟೆ ನೋಡುತ್ತಾ ನಿಂತೆ. ೫ ಅಡಿ ಪ್ರಮಾಣದ ಭೂಮಿ ಯನ್ನು ಅಗೆದು ಅದರ ಮಣ್ಣನ್ನು ತೋಟಕ್ಕೆ ತೆಗೆದುಕೊಂಡು ಹೋಗಿ ಹಾಕುತ್ತಿದ್ದರು. ಅಲ್ಲಿ ಸಾಕ್ಷಿ ಗುಡ್ಡೆಯನ್ನು ನಿಲ್ಲಿಸಿದ್ದರಿಂದ ಅದು ೫ ಅಡಿ ಪ್ರಮಾಣದ್ದು ಎಂದು ನಾನು ಅಂದಾಜು ಮಾಡಿದೆ. ಆದ್ದರಿಂದ ಮ್ಯಾನ್‌ಪವರ್ ಏನಿದೆ ಅದನ್ನು ಮೊಬೈಲ್ ಮಾಡುವುದಾದರೆ ಅದು ಸಾಧ್ಯವಲ್ಲದ ಕೆಲಸ ವೇನೂ ಅಲ್ಲ. ಎಲ್ಲಾ ಸರ್ಕಾರದವರೇ ಮಾಡಿಸಬೇಕು ಎಂದರೆ I don't think it is possible. You too will not appreciate. Crores and Crores of Rupees ಹಾಕಿದರೂ ಏನೂ ಪ್ರಯೋಜನವಾಗುವುದಿಲ್ಲ.

12 NOON.

ಈಗ ಕೆಲವು ಕಡೆ ಕೆರೆಯ ಅಂಗಳವನ್ನು ಉತ್ತುಕೊಂಡಿದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಕೆಲವು ಕಡೆ, ಚನ ಪಟ್ಟಣ, ರಾಮನಗರ ಮುಂತಾದ ಕಡೆಗಳಲ್ಲಿ ಕೆರೆಗಳ ಅಂಗಳವನ್ನು ಉತ್ತುಕೊಂಡು ತೋಟ ವನ್ನು ಮಾಡಿಕೊಂಡಿದ್ದಾರೆ. ಅವರನ್ನು ಅಧಿಕಾರಿಗಳು ಕೇಳುವುದಕ್ಕೆ ಹೋದರೆ ಅವರನ್ನು ಹೆದರಿಸು ತ್ತಾರೆ, ಹೊಡೆಯುವುದಕ್ಕೆ ಬರುತ್ತಾರೆ. ಕೆರೆಗಳನ್ನು ಸರಿ ಮಾಡಿ ಎಂದರೆ ಹೇಗೆ ಮಾಡುವುದು ?

ಕೆರೆಯ ಅಂಗಳವನ್ನು ಉತ್ತುಕೊಂಡರೆ ಹೇಗೆ ಸರಿ ಮಾಡುವುದು ? ಕೆರೆಯ ಅಂಗಳದಲ್ಲಿ ಗಿಡಗಳನ್ನು ಹಾಕಿದರೆ ಕೆರೆಗೆ ಸಿಲ್ಟ್ ಬರುವುದು ಕಡಿಮೆಯಾಗುತ್ತದೆ. ಆದ್ದರಿಂದ ನಾನು ಕೆರೆಗಳ ಅಂಗಳಗಳಲ್ಲಿ ರೈತರು ಬೇಕಾದರೆ ಗಿಡಗಳನ್ನು ಬೆಳೆಸಲಿ ಅದರ ಬೆಳೆಯನ್ನು ಅವರೇ ತೆಗೆದುಕೊಂಡು ಹೋಗಲಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆ ರೀತಿ ಕೆರೆಗಳ ಅಂಗಳದಲ್ಲಿ ಗಿಡಗಳನ್ನು ಹಾಕಿದರೆ ಸಿಲ್ಟ್ ಬಾರದ ಹಾಗೆ ಅನುಕೂಲವಾಗುತ್ತದೆ.

ಒಟ್ಟಿನಲ್ಲಿ ಇರಿಗೇಷನ್ನಿಗೆ ಒದಗಿಸಿರುವ ಹಣ ಕಡಿಮೆ ಎಂದು ಹೇಳುತ್ತಿದ್ದಾರೆ. ಹಿಂದೆ ಇದಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿಲ್ಲ. ೩೩೪ ಕೋಟಿ ರೂಪಾಯಿಗಳ ಪ್ಲಾನ್‌ನಲ್ಲಿ ಇರಿಗೇಷನ್ ಗೋಸ್ಕರ ೧೦೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. Nearly 1/3rd of the total amount that is to be spent is only for this. ಇದಕ್ಕಿಂತ ಹೆಚ್ಚಿಗೆ ಹೇಗೆ ಮಾಡೋಣ? ಅಕ್ಟೋಬರ್ ತಿಂಗಳಲ್ಲಿ ಫೈನಾನ್ಸ್ ಕಮಿಷನ್‌ನ್ನಿಂದ ಏನಾದರೂ ಸ್ವಲ್ಪ ಹಣ ಬಂದರೆ ಅದರಲ್ಲಿ ಸ್ವಲ್ಪ ಹಣ ಬಂದರೆ ಅದರಲ್ಲಿ ಸ್ವಲ್ಪ ಹಣ ಖರ್ಚು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಿರಬೇಕೆಂದಿದ್ದೇನೆ. ನಮ್ಮ ಸರ್ಕಾರದ ನೀತಿ ಏನೆಂದರೆ, ಪವರ್ ಮತ್ತು ಇರಿಗೇಷನ್ನಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು, ಆದಷ್ಟು ಬೇಗ ದೇಶವಲ್ಲಿ ಈ ಎರಡು ವಿಚಾರಗಳಲ್ಲಿ ಪ್ರಗತಿಯನ್ನು ಹೊಂದಬೇಕು ಎಂದು ನಮ್ಮ ಸರ್ಕಾರದ ನೀತಿ ಇದೆ. ಅದರಂತೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಚೀಫ್ ಇಂಜಿನಿಯರುಗಳು ಬಹಳ ಜಾಸ್ತಿಯಾಗಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ವರ್ಕ್ ಲೋಡ್ ಜಾಸ್ತಿಯಾದರೆ ಇಂಜಿನಿಯರುಗಳ ಸಂಖ್ಯೆ ಜಾಸ್ತಿಯಾಗಬೇಕಾಗುತ್ತದೆ. ಈಗ ೩೧ ಜನ ಚೀಫ್ ಇಂಜಿನಿಯರುಗಳು ಇದ್ದಾರೆ. ಡಿಪಾರ್ಟ್‌ಮೆಂಟಿಗೆ ಇರುವುದು ೧೦ ಜನ. ಬೇರೆಬೇರೆ ಚೀಫ್ ಇಂಜಿನಿಯರುಗಳು ಯಾರು ಯಾರು ಇದ್ದಾರೆ ಎಂದರೆ ಸೆಕ್ರೇಟೇರಿಯೆಟ್‌ನಲ್ಲಿ ಇಬ್ಬರು ಇದ್ದಾರೆ. ಬೋರ್ಡ್ಸ್‌ನಲ್ಲಿ ಕೆಲವರು ಇದ್ದಾರೆ. ಇಂಥಾ ಕಡೆ ಅವರನ್ನು ಹಾಕಿದ್ದೇವೆ. According to the Constitution of the Boards or the Corporation, depending on the technical aspects of the work that is to be taken up, ಅವರಿಗೆ ಟೆಕ್ನಿಕಲ್ ಟೇಕಿಂಗ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಒಂದು ಕಡೆ ಒಬ್ಬರು ಮಾನ್ಯ ಸದಸ್ಯರು ಹೇಳಿದ ಹಾಗೆ, ಟೆಕ್ನೋಕ್ರೇಟ್ಸ್, ಬ್ಯೂರೋಕೇಟ್ಸ್ ಬಗ್ಗೆ ಒಂದು ಕಾಲದಲ್ಲಿ ಕೇಂದ್ರದಲ್ಲಿ ಕೂಡ ಬಹಳವಾಗಿ ಚರ್ಚೆಗೆ ಬಂದು ಬ್ಯೂರೋಕ್ರೇಟ್ಸ್‌ಗೆ ಸಂಬಳ ಜಾಸ್ತಿ ಹೋಗುತ್ತದೆ. ಟೆಕ್ನೋಕ್ರೇಟ್ಸ್‌ನ್ನು ಕೇಳುತ್ತಿಲ್ಲ, ಅದರಲ್ಲೂ ಎಲೆಕ್ಟ್ರಿಸಿಟಿ ಬೋರ್ಡಿಗೆ ಟೆಕ್ನಿಕಲ್ ಮ್ಯಾನ್ ಅಲ್ಲದೆ ಇರುವವರನ್ನು ಬೇರೆಯವರನ್ನು ತೆಗೆದುಕೊಂಡು ಬರುತ್ತೀರಿ ಎಂದು ಹೇಳಿ–I am not talking with reference to Karnataka State; I am speaking with reference to many other States–ಇದರ ಬಗ್ಗೆ ಒಂದು ದೊಡ್ಡ ಕೂಗು ಇತ್ತು. ಎಲ್ಲಾ ಕಡೆಗಳಲ್ಲೂ ಇದರ ಒಂದು ನೀತಿಯನ್ನು ಬದಲಾವಣೆ ಮಾಡಬೇಕು. ಆದಷ್ಟು ಟೆಕ್ನೋಕ್ರೇಟ್ಸ್‌ಗೆ ಎನ್‌ಕರೇಜ್ ಮಾಡಬೇಕು ಎಂದು ಕೇಂದ್ರದಲ್ಲಿ ಟೆನ್‌ಟಟೀವ್ ಆಗಿ, ಅನ್‌ಅಫಿಷಿಯಲ್ ಆಗಿ ಒಂದು ತೀರ್ಮಾನಕ್ಕೆ ಬಂದು ಸ್ವಲ್ಪ ಮಾನ್ಯತೆ ಕೊಟ್ಟರು. ನಮ್ಮ ದೇಶದಲ್ಲಿ ಟೆಕ್ನಿಕಲ್ ಮ್ಯಾನ್‌ಗೆ ಪ್ರೋತ್ಸಾಹ ಕೊಡದೇ ಹೋದರೆ ಅದಕ್ಕೆ ಐ.ಎ.ಎಸ್. ಆಫೀಸರು ಬಗುತ್ತಾರೆ. ಆಗ ಅವರು ಸುಮ್ಮನೆ ಇರುತ್ತಾರೆಯೇ ? ಆದ್ದರಿಂದ ಅವರಿಗೂ ಚೀಫ್ ಇಂಜಿನಿಯರ್ ಆಗುವುದಕ್ಕೆ ಅವಕಾಶ ಇರಬೇಕು. ಸಾವಿರಾರು ಇಂಜನಿಯರುಗಳು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪ್ರಮೋಷನ್ ಆಪರ್‌ಚುನಿಟಿ ಇಲ್ಲದೇ ಹೋದರೆ ಇನ್‌ಸೆನ್‌ಟೀವ್ ಏನಿರುತ್ತದೆ ? ಅದಕ್ಕಾಗಿ ಎಲ್ಲೆಲ್ಲಿ ಚೀಫ್ ಇಂಜಿನಿಯರುಗಳನ್ನು ಮಾಡುವಂತಹ ಸಂದರ್ಭ ಇದೆ ಅಲ್ಲೆಲ್ಲಾ ಅವರಿಗೆ ಕೊಟ್ಟಿದ್ದೇವೆ. ಹೆಚ್ಚು ಜನ ಬೇಕು ಎಂದರೆ ಹೆಚ್ಚು ಜನಗಳಿಗೆ ಪ್ರಮೋಷನ್ ಕೊಟ್ಟಿದೆ. ಒಂದೇ ಸಲ ೧೩ ಜನಗಳಿಗೆ ಚೀಫ್ ಇಂಜಿನಿಯರ್ ಮಾಡಿದ್ದೀರಿ ಎಂದು ಹೇಳಿದ್ದಾರೆ. ಇದರಲ್ಲಿ ಏನು ಅಪರಾಧವಾಗಿದೆ ? ಜಾಗ ಇಲ್ಲದಿದ್ದರೆ ಅವರಿಗೆ ಪ್ರಮೋಷನ್ ಕೊಡುವುದು ಬೇಡ. ಜಾಗ ಇರುವಾಗ ಏತಕ್ಕೆ ಪ್ರಮೋಷನ್ ಕೊಟ್ಟು ಚೀಫ್ ಇಂಜಿನಿಯರ್ ಮಾಡಬಾರದು ? Sri Armughum and others will say where are the opportunities for the people who are coming from the lower rung of ladder ? ಈಗ ಇಷ್ಟು ಜನಗಳಿಗೆ ಪ್ರಮೋಷನ್ ಕೊಟ್ಟಿರುವಾಗ ಹಿಂದುಳಿದ ವರ್ಗದವರಿಗೆ ಮತ್ತು ಹರಿಜನರಿಗೆ ಇದರಲ್ಲಿ ಅವಕಾಶ ಸಿಕ್ಕಿದೆ. ಮೇಲ್ಮಟ್ಟ

ದಲ್ಲಿ ಎಂದರೆ, ಚೀಫ್ ಇಂಜಿನಿಯರ್ ಮಟ್ಟದಲ್ಲಿ ಬೇರೆಯವರಿಗೆ ಅವಕಾಶವಿಲ್ಲ ಎಂದು ಹೇಳುತ್ತಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರು, ಯಾರೋ ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ ಏನೋ ದುಡ್ಡು ಹೊಡೆಯುವುದಕ್ಕೆ ಇಟ್ಟುಕೊಂಡಿದ್ದಾರೆಂದು ಹೇಳಿದ್ದಾರೆ ಅದು ಅವರ ತಿಳುವಳಿಕೆ ಸರಿಯಲ್ಲ ಎಂದು ಹೇಳಬೇಕಾಗುತ್ತದೆ. ಅಲ್ಲಿ ನನ್ನ ಜಾತಿಯವರು ಯಾರೂ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರ ಜಾತಿಯವರೂ ಇದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ದುಡ್ಡು ಹೊಡೆಯುವುದಕ್ಕೆ ಜಾತಿ ಬೇಡ. ದುಡ್ಡು ಹೊಡೆಯುವವರೆಲ್ಲಾ ಒಂದೇ ಜಾತಿಗೆ ಸೇರಿದವರು.

ಶ್ರೀ ಡಿ. ದೇವರಾಜ ಅರಸ್.—ಅಂತೂ ಅಲ್ಲಿ ನನ್ನ ಜಾತಿಯವರು ಇಲ್ಲ. ದುಡ್ಡು ಹೊಡೆಯುವ ಜಾತಿಗೆ ನಾನು ಸೇರಿದ್ದೇನೆ ಎಂದರೆ ಅವರು ನನಗಿಂತ ಹೆಚ್ಚು ಸೇರಿದ್ದಾರೆ. ಇಲ್ಲದೆ ಇದ್ದರೆ ಅವರು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಆಗುತ್ತಾ ಇರಲಿಲ್ಲ. ಇದರ ಬಗ್ಗೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಜೆ.ಎಚ್. ಪಾಟೀಲ್.—ಜನ ನಮ್ಮನ್ನು ಆರಿಸಿ ಕಳುಹಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮನ್ನೂ ಜನ ಆರಿಸಿ ಕಳುಹಿಸಿದ್ದಾರೆ. ಸುಮ್ಮನೆ ಇರಿ. ಕೆಲವು ವಿಚಾರಗಳನ್ನು ಅವರೂ ಮುಚ್ಚಿಟ್ಟುಕೊಂಡು ಮಾತನಾಡಿದ್ದಾರೆ. ಎಲ್ಲಾ ಬಿಚ್ಚುವುದಕ್ಕೆ ಆಗುವುದಿಲ್ಲ, ಕಷ್ಟ ಇದೆ. Out of this 30 or 31 Chief Engineers, nearly 20 Engineers are working in different Corporations and Boards only 10 people are working directly under the Government. ಅವರು ಯಾರೋ ಇವರಿಗೆ ಬೇಕಾದವರಿಗೆ ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದಾರೆ. ಅವರು ಹೇಳುವ ಪ್ರಕಾರ ಇಂಜನಗಳೂ ನನಗೆ ಬೇಕಾದವರು, ಅವರೆಲ್ಲರೂ ದುಡ್ಡು ತಂದು ಕೊಡುತ್ತಾರೆ ಎನ್ನುವ ಭಾವನೆ ಇದೆ. That is alright. He is free to think in the manner which he thinks proper. I don't think any responsible Member of this House. will accept this kind of irresponsible statement.

ಇನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿಲ್ಲ. ಆದರೂ ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಮುಂದೆ ಏನು ಮಾಡಬೇಕಾಗಿದೆ ಎಂಬುದನ್ನು ಸಭೆಗೆ ತಿಳಿಸಬಯಸುತ್ತೇನೆ. One or two people spoke about this performance budget. We have prepared what is called performance budget with regard to Irrigation and P.W.D. ೧೯೭೮-೭೯ಕ್ಕೆ ಪರ್ಫಾರ್ಮೆನ್ಸ್ ಬಡ್ಜೆಟ್ ಎಲೆಕ್ಟ್ರಿಸಿಟಿ ಮತ್ತು ಪಿ.ಡಬ್ಲ್ಯು.ಡಿ.ಯದು ಇದೆ. ಇದು ನಿಮಗೆ ಸಪ್ಲೈ ಆಗಿದೆ. ಅದೇರೀತಿ ಆರೋಗ್ಯ ಮತ್ತು ವಿದ್ಯಾಭ್ಯಾಸದ ಮೇಲೂ ಫರ್‌ಫಾರ್ಮೆನ್ಜ್ ಬಡ್ಜೆಟ್ ಇದೆ. ಅದನ್ನು ಕಳುಹಿಸಿಕೊಡುತ್ತೇವೆ. ಇನ್ನು ತಾವು ನೂತನವಾಗಿ ಏನನ್ನೂ ಮಾಡಿಲ್ಲ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದರು. There are certain things which others States have not done. We have done all these things. ಪರ್ಫಾಮೆನ್ಸ್ ಬಡ್ಜೆಟ್‌ನ್ನು ಬೇರೆಯವರು ಯಾರಾದರೂ ಮಾಡಿದ್ದಾರೆಯೋ ಎಂಬುದನ್ನು ಕೇಳಿ ನೋಡಿ. ಯಾರೂ ಕೂಡ ಮಾಡಿಲ್ಲ. ಇದರ ಜೊತೆಗೆ ಪರ್‌ಸ್ಪೆಕ್ಟೀವ್ ಪ್ಲಾನಿಂಗ್ ಮತ್ತು ಡಿಸ್ಟ್ರಿಕ್ಟ್ ಪ್ಲಾನಿಂಗ್‌ನ್ನೂ ಕೂಡ ಯಾರೂ ಮಾಡಿಲ್ಲ. ಮೊನ್ನೆ ಅಶೋಕ ಮೆಹ್ತಾರವರು ಬೆಂಗಳೂರಿಗೆ ಬಂದಿದ್ದಾಗ ನಮ್ಮ ಪ್ಲಾನಿಂಗ್‌ನ್ನು ನೋಡಿ ಮೆಚ್ಚಿಕೊಂಡರು. Mr. Ashok Mehata, Chairman of the Panchayat Raj Committee had discussion with us and he was very much pleased to know we have got District plans according to district plan we are going to allocate funds for each district this year.

Bangalore excluding Bangalore City		...	3.85 crores
Belgaum	...	...	6.68 do
Bellary	...	...	3.36 do
Bidar	...	...	3.60 do

Bijapur	...	...	8.36	do
Chickmagalur	...	...	2.82	do
Chitradurga	...	...	6.09	do
Kodagu	...	...	1.87	do
Dharwad	...	...	7.07	do
Gulbarga	...	...	6.18	do
Hassan	...	...	3.66	do
Kolar	...	...	5.56	do
Mandya	...	...	2.93	do
Mysore	...	...	5.51	do
Uttara Kannada	...	...	3.05	do
Raichur	...	...	3.89	do
Shimoga	...	...	3.70	do
Dakshina Kannada	...	...	4.47	do
Tumkur	...	...	4.31	do
Bangalore City	...	...	4.09	do

ಒಟ್ಟು ಸುಮಾರು ೯೧ ಕೋಟಿ ೧೩ ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ ಪ್ಲಾನ್‌ಗೋಸ್ಕರ ಪ್ರತ್ಯೇಕವಾಗಿ ಇಟ್ಟಿದ್ದೇವೆ. ಈ ರೀತಿಯ ಯೋಜನೆಯನ್ನು ಇಡೀ ಇಂಡಿಯಾ ದೇಶದಲ್ಲಿಯೇ ಯಾರೂ ಕೂಡ ಮಾಡಿಲ್ಲ. ನಾನು ಮೊದಲೇ ಹೇಳಿದ ಹಾಗೆ, ಇತ್ತೀಚೆಗೆ ಶ್ರೀ ಅಶೋಕ ಮೆಹ್ತಾರವರು ಬೆಂಗಳೂರಿಗೆ ಬಂದಿದ್ದಾಗ ನಮ್ಮ ಡಿಪಾರ್ಟ್‌ಮೆಂಟ್ ಬಗ್ಗೆ ಶಹಭಾಸ್‌ಗಿರಿಯನ್ನು ಹೇಳಿದರು.

ಇನ್ನು ಮಾನ್ಯ ವಿರೋಧ ಪಕ್ಷದವರು ಮಾತನಾಡುವಾಗಲೆಲ್ಲಾ, ಮುಖ್ಯಮಂತ್ರಿಗಳನ್ನು ಹರಿಜನರ ಲೀಡರ್, ಮೈನಾರಿಟಿ ಗುಂಪಿನ ಲೀಡರ್, ಬ್ಯಾಕ್‌ವರ್ಡ್ ಕ್ಲಾಸ್‌ನ ಲೀಡರ್ ಎಂದು ಏಕೆ ಕರೆಯುತ್ತಾರೆ ಎಂದು ಹೇಳುತ್ತಿರುತ್ತಾರೆ. ಇದಕ್ಕೆ ನಾನಾದರೂ ಹೇಳುವುದು ಇಷ್ಟೆ. ನಾನು ಛಾಂಪಿಯನ್, ನಾನು ಹಾಗೆ ಮಾಡುತ್ತೇನೆ, ನಾನು ಹೀಗೆ ಮಾಡುತ್ತೇನೆ. ನೀವೆಲ್ಲಾ ನನಗೆ ಬೆಂಬಲ ಕೊಡಿ ಎಂದು ಬೋರ್ಡ್ ಹಾಕಿಕೊಂಡು ತಿರುಗುತ್ತಿಲ್ಲ. ಜನಗಳೇ ಬಂದು ನನ್ನ ಬೆನ್ನು ಹತ್ತಿ ಬೆಂಬಲ ಕೊಡುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೀವು ಏನು ಬೇಕಾದರೂ ಮಾಡಿಕೊಳ್ಳಿ ನಿಮಗೆ ನಾವು ಅಡ್ಡಿ ಬರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವು ನಮಗೆ ಅಡ್ಡಿ ಬರುವುದಿಲ್ಲ, ಆದರೆ ನಮ್ಮ ಮೇಲೆ ನಿಮಗೆ ಅಸೂಯೆ ಇದೆ ಅಷ್ಟೆ. ಇದು ನೀವು ಮಾತನಾಡುವ ಧಾಟಿಯಲ್ಲೇ ಗೊತ್ತಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ನಿಮ್ಮಲ್ಲಿ ರೇಷ್ಮೆ ಇಲಾಖೆ ಇದೆ. ಜೊತೆಗೆ ನೀವು ರೇಷ್ಮೆ ಬೆಳೆಯುವುದರಲ್ಲಿ ನಿಪುಣರಿದ್ದೀರಿ. ರೇಷ್ಮೆಯನ್ನು ಹೇಗೆ ಬೆಳೆಯಬೇಕೆಂದು ನಿಮಗೆ ಚೆನ್ನಾಗಿ ಗೊತ್ತು. ರೇಷ್ಮೆ ಹುಳುವಿಗೆ ಸೊಪ್ಪು ಹಾಕಿ ಚೆನ್ನಾಗಿ ಮೇಯಿಸುತ್ತೀರಿ. ಆ ಹುಳು ಸೊಪ್ಪನ್ನು ತಿಂದು ಚೆನ್ನಾಗಿ ಕೊಬ್ಬಿ ನಿಮಗೆ ರೇಷ್ಮೆ ಕೊಟ್ಟು ಕೊನೆಗೆ ಸಾಯುತ್ತದೆ. ಅದೇ ರೀತಿ ನೀವು ರೇಷ್ಮೆ ಹುಳುಗಳಂತಹ ಕೆಲವು ಜನರನ್ನು ನಿಮ್ಮ ಸುತ್ತುಮುತ್ತ ಸೊಪ್ಪು ಹಾಕಿಕೊಂಡು ಬೆಳೆಸಿಕೊಂಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ರೇಷ್ಮೆ ಹುಳುವಿನಿಂದ ಯಾವರೀತಿ ರೇಷ್ಮೆ ಬರುತ್ತದೋ ಅದೇ ರೀತಿಯಲ್ಲಿ ಈ ಪ್ಲಾನ್‌ಗಳಿಂದಲೂ ನನಗೆ ಹಣ ಬರುತ್ತದೆಂದು ಮಾನ್ಯ ಸದಸ್ಯರ ಅಭಿಪ್ರಾಯವೆಂದು ಕಾಣುತ್ತದೆ. ಏಕೆಂದರೆ, ಇದರಲ್ಲಿ ಬರತಕ್ಕ ಹಣವೆಲ್ಲಾ ನನಗೇ ಸಿಕ್ಕುತ್ತದೆ. ಅವರಿಗೆ ಒಂದು ಸ್ವಲ್ಪವೂ ಸಿಕ್ಕದಿರುವುದಕ್ಕೋಸ್ಕರ ಹಾಗೆ ಹೇಳುತ್ತಿದ್ದಾರೆಂದು ನನಗನ್ನಿಸುತ್ತದೆ. ಮಾನ್ಯ ಸಭಾಧ್ಯಕ್ಷರೆ, ಅವರೇ ಹೇಳಿದ ವಿಷಯಗಳನ್ನು ನಾನು ಮತ್ತೊಮ್ಮೆ ಸಮರ್ಥನೆ ಮಾಡಿ ಹೇಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಅಭಿನಂದಿಸಬೇಕಾಗಿದೆ. ಸ್ವಾಮಿ, ಬ್ಯಾಕ್‌ವರ್ಡ್ ಕ್ಲಾಸ್ ಲೀಡರ್, ಹರಿಜನರ ಲೀಡರ್. ಮೈನಾರಿಟಿ ಗುಂಪಿನ ಲೀಡರ್ ಆಗುವುದಕ್ಕೆ ಮುಖ್ಯ ಮಂತ್ರಿಗಳೇ ಹೋದರು ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ನಾನು ಹೇಳುತ್ತೇನೆ; ನಾನಾಗಿ ನಾನೇ

ನಿಮಗೆ ಲೀಡರ್ ಆಗುತ್ತೇನೆಂದು ಹೋಗಿಲ್ಲ. ಅವರೇ ನನ್ನನ್ನು ಲೀಡರ್ ಆಗಿ ಮಾಡಿಕೊಳ್ಳುತ್ತಿದ್ದಾರೆ. I would like to lead those people I would love backward people I would love Harijans and I would lead them for better living too and fight against appression. ಯುಗ ಯುಗಗಳಿಂದ ನಾವು ಯಾರನ್ನು ತುಳಿದುಕೊಂಡು ಬಂದಿದ್ದೇವೋ ಅವರನ್ನು ಮೇಲಕ್ಕೆ ತರಬೇಕೆಂಬುದೇ ಸರ್ಕಾರದ ಉದ್ದೇಶ. ಇದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನೀವು ಯಾರು ಏನೇ ಹೇಳಿದರೂ ನಾನು ಇದನ್ನು ಬಿಡುವುದಿಲ್ಲ. ಏಕೆಂದರೆ ಇದು ನನ್ನ ಮನಸ್ಸಿಗೆ ಹಿಡಿಸಿದೆ. ನಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಎಲ್ಲರಿಗೂ ಮೆಚ್ಚಿಗೆಯಾಗಿವೆ. ಹಾಗಿಲ್ಲದಿದ್ದರೆ ಯಾರು ತಾನೆ ನಮ್ಮನ್ನು ಹತ್ತಿರ ಸೇರಿಸುತ್ತಾರೆ. ನನಗೆ ನಿಮ್ಮ ಬೆಂಬಲ ಕೊಡಿ ಎಂದು ಇಷ್ಟೊಂದು ಲಕ್ಷಾಂತರ ಜನರನ್ನು ಸಾಕಿಕೊಳ್ಳುವುದಕ್ಕೆ ಸಾಧ್ಯವೆ? ನಾವು ಈ ಜನಗಳಿಗಾಗಿ ಹಣ ಖರ್ಚು ಮಾಡುವ ವಿಧಾನ ಅವರಿಗೆ ಹಿಡಿಸಿರುವುದರಿಂದ ಅವರೇ ನಮ್ಮನ್ನು ಬೆಂಬಲಿಸುತ್ತಿದ್ದಾರೆ. ಇದರಲ್ಲಿ ನಿಮಗೆ ನನ್ನ ಮೇಲೆ ಅಸೂಯೆ ಇದ್ದರೆ ನಾನೇನು ಮಾಡುವುದಕ್ಕಾಗುತ್ತದೆ. ಆದರೆ ಇವತ್ತು ನಿಮ್ಮ ಅಭಿಪ್ರಾಯ ಹೇಗಿದೆ ಎಂದರೆ, all these unnecessary, uneducated lot particularly in rural areas—it is these fellows who are going to support this Congress (I) and this Devaraj Urs......

ಶ್ರೀ ಜೆ.ಹೆಚ್. ಪಟೇಲ್.—ಅವರು ಮುಗ್ಧ ಜನಗಳು. ಅವರಿಗೆ ಏನೂ ಗೊತ್ತಿಲ್ಲ. ಅವರು ಓದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ತಾವು ವಿದ್ಯಾವಂತರಿರಬಹುದು. ಆದರೆ ಬುದ್ಧಿವಂತರಲ್ಲ. ಏಕೆಂದರೆ, ವಿದ್ಯಾವಂತರಾಗಿರುವವರೆಲ್ಲಾ ಬುದ್ಧಿವಂತರಾಗಿರುವುದಕ್ಕೆ ಸಾಧ್ಯವಿಲ್ಲ. ಅವರು ಏನೂ ತಿಳಿಯದ ಮುಗ್ಧ ಜನರಾದರೂ ಬುದ್ಧಿವಂತರಾದ್ದರಿಂದ ನಮಗೆ ಓಟು ಕೊಟ್ಟಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅವರು ನನಗಿಂತಲೂ, ನಿಮಗಿಂತಲೂ ಬಹಳ ಬುದ್ಧಿವಂತರಾಗಿರುತ್ತಾರೆ.

SRI J. H. PATEL.—It is they who saved the country in 1977.

SRI D. DEVARAJ URS.—If they have save the country through you, friend, they have saved Karnataka through me and my party. ಇದು ಇವರಿಗೆ ಮಾತ್ರ ಅನ್ವಯವಾಗುತ್ತದೆ. ಈಗ ಜನರೆಲ್ಲಾ ನಮಗೆ ಏಕೆ ಓಟು ಕೊಟ್ಟರು? ಏಕೆ ನಮಗೆ ಬೆಂಬಲ ಕೊಟ್ಟರು? ಬಡವರು, ಹಿಂದುಳಿದವರು ಏಕೆ ನಮಗೆ ಬೆಂಬಲ ಕೊಟ್ಟರು? ಹೀಗೆ ಕೊಡುವುದಕ್ಕೆ ಕಾರಣ ಏನು? ನಾವು ಅವರ ಕೆಲಸಕಾರ್ಯಗಳನ್ನು ಮಾಡಿದ್ದೇವೆ, ಅವರಿಗೆ ಹಿತವಾಗುವಂಥ ಕೆಲವು ಕಾರ್ಯಕ್ರಮಗಳನ್ನು ನಾವು ಕಾರ್ಯಗತ ಮಾಡಿದ್ದೇವೆ. ಅದಕ್ಕೆ ಅವರು ನಮಗೆ ಬೆಂಬಲ ಕೊಟ್ಟಿದ್ದಾರೆ. ಇಡೀ ಇಂಡಿಯಾ ದೇಶದಲ್ಲಿ ಲ್ಯಾಂಡ್ ರಿಫಾರಂಸ್‌ನ್ನು ಎಷ್ಟು ಕಡೆಗಳಲ್ಲಿ ಜಾರಿಗೆ ತಂದಿದ್ದಾರೆ? ಎಷ್ಟು ಕಡೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದಾರೆ? ಈಗ ನಾನು ಬೇರೆ ಬೇರೆ ಕಡೆಗಳಿಂದ ಇದರ ಬಗ್ಗೆ ಅಂಕಿ ಅಂಶಗಳನ್ನು ತರಿಸುತ್ತಿದ್ದೇನೆ. ನಮ್ಮ ಕರ್ನಾಟಕದಲ್ಲಿ ನಾವು ಲ್ಯಾಂಡ್ ರಿಫಾರಂಸ್‌ನ್ನು ಇಂಪ್ಲಿಮೆಂಟ್ ಮಾಡಿರುವ ರೀತಿಯಲ್ಲಿ ಇನ್ನು ಯಾವ ರಾಜ್ಯದಲ್ಲಿಯೂ ಈ ಪ್ರಮಾಣದಲ್ಲಿ ಮಾಡಿಲ್ಲ. ಕೆಲವು ಕಡೆಗಳಲ್ಲಿ ಜನರು ನಮಗೆ ನಮ್ಮ ಕಾರ್ಯಕ್ರಮಗಳಿಂದ ಓಟು ಕೊಡುವುದಿಲ್ಲ ನಾವು ಸೋತುಹೋಗಿಬಿಡುತ್ತೇವೆಂದು ಹೇಳಿದರು. ಅಂಥ ಕಡೆಗಳಲ್ಲಿಯೂ ನಮ್ಮ ಓಟು ಬಂದೇ ಬರುತ್ತದೆ ಎಂದು ನಾವು ಹೇಳುತ್ತಿದ್ದೆವು. ಅಲ್ಲಿದ್ದಂಥ ಜನರು ಯಾರು? ಇವರು ಎಷ್ಟು ಕೂಗಿದರೂ ಸಹ ಮತ್ತು ಇವರು ಏನೇನು ಹೇಳಿದರೂ ಸಹ ಇವರಿಗೆ ಜನರು ಓಟು ಕೊಡಲಿಲ್ಲ, ನಮಗೆ ಕೊಟ್ಟರು. ಏಕೆಂದರೆ, ನಾವು ಅವರಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡಿದ್ದೇವೆ. ಲಕ್ಷಾಂತರ ಜನರಿಗೆ ಭೂಮಿ ಸಿಕ್ಕಮೇಲೆ, ಅವರಿಗೆ ನಮ್ಮ ಹಿತ ಯಾರಿಂದ ಆಗುತ್ತದೆ ಎನ್ನುವುದು ಅರ್ಥವಾಗಿದೆ. ಅವರಿಗೆ ಓಟು ಕೊಟ್ಟಿದ್ದಾರೆ. ಇದೇ ರೀತಿಯಲ್ಲಿ ಡೀ ಲಿಕ್ವಿಡೇಷನ್ ಆಕ್ಟ್‌ನ್ನು ಮಾಡಿದೆವು. ಅದರ ಪ್ರಕಾರ ಅನೇಕ ಜನರಿಗೆ ಅನುಕೂಲವಾಯಿತು. ಅನೇಕರು ಸಾಲದಿಂದ ಮುಕ್ತರಾದರು. ಇದರ ಬಗ್ಗೆ ನಾವು ಒಂದು ಅಂದಾಜು ಮಾಡಿಸಿದ್ದೇವೆ. ಇಂಡೆಬ್ಟೆಡ್‌ನೆಸ್, ೩೭೦ ಕೋಟಿ ರೂಪಾಯಿಗಳಷ್ಟು ಇದೆ. ಇದರಲ್ಲಿ ಸುಮಾರು ೧೧೦ ಕೋಟಿ ರೂಪಾಯಿಗಳನ್ನು ನಾವು ಲಿಕ್ವಿಡೇಟ್ ಮಾಡಿದ್ದೇವೆ. ಇದರಲ್ಲಿ ಸುಮಾರು ೨ ಸಾವಿರ ರೂಪಾಯಿಗಳ ಇನ್‌ಕಂ ಇರತಕ್ಕವರನ್ನೂ ಸೇರಿಸಿದ್ದೇವೆ.

ಇದರ ಬಗ್ಗೆ ಸಭೆಯ ಮುಂದೆ ಮತ್ತೊಂದು ಅಮೆಂಡ್‌ಮೆಂಟ್‌ನ್ನು ತರುವವರಿದ್ದೇವೆ. ಅದಕ್ಕೆ ತಾವೂ ಬಹುಶಃ ಒಪ್ಪಿಗೆ ಕೊಡುತ್ತೀರಿ ಎಂದು ತಿಳಿದಿದ್ದೇನೆ. ಇದನ್ನು ೨೪೦೦ ರೂಪಾಯಿಗಳಿಗೆ ಹೆಚ್ಚಿಸಬೇಕು ಎಂದು ಸರ್ಕಾರದ ಉದ್ದೇಶ ಇದೆ. ಇದನ್ನು ಈ ಸೆಷನ್‌ನಲ್ಲಿಯೇ ತಂದು ಒಪ್ಪಿಗೆ ಪಡೆಯಬೇಕು ಎಂದು ಇದ್ದೇವೆ. ಬಾಂಡೆಡ್ ಲೇಬರ್ ವಿಚಾರದಲ್ಲಾಗಲೀ, ಭೂಮಿಯನ್ನು ಹಂಚಿಕೆ ಮಾಡುವುದರ ಬಗ್ಗೆಯಾಗಲೀ, ನಾವು ಸರಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನೊಂದು ಮಾತನ್ನು ಇಲ್ಲಿ ನಾನು ಹೇಳಬೇಕಾಗಿದೆ. ನಮ್ಮಲ್ಲಿ ಡೀ ಲಿಕ್ವಿಡೇಷನ್ ಆದಮೇಲೆ ಕೇಂದ್ರದಿಂದ ಕನ್‌ಸಂಪ್‌ಷನ್ ಲೋನ್‌ನ್ನು ಬಡವರಿಗೆ ಕೊಡಬೇಕು ಎಂದು ಮಾಡಿದರು. ಅದೇ ರೀತಿಯಲ್ಲಿ ಕ್ರಾಫ್ಟ್ಸ್‌ಮನ್ಸ್ ಯಾರಿದ್ದಾರೆ ಯಾರಿಗೆ ಜಮೀನು ಇಲ್ಲ, ಬೇರೆ ಬೇರೆ ಪ್ರೊಫೆಷನ್‌ನಲ್ಲಿ ಇದ್ದಾರೆ, ಇಂಥವರಿಗೆ ಸಾಲ ಕೊಟ್ಟು ಅವರ ಪ್ರೊಫೆಷನ್ ಇಂಪ್ರೂವ್ ಮಾಡಬೇಕು ಎಂದು ಮಾಡಿದ್ದಾರೆ. ಇದಕ್ಕೆ ಡಿ.ಐ.ಆರ್. ಸ್ಕೀಂ ಎಂದು ಹೇಳುತ್ತಾರೆ. ಅಂದರೆ ಡಿಫರೆನ್ಷಿಯಲ್ ಇಂಟರೆಸ್ಟ್ ಸ್ಕೀಂ ಎಂದು. ಕೇವಲ ನಾಲ್ಕು ಪರ್ಸೆಂಟ್ ಬಡ್ಡಿಗೆ ಸಾಲ ಕೊಡುವುದು ಎಂದು ಮಾಡಿದರು, ಇಡೀ ಇಂಡಿಯಾ ದೇಶದಲ್ಲಿ ಟೋಟಲ್ ಡಿಪಾಸಿಟ್‌ನಲ್ಲಿ ಒಂದು ಪರ್ಸೆಂಟನ್ನು ಇದಕ್ಕೆ ತೆಗೆದು ಇಡಬೇಕು ಎಂದು ಮಾಡಿದರು. ಒಟ್ಟು ಹಣ ಇದರಲ್ಲಿ ೭೨ ಕೋಟಿ ರೂಪಾಯಿಗಳಷ್ಟು ಶೇಖರಣೆಯಾಯಿತು. ಇದರಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯದವರು ತೆಗೆದುಕೊಂಡಿದ್ದೇವೆ. ಆದರೆ ನಮಗೆ ಖರ್ಚಾದದ್ದು ಸುಮಾರು ೪೩ ಕೋಟಿ ರೂಪಾಯಿಗಳು. ನಮ್ಮ ಒಂದೇ ರಾಜ್ಯವೇ ೧೦ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿರುವುದು. ಉತ್ತರ ಇಂಡಿಯಾದಲ್ಲಿ ಅನೇಕ ಕಡೆಗಳಲ್ಲಿ ಇನ್ನೂ ಜಮೀನಿಗೆ ಸಂಬಂಧಪಟ್ಟ ಕಿರಿದಿಗಳು ಸಿಕ್ಕಿಲ್ಲ, ಯಾವ ಲೆಕ್ಕವೂ ಇಲ್ಲ. ಅದಕ್ಕೆ ನೀವೂ ಕೂಡ ಒಂದು ವರ್ಷದಲ್ಲಿ ಏನೂ ಮಾಡುವುದಕ್ಕಾಗದೆ ಒದ್ದಾಡುತ್ತಿದ್ದೀರಿ ಸದ್ಯಕ್ಕಂತೂ ಇದು ಕಷ್ಟ ಇದೆ. ಆದರೆ ಇಲ್ಲಿ ನಾವು ಎಲ್ಲಾ ಮಾಡಿದ್ದೇವೆ ಇಲ್ಲಿ ನಿವೇಶನಗಳಿಗೆ ಜಾಗಗಳನ್ನು ಹಂಚಿದ್ದೇವೆ, ಆದ್ದರಿಂದಲೇ ಜನ ನಮಗೆ ಓಟು ಕೊಟ್ಟಿದ್ದಾರೆ. ಮನೆಗಳನ್ನು ಕೊಡುತ್ತಿದ್ದೇವೆ, ಇಂಥ ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ರೀತಿಯಾಗಿ ನಾವು ಬಡವರ ಕೆಲಸ ಮಾಡಿದ್ದೇವೆ, ಮತ್ತೆಯೂ ಮಾಡುವವರಿದ್ದೇವೆ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಮತ್ತೆ, ಬ್ಯಾಕವರ್ಡ್ಸ್ ಕ್ಲಾಸ್ ಬಗ್ಗೆ ಕೆಲವರು ಹೇಳಿದರು. ಇದು ಒಂದು ಜಾತಿಯಲ್ಲ. ಎಕನಾಮಿಕಲಿ ಬ್ಯಾಕವರ್ಡ್ ಯಾರು ಇದ್ದಾರೆ, ಅವರೇ ನಮಗೆ ಮತ ಕೊಟ್ಟಿದ್ದಾರೆ. ಅನುಕೂಲವಾಗಿರುವವರು ನಮಗೆ ಮತ ಕೊಟ್ಟಿಲ್ಲ, ನನ್ನ ಕ್ಷೇತ್ರದಲ್ಲಿ ಒಂದು ವಿಚಿತ್ರ ನಡೆಯಿತು. ನಮ್ಮ ಇಡೀ ತಾಲ್ಲೂಕಿನಲ್ಲಿ ಸುಮಾರು ೧೫ ಮನೆಯವರು ಅರಸ್ ಅವರು ಇದ್ದಾರೆ. ಕೆಲವರು ನನಗೆ ಬಂದು ಹೇಳಿದರು, ಅವರು ನಿಮ್ಮ ವಿರೋಧ ಮಾಡುತ್ತಿದ್ದಾರೆ ಓಟು ಕೊಡುವುದಿಲ್ಲ ಎಂದು. ಇದಕ್ಕೆ ಏನು ಕಾರಣ ಇರಬಹುದು ಎಂದು ನಾನು ವಿಚಾರ ಮಾಡಿದಾಗ, ಅವರು ಪಾಪ, ೪—೫ ಸಾವಿರ ರೂಪಾಯಿಗಳನ್ನು ಸಾಲ ಕೊಟ್ಟುಕೊಂಡಿದ್ದರು ಈ ಡೀಲಿಕ್ವಿಡೇಷನ್ ಬಂದಮೇಲೆ ಅದೆಲ್ಲಾ ಹೋಯಿತು. ಅವರು ಮಾತ್ರ ಇವನ ಮನೆ ಹಾಳಾಗಿ ಹೋಗ, ನಮ್ಮ ಹಣವನ್ನೆಲ್ಲಾ ಹಾಳು ಮಾಡಿದ ಎಂದುಕೊಂಡು ನನಗೆ ಓಟು ಕೊಡಲಿಲ್ಲ. ಇದರಲ್ಲಿ ಸ್ವಲ್ಪ ಅರ್ಥವೂ ಇದೆ. ಇದು ಸಹಜವಾಗಿಯೇ ಇದೆ. ಯಾರು ಯಾರು ಸಾಲ ಕೊಟ್ಟಿದ್ದರೋ ಅವರದು ಡೀ ಲಿಕ್ವಿಡೇಷನ್‌ನಲ್ಲಿ ಹಣ ಹೋಯಿತು ಅದೇ ರೀತಿಯಲ್ಲಿ ಯಾರು ಯಾರು ಬಡವರ ಜಮೀನನ್ನು ಅಕ್ವಯರ್ ಮಾಡಿಕೊಂಡಿದ್ದರೋ ಅದನ್ನು ಮತ್ತೆ ಅವರಿಗೆ ವಾಪಸ್ ಕೊಡಿಸಿದ್ದೇವೆ. ಯಾರಿಗೆ ನಮ್ಮಿಂದ ತೊಂದರೆಯಾಗಿದೆ ಅವರು ನಮ್ಮ ವಿರುದ್ಧ ಮಾಡಿದ್ದಾರೆ. ಅವರು ನಿಮಗೆ ವೋಟು ಕೊಡಲಿಲ್ಲ ಅಂದರೆ ಮತ್ತೆ ಅವರು ಕಾಂಗ್ರೆಸ್ (ಆರ್)ಗೆ ಕೊಟ್ಟರೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ಎಲ್ಲಾ ಒಳ್ಳೆಯ ಮೆಂಬರ್ಸ್‌ಗೆ ಸಪೋರ್ಟ್ ಕೊಟ್ಟಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ದೇವೇಗೌಡರು ಲೀಡರ್ ಆಗಿದ್ದಾಗಲೂ ಸಹ ನಮಗೆ ಇಂಥ ಸಮಯದಲ್ಲಿ ಒಳ್ಳೆಯ ಸಹಕಾರ ಕೊಟ್ಟಿದ್ದಾರೆ.

ಶ್ರೀ ಎಸ್. ಶ್ರೀನಿವಾಸ್.—ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ ಸಹ ಇಂದಿರಾಗಾಂಧಿಯವರ ಫೋಟೋ ತೆಗೆದರೆ ನಿಮಗೆ ಓಟು ಬರುವುದಿಲ್ಲ,

ಶ್ರೀ ಡಿ. ದೇವರಾಜ ಅರಸ್.—ನೀವು ಯಾವ ಗಾಂಧಿ ಫೋಟೋ ಇಟ್ಟುಕೊಂಡಿದ್ದೀರಿ?

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಇಂದಿರಾಗಾಂಧಿಯವರ ಬಗ್ಗೆ ಅಷ್ಟು ನಂಬಿಕೆ ಇದ್ದರೆ ಸಾಕು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧ ಪಕ್ಷದ ನಾಯಕರು, ೨೦ ರೂಪಾಯಿಗಳ ಟ್ಯಾಕ್ಸ್ ಬಂತು ಇದು ಹೆಚ್ಚಿಗೆ ಮಾಡಿರತಕ್ಕದ್ದು ಎಂದು ಹೇಳಿದರು. ಪರ್‌ಕ್ಯಾಪಿಟಾ ಇನ್‌ಕಂ ಜಾಸ್ತಿಯಾಗಿದೆ, ಆದರೆ ಇದೂ ಸಹ ಟ್ಯಾಕ್ಸ್ ಲೆವೆಲ್‌ಗೆ ಬಂದಿದೆಯಲ್ಲಾ ಎಂದು ಹೇಳಿದರು. ನಾನು ಹೇಳುತ್ತೇನೆ, ಅವರು ತಮ್ಮ ಲೆಕ್ಕವನ್ನು ಸ್ವಲ್ಪ ತಿದ್ದಿಕೊಂಡರೆ ಉತ್ತಮ ಎಂದು ನಾನು ಟ್ಯಾಕ್ಸೇಷನ್‌ನ್ನು ಕರೆಂಟ್‌ಪ್ರೈಸ್ ಲೆಕ್ಕದಲ್ಲಿ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಬಿಟ್ಟು, ಹಳೆಯ ಲೆಕ್ಕದಲ್ಲಿ ಲೆಕ್ಕ ತೆಗೆದುಕೊಂಡರೆ ಪರ್‌ಕ್ಯಾಪಿಟಾ ಇನಕಂಗೂ ಇದಕ್ಕೂ ವ್ಯತ್ಯಾಸ ಬರುತ್ತದೆ. ೧೯೫೫—೫೬ರಲ್ಲಿ ಪ್ರೈಸ್ ಲೆವೆಲ್ ತೆಗೆದುಕೊಂಡರೆ, ಪರ್‌ಕ್ಯಾಪಿಟಾ ಇನಕಂ ೨೦ ರೂಪಾಯಿಗಳು ಎಂದು ಕಾಣುತ್ತದೆ.

In 1972 it was about 294, in 1978 it is about 364 in accordance with 55–56 price level, then the difference is going upto 70. Again on the same level if you take taxation measurers the per capita tax burden comes to 20. Even then there is going to be difference of 45 to 50.

೧೨—೩೦ ಪಿ ಎಂ.

ಇದು ನಾವು ಈ ವರ್ಷಗಳಲ್ಲಿ ಮಾಡಿರುವ ಸಾಧನೆ ಎಂದು ಧೈರ್ಯವಾಗಿ ತಮ್ಮ ಮುಂದಿಡತ್ತಿದ್ದೇನೆ. ನಿಮ್ಮ ಲೆಕ್ಕವನ್ನು ಏನು ಹೇಳಿದಿರಿ ಅದಕ್ಕೂ ಇದಕ್ಕೂ ಇಷ್ಟೇ ವ್ಯತ್ಯಾಸ. ನೀವು ಏನು ರೆಡ್ಯೂಸ್ ಮಾಡಿದಿರಿ ಅದಕ್ಕೆ ಸ್ಟ್ಯಾಗ್ನೆಷನ್ ಬರ್ಡನ್ನನ್ನು ಅದೇ ಲೆವೆಲ್‌ನಲ್ಲಿ ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಟ್ಯಾಕ್ಸಸ್ ಎಫರ್ಟ್ ಮಾಡಿರುವುದಕ್ಕೆ ೨ ಸಾರಿ ಹೇಳಿದ್ದೇನೆ. ಅದಕ್ಕೆ ಶ್ರಮ ಪಟ್ಟಿದ್ದೇವೆ, ಆದರೂ ಕೂಡ ಅದಕ್ಕೆ ಕೇಂದ್ರದಿಂದ ತಕ್ಕಂತಹ ಹಣಕಾಸಿನ ದ್ಯವಸ್ಥೆ ಆಗುತ್ತಿಲ್ಲವೆಂದು ಹೇಳಿದೆ. ಅದಕ್ಕೆ ಒಂದು ಅಂಕಿ ಅಂಶವನ್ನು ಕೊಡುತ್ತೇನೆ. Tax effort ratio on expenditure and income, percentage ತೆಗೆದುಕೊಂಡು ಒಂದು ಲೆಕ್ಕ ಹಾಕಿದೆ. ೧೯೭೬—೭೭ ರಲ್ಲಿ ಆಂಧ್ರದವರ ಪರ್ಸೆಂಟೇಜ್ ೧೧.೫ ಪರ್ ಕ್ಯಾಪಿಟ ಇದ್ದರೆ ೩೪ ಪರ್ಸೆಂಟನ್ನು ಡಿಸ್ಕ್ರಿಷನರಿ ಗ್ರಾಂಟ್ ಕೊಡಲಾಗಿದೆ. ಅದೇ ರೀತಿ ಅಸ್ಸಾಂನವರದ್ದು ೯.೫ ಇದ್ದರೆ ೬೩ ಬಂದಿದೆ, ಬಿಹಾರ್‌ನಲ್ಲಿ ೯.೯ ಇದ್ದರೆ ೩೯ ಬಂದಿದೆ, ಗುಜರಾತ್‌ನಲ್ಲಿ ೧೧ ಇದ್ದರೆ ೫೮ ಬಂದಿದೆ; ಹರಿಯಾಣದಲ್ಲಿ ೧೧.೨ ಇದ್ದರೆ ೭೭ ಬಂದಿದೆ, ಕರ್ನಾಟಕದಲ್ಲಿ ೧೫.೩ ಇದ್ದರೆ ೪೬ ಬಂದಿದೆ, ಕೇರಳದಲ್ಲಿ ೧೩.೫ ಇದ್ದರೆ ೩೬ ಬಂದಿದೆ, ಮಧ್ಯಪ್ರದೇಶದಲ್ಲಿ ೧೧ ಇದ್ದರೆ ೪೦ ಬಂದಿದೆ.

This is one of the reasons why I have been taking up 1963 even in the Southern Chief Ministers' Conference and NDC meeting. This is where the Government of India sould no more keep this much of money for giving discretionary grants to several States. That percentage should be reduced. They have to keep some money. ಇಟ್ಟುಕೊಳ್ಳಲಿ, ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ಬಹಳ ವ್ಯತ್ಯಾಸ ಇರುತ್ತದೆ. They are backward they have to be given more facilities by way of finance. ಆದರೆ ಒಟ್ಟು ಬಡ್ಜೆಟ್ಟಿನಲ್ಲಿ ೩೫ ಪರ್ಸೆಂಟ್ ಡಿಸ್ಕ್ರಿಷನರಿ ಗ್ರಾಂಟ್ ಕೊಟ್ಟರೆ ಅದು ಬಹಳವಾಗುತ್ತದೆ. ಆದ್ದರಿಂದ ಒಂದು ಫಾರ್ಮುಲ ಪ್ರಕಾರ ಹೆಚ್ಚಿಗೆ ಹಣವನ್ನೇ ಎಲ್ಲರಿಗೂ ಕೊಡುತ್ತಿದ್ದೇವೆ. ಅದಕ್ಕೆ ಹೇಳುತ್ತಿರುವುದು ಹೆಚ್ಚಿಗೆ ಹಾಕಬೇಡಿ ಎಂದು

ಶ್ರೀ ಎಸ್.ಆರ್. ಬೊಮ್ಮಾಯಿ,—೫ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಕಡಿಮೆ ಬಂದಿದೆ.

ಶ್ರೀ ಡಿ. ದೇವರಾಜ ಅರಸ್ —ಕಮೀಷನ್‌ನಲ್ಲಿ ಕಡಿಮೆ ಆಯಿತು. ಡಿಸ್ಕ್ರಿಷನರಿ ಗ್ರಾಂಟಿಗೆ ಎಂದು ಏನು ಇಡಲಾಗಿದೆ, ಅದನ್ನು ಕಡಿಮೆ ಮಾಡಬೇಕು. ಡೀವ್ಯಾಲ್ಯೂಯೇಷನ್ ಆಫ್ ಟ್ಯಾಕ್ಸಸ್ಸಿನ ಕೆಲವು ಪಾಯಿಂಟ್ಸನ್ನು ಸೇರಿಸಿಕೊಂಡಿದ್ದೇವೆ, ಅದನ್ನು ಸೇರಿಸಿಕೊಳ್ಳಬೇಕು. ಇದು ನಮ್ಮ ನಿಲುವು. ಇದನ್ನು ಜನತಾ ಸರ್ಕಾರ ಇರುವ ರಾಜ್ಯಗಳ ಮುಖ್ಯಮಂತ್ರಿಗಳೂ ಕೂಡ ಒಪ್ಪುತ್ತಾರೆ. ಈ

ವಿಚಾರವನ್ನು ನಾನು ಬಹಿರಂಗವಾಗಿಯೇ ಹೇಳಿದ್ದೇನೆ. I have talked even with the Janatha Government. They all agree. The Chief Ministers of Madh a Pradesh, Rajasthan, Punjab, I aave talked to them all. ಪ್ಲಾನನ್ನು ಮಾಡುವಾಗ ನಾವು ಸರಿಯಾಗಿ ಮಾಡಿಲ್ಲವೆಂಬ ಮಾತನ್ನು ತಾವು ಏನು ಹೇಳುತ್ತಿದ್ದೀರಿ ಅದಕ್ಕೆ ನಾವು ಯಾವ ಒಂದು ರೀತಿಯಲ್ಲಿ ಹೋಗಿದ್ದೇವೆಂಬುದಕ್ಕೆ ತಮಗೆ ಕೆಲವು ವಿಷಯಗಳನ್ನು ಹೇಳಿದರೆ ತಾವು ಒಪ್ಪುತ್ತೀರಿ. ನಾವು ಹೆಚ್ಚಾಗಿ ಡೆವಲಪ್‌ಮೆಂಟಲ್ ಸೈಡ್ ಕಡೆ ನಿಗಾ ಕೊಟ್ಟಿದ್ದೇವೆ. ಪರ್ ಕ್ಯಾಪಿಟ ಇನ್‌ಕ್ರೀಸ್ ಆಗಿರತಕ್ಕ ಇನ್‌ಕಂ ವಿಚಾರ ಹೇಳಿದೆ, ನಮ್ಮ ಸ್ಟೇಟ್ ಇನ್‌ಕಂ ಜಾಸ್ತಿಯಾಗಿದೆ. There are some measures which we have been trying. ನಾನು, ಬಹಳ ದೂರ ಹೋಗಿದ್ದೇವೆಂದಾ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ವಿಚಾರದಲ್ಲಿರತಕ್ಕದ್ದನ್ನು ಹೇಳುವುದಾದರೆ, included in income and property ಇದನ್ನು ಕಡಿಮೆ ಮಾಡಬೇಕೆಂಬ ತತ್ವವನ್ನು ತಾವು ಒಪ್ಪುತ್ತೀರಿ. Of course. Sri Patel who subscribes to it from the beginning must know that the taste of the pudding is in eating. Let us see. ಇದರಲ್ಲಿ ನಾವು ಬಹಳ ದೊಡ್ಡ ಎಫರ್ಟ್ ಮಾಡಿದ್ದೇವೆಂದು ನಾವು ಕೊಚ್ಚಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆ ದಿಸೆಯಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಲ್ಯಾಂಡ್ ರಿಫಾರಮ್ಸ್ ಮೆಷರ್ ಒಂದು ಪ್ರಯತ್ನ, ಮತ್ತೆ ಅವರಿಗೆ ಅವರ ಸಂಪಾದನಾ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಮತ್ತು ಅವರಿಗೆ ಸಾಧನಗಳನ್ನು ಒದಗಿಸುವುದಕ್ಕೆ ಮಾಡಿಸತಕ್ಕದ್ದು ಮತ್ತೊಂದು ಪ್ರಯತ್ನ. ಡೆಮಾಕ್ರೆಟಿಕ್ ಸೆಟ್ ಅಪ್‌ನಲ್ಲಿ ಟ್ಯಾಕ್ಸೇಷನ್ ಇನ್ನೊಂದು ಪ್ರಯತ್ನ. ಅರ್ಬನ್ ಸೀಲಿಂಗ್ ಪ್ರಾಪರ್ಟಿ ಸೀಲಿಂಗ್ ಮಾಡಬೇಕೆಂದು ೧೯೭೪ರಲ್ಲಿ ನಾನು ಒಂದು ಮೆಷರ್ ತಂದೆ. ಆ ಮೆಷರ್ ಬೇಡವೆಂದು ಕೇಂದ್ರದವರು ಹೇಳಿದರು. Purely the problem should go to the previous Government and the rest should go to the present government in this behalf. ಈಗ ಬಂದ ಸರ್ಕಾರದವರು ಏನು ಮಾಡಿದರು ಎಂದರೆ ಅದನ್ನು ಹಾಗೆ ಇಟ್ಟರು, ಇನ್ನೂ ಇಟ್ಟಿದ್ದಾರೆ. ಅರ್ಬನ್ ಪ್ರಾಪರ್ಟಿ ತೆಗೆದುಕೊಳ್ಳಬೇಕೆಂದು ಏನು ಮಾಡಲಾಗಿತ್ತು ಅದನ್ನು ಇನ್ನೂ ಮುಂದೆ ಹಾಕುತ್ತಿದ್ದಾರೆ. ೧೯೭೭ ರಿಂದ ೧೯೭೯ರ ವರೆಗೆ ೨ ವರ್ಷಗಳ ಕಾಲ ಮುಂದಕ್ಕೆ ಹಾಕಿದರು. Why are they doing it? ಗುಜರಾತ್‌ನಲ್ಲಿ ಇಲ್ಲಿ ಮಾನ್ಯ ಬೊಮ್ಮಾಯಿಯವರು ಮುಂದಕ್ಕೆ ಹಾಕಿ ಎಂದು ಹೇಳುವಂತೆ ಹೇಳುವುದಿಲ್ಲ. ಆಂಧ್ರದ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆಂದರೆ, ನಿಮ್ಮನ್ನು ಕೇಳಿ ಕೇಳಿ ಸಾಕಾಗಿದೆ, ನಿಮ್ಮಿಂದ ಸಾಧ್ಯವಾಗುವುದಿಲ್ಲವಾದ್ದರಿಂದ ನಾವೇ ಮಾಡುತ್ತೇವೆ ಎಂದು. I want to withdraw whatever power we have given to you he has made a statement. ನೋಡಿ ನೋಡಿ ಸಾಕಾಗಿದೆ ಎಂದು ನಾವೂ ಕೂಡ ಹೇಳಬೇಕಾಗಿ ಬರುತ್ತದೆ. ನಾನು ೨ ಸಾವಿರ ಎಕರೆ ಬರುತ್ತದೆಂದು ತಿಳಿದುಕೊಂಡಿದ್ದೆ. ಇನ್ನೂ ಎಷ್ಟಿದೆ ಎಂದು ಬಂದಿಲ್ಲ. ಎಲ್ಲರಿಗೂ ಸಬ್‌ಸ್ಕ್ರೈಬ್ ಮಾಡುತ್ತಾರೋ, ಬಿಡುತ್ತಾರೋ, ಕಾದು ನೋಡೋಣ. ಮನೆ ಕಟ್ಟಲು ಜಾಗ ಇಲ್ಲದವರಿಗೆ ಜಾಗ ಕೊಡುವ ಸಲುವಾಗಿ ರೈತರಿಗೆ ಸೀಲಿಂಗ್ ಮಾಡಿದೆವು. ಇದಕ್ಕೆ ಅನೇಕ ಸದಸ್ಯರುಗಳು ರೈತರೊಬ್ಬರಿಗೇ ಏಕೆ ಮಾಡುತ್ತೀರಿ, ಪಟ್ಟಣಗಳಲ್ಲಿರತಕ್ಕವರು ಎಷ್ಟಾದರೂ ಆಸ್ತಿಯನ್ನು ಇಟ್ಟುಕೊಳ್ಳಬಹುದೆ ಎಂದಾಗ, ಇದೂ ಕೂಡ ಅದೇ ನೀತಿ ಎಂದು ಶುರು ಮಾಡಿ ಅದನ್ನು ಇದುವರೆಗೆ ಜಾರಿಗೆ ಕೊಡುವುದಕ್ಕೆ ಬಿಟ್ಟಿಲ್ಲ. ನಮ್ಮ ಅನ್ಯುಯಲ್ ಪ್ಲಾನಿನ ಡೆವಲಪ್‌ಮೆಂಟಲ್ ಔಟ್‌ಲೇ ೧೯೭೪-೭೫ ರದ್ದು ೧೫೦ ಕೋಟಿ ರೂಪಾಯಿಗಳು, ೧೯೭೫-೭೬ ರದ್ದು ೨೦೦ ಕೋಟಿ ರೂಪಾಯಿ ೧೯೭೬-೭೭ರದ್ದು ೨೫೨ ಕೋಟಿ ರೂಪಾಯಿಗಳು, ೧೯೭೭-೭೮ರದ್ದು ೨೭೬ ಕೋಟಿ ರೂಪಾಯಿಗಳು ಹಾಗೂ ಈ ವರ್ಷದ್ದು ೩೭೪ ಕೋಟಿ ರೂಪಾಯಿಗಳು ಒಟ್ಟು ೧೨೫೨ ಕೋಟಿ ರೂಪಾಯಿಗಳು. This amount we have spent for developmental activities.

This is the amount we have spent for the developmental activities. Now, from 1978 to 1983, for a period of 5 years, we have made a projecton of the approximate amount which we want to spend; we want to spend nearly Rs. 2,500 crores for these five years for all development activities. We have spend about Rs. 1,252 crores upto

1978, and this figure has been doubled for the coming five years. As a result of these developmental activities, we have made a rough calculation that continuing employment will be to the tune of 69,00.000 of persons and new employment will be in the order of 17 lakhs-total 86 lakhs persons employment potential will be created. This apart, the developmental activities include non-plan outlay also which includes Cauvery basin also.

The State income during 1974-75 was Rs. 2,544 crores, and during 1977-78 it is Rs. 2,800 crores. It might have been something more, but it is due to electricity cut that we have reached the figure of Rs. 2,800 crores. I have already stated about the per capita income Some hon. members said that priority has not been given to rural development. It is not correct. There are various items on which we have spent. Out of total amount of Rs, 370 crores developmental outlay, we want to spend this year nearly 50 per cent on rural developmental projects and schemes, i.e., we want to spend nearly Rs. 190 crores. This includes, Agriculture, Research, Education, Special Programmes, Land Reforms, Irrigation, Water, Soil Conservation, Area Development, Animal Husbandry, Co-operation, Fisheries, Community Development and Panchayati Raj programmes, and 25 percent for Rural electrification. Theses are all several programmes which are included to improve the rural economy as well as the rural life.

I think I have already stated the priority we have given to Power and Irrigation. For power we have spent Rs. 100 crores from 1961 to 1972 from 1972 to 1979 Rs. 432 crores during 1974-75 alone Rs, 45 crores, and this year we have provided Rs. 97 crores. ಇಷ್ಟಾದರೂಕೂಡ ಸೋಷಿಯಲ್ ಸರ್ವೀಸ್ ಎಂದು ಏನು ಹೇಳುತ್ತೇವೆ ಅದರ ಬಗ್ಗೆ ಕೂಡ ನಾವು ನೆಗ್ಲೆಕ್ಟ್ ಮಾಡಿಲ್ಲ. ಅದನ್ನು ತಮಗೆ ಹೇಳುವುದಾದರೆ, Education is one of the social services. During 1971-72 we have spent Rs. 50 crores, and now this year we are spending Rs. 142 crores. About housing during 1972-73 there was a provision of Rs. 1.6 crores, but this year we are going to spend Rs. 15 crores. For the welfare of SC/STs, during 1972-73 the provision was Rs. 1.8 crores, but this year we are spending Rs. 20.3 crores.

Coming to implementation of Plan programmes, it is one of the measuring rods to say whether the Government machinery is doing its work, to some extent, satisfactorily or not. These achivements must be one of the methods by means of which we should be in a position to measure the efficiency or otherwise.

Coming to Irrigation, our target during 1977-78 was to irrigate 1.07 lakh hectares, and we have achieved that target in the year 1977-78. The target that is fixed for the current year is 1.09 lakh hectares which are going to achieve.

About food-grains, our target during last year was 73 lakh tonnes but we were able to achieve 70 lakh tonnes target due to vagaries of monsoon. Last year in the beginning there were rains, but for another 3-4 months there were no rains, and again we had heavy rains during October and November. Therefore, we could achieve the target of 70 lakh tonnes as against 73 lakh tonnes. This year the target fixed is 75 lakh tonnes.

Sugarcane : Last year we had a target of 104 lakh tonnes and we achieved almost 104 lakh tonnes. This year we are going to have a target of 112 lakh tonnes of sugarcane. I do not know whether the farmers are likely to decrease or increase the sugarcane area.

Oil Seeds : Last year we targetted for 9.4 lakh tonnes and we achieved 8.9 lakh tonnes. This year we have got a target of 10 lakh tonnes.

Cotton : Last year our target was 9.5 lakh bales of 170 kgs, each, and we achieved 9 lakh bales. During 1978-79 we have a target of 12 lakh bales.

Forestry Economic Plantations ; 122 thousand hectares was our target during 1977-78 and we have reached that target. This year we want to have 127 thousand hectares of new plantations.

Fish production: Last year our target was 175 thousand tonnes, and we reached the target of 180 thousand tonnes. This year we want to have 190 thousand tonnes as our target.

Villages electrified : Last year 600 villages were electrified against the target of 600 villages. This year we propose to electrify 650 villages,

Pump sets energised : Last year our target was 15,000 and we have reached that target. This year our target is to energise 20,000 pump sets,

Borewells with Hand pumps : Last year the target was to have 5,500 bore wells and we reached that target. This year also we propose to have 5,500 bore wells.

House sites : Last year our target was to give 8,64,000 house sites and we have reached the target of 7,87,000. ಮಿಕ್ಕಿದ್ದನ್ನು ನಾವು ಕಂಪ್ಲಿಟ್ ಮಾಡಬೇಕೆಂದಿದ್ದೇವೆ. ಒಂದೇ ವರ್ಷದಲ್ಲಿ ೯ ಲಕ್ಷ ಮನೆಗಳನ್ನು ಕಟ್ಟಬೇಕಾದರೆ ಕಷ್ಟವಾಗುತ್ತದೆ. ಆದ್ದರಿಂದ ಹಂತಹಂತವಾಗಿ ಅದನ್ನೂ ಮಾಡಿಕೊಂಡು ಹೋಗುತ್ತೇವೆ. ೧,೩೦,೦೦೦ ಜನರಿಗೆ ಅಂದರೆ ಬಡ ಜನರಿಗೆ ಮನೆಗಳನ್ನು ಕಟ್ಟಿದ್ದೇವೆ.

		Rs. 15 crores have been set apart for housing.
Perspective plan for the next five years.		
State Income	71-72 level	Rs. 1,632 crores
	77-78	Rs. 2,800 crores
	82-83 (projected figure)	Rs. 4,200 crores
Per Capita income		
	71-72	Rs. 3,540
	77-78	840
	82-83	1,260
Production of Foodgrains		in lakh tonnes
	71-72	60
	77-78	70
	82-83	88
Production of Oilseeds		
	71-72	8.5
	77-78	9.5
	82-83	14
Production of sugarcane		
	71-72	91.8 lakh tonnes
	77-78	104 lakh tonnes
	82-83	200 lakh tonnes
Production of cotton		In lakh bales
	71-72	5.8
	77-78	9.5
	28-83	13
Irrigation potential:		Major and Minor (inclusive) in lakh hectres
	71-72	13 lakh hectres
	77-78	20 lakh hectres
	82-83	30 lakh hectres
Power		Installed capacity M. W.
	71-72	967
	77-78	1140
	82-83	2130

Students enrolement in Primary schools Class I to Class VII	In lakh Nos.
71-72	39
77-78	46
82-83	62
Midday meals	No. of children in lakhs
71-72	12
77-78	24
82-83	32
Scholarships	in Nos.
71-72	45.000
77-78	1.6 lakhs
82-83	4 lakhs
Scholarships to SCs	
71-72	40,000
77-78	1.1 lakh
82-83	2.6 lakhs
Estimated expenditure on scholarships	In Crores
71-72	...
77-78	3 crores
82.83	6 crores
Houses for the rural poor	in Lakh Nos.
71-72	...
77-78	1.3
82-83	7

7 lakhs houses for the rural poor, that does not mean we have covered everybody. Nearly 75 perecent of the poor people will have been covered by the Janatha Housing scheme. We want to achieve the target of 7 lakhs houses towards the end of 1982.

Assistance to marginal farmers who are 27 lakhs families.

71-79	36,000 families
77-78	3,20,000
82-83	10 lakh farmers
Assistance of handloom weavers	in Lakh Nos.
71-72	...
77-78	1.3
82-83	2 lakhs

Villages electrifies

	71–72	10,075
	77–78	15,480
	82–83	26,826
Hamlets electirfied		,...3,000
Rural roads		No. of villages to be connected by roads
		22,000

I do not say they are metalled roads-mud roads are also there. Towards the end of 82.83 all the villages will be covered.

Consumption credit:		families to be helped in Lakhs
	77–78	5
	82–83	10

Amount of consumption credit given in Crores We have given Rs. 6 crores in 77–78 and we want to reach a target of Rs. 14 crores in 82–83.

Drinking water facilities : No. of villages covered by borewells.

Now we have covered 19,826 villages with borewells. We want to see that all these 26, 826 villages are completelly given the facility of drinking water by the end of 82–83.

Irrigation Wells:		
	71–72	3 lakhs wells
	77–78	4.5
	82–83	5.8
No. of irrigation wells energies.		
	71–72	1.5 lakhs
	77–78	2.5 lakhs
	82–83	3.8 lakhs are going to be energised.

1–00 P.M.

Now I will also give you the projected figures of the financial outlay on various heads. Now the agricultural outlay for 1978–83 is Rs, 389 crores. Yesterday the hon-Member Sri J. H. Patel pointed out that the Central policy is to give more and more facilities to agri ultural growth. I congratulate the Central Government for their policy they have adopted with regard to develop

ment of agriculture in the country. They have also agreed to the policy that irrigation and power should be given top-most priority in the plan. This year they have provided considerably good amount for agriculture. I did point out this. But one quarrel I had with them was when you are providing so much money why nearly 40 to 50 per cent of the money should be in the central sector, I want the hon. Members to appreciate this particular point. If this money is to be spend then why do you want so much money in the central sector. You allow us to spend it, Where it is absolutely necessary for the Central Government to spend on central schemes it is alright, The total money provided for agriculture is Rs. 1600 crores, out of which, Rs 850 crores are provided for agriculture in the central sector. It is more than half. This I have pointed out in the N.D.C. meeting. This is where we thoroughly disagree with the planning body. Naturally in Centre always everybody who goes there wants to keep everything for themselves. This much money to be kept in the central sector is thoroughly wrong. Sometimes the Secretaries and other heads of Departments have to come from Delhi. For instance in Hebbal there is a jersy farm and a poultry farm. Somebody from Delhi just comes to see whether the birds are living or dead; whether the cows are giving milk or not· This is where our quarrel lies with tbe Centre, I don't blame Mr. Morarji Bhai or anybody else.

ಶ್ರೀ ಮಳ್ಳೂರು ಆನಂದರಾವ್.—ಎರಡು ವರ್ಷದ ಕೆಳಗೆ ಯಾವ ನೀತಿಯನ್ನು ಅನುಸರಿಸುತ್ತಿದ್ದರು? ಆಗ ನಿಮಗೆ ಸ್ವರ ಎತ್ತುವುದಕ್ಕೆ ಆಗುತ್ತಿತ್ತೆ? ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರದ ನೀತಿಯ ವಿರುದ್ಧವಾಗಿ ನಿಮಗೆ ಸ್ವರ ಎತ್ತುವುದಕ್ಕೆ ಆಗುತ್ತಿತ್ತೆ ಸ್ವಾಮಿ? ಆಗ ನೀವು ಏತಕ್ಕೆ ಕೇಳಲಿಲ್ಲ? ಅಥವಾ ಇದು ನಿಮಗೆ ಮುಂಚೆಯೇ ಹೊಳೆದಿರಲಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.- ನಿಮ್ಮನ್ನು ನೋಡಿದ ಮೇಲೆ ಹೊಳೆಯುತ್ತಿದೆ.

ಶ್ರೀ ಮಳ್ಳೂರು ಆನಂದರಾವ್.—ತಾವು ಇಷ್ಟೆಲ್ಲಾ ಹೇಳಿದಿರಲ್ಲಾ, ಹಾಲನ್ನು ಹಸು ಕೊಡುತ್ತಿದೆಯೋ ಇಲ್ಲವೋ ಎಂದು ನೋಡಬೇಕಾದರೆ ಡೆಲ್ಲಿಯಿಂದ ಅವರು ಬರಬೇಕಾಗುತ್ತದೆ ಹಾಗಂತ ಎಲ್ಲಾ ಹೇಳುತ್ತಿದ್ದೀರಲ್ಲಾ, ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವಿದ್ದಾಗಲೂ ಅದೇ ರೀತಿ ಇತ್ತು ಆಗ ನೀವು ಏತಕ್ಕೆ ಕೇಳಲಿಲ್ಲ ?

ಶ್ರೀ ಡಿ. ದೇವರಾಜ್ ಅರಸ್.—ಅದು ಹೇಳಿದನಲ್ಲಾ ನಿಮ್ಮನ್ನು ನೋಡಿದ ಮೇಲೆ ಶ್ರೀ ಮಳ್ಳೂರು ಆನಂದರಾಯರ ಮುಖ ನೋಡಿದ ಮೇಲೆ ಗೊತ್ತಾಗುತ್ತಿದೆಂತಾ...

ಶ್ರೀ ಮಳ್ಳೂರು ಆನಂದರಾವ್.—ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.– ಉತ್ತರ ಹೇಳಿದನಲ್ಲಾ. ಹಿಂದೆನೇ ಹಲವಾರು ಸಾರಿ ನಾನು ಎಂ.ಬಿ.ಸಿ. ಮೀಟಿಂಗ್‌ನಲ್ಲಿ ಒಂದಲ್ಲ ಎರಡು ಸಾರಿ ಹೇಳಿದ್ದೇನೆ. ಇದನ್ನು ನಾನು ೧೯೭೨ನೇ ಇಸ್ವಿಯಿಂದ ಹೇಳುವುದಕ್ಕೆ ಶುರು ಮಾಡಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ಈಗ ನಾವು ಬಂದ ಮೇಲೆ ನೀವು ಉತ್ತರ ದಕ್ಷಿಣ ಅಂತ ಶುರು ಮಾಡಿದ್ದೀರಿ, ಫೈನಾನ್ಸ್ ಅಸಿಸ್ಟೆನ್ಸ್ ಕೊಡುತ್ತಿಲ್ಲ ಎಂದು ಸ್ವರ ಎತ್ತುತ್ತಿದ್ದೀರಿ, ಆದರೆ ಹಿಂದೆ ಒಬ್ಬರೂ ಸ್ವರ ಎತ್ತುತ್ತಿರಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಡೋಲು ಬಾರಿಸಿದ ಹಾಗೆ ಕುಣಿಯುತ್ತಿದ್ದೀರಿ, ಒಬ್ಬರೂ ಆಗ ಸ್ವರವೇ ಎತ್ತುತ್ತಿರಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಆಗಲೂ ಹೇಳಿದ್ದೇನೆ. ನನ್ನ ಜೊತೆಯಲ್ಲಿ ಬನ್ನಿ ನಿಮ್ಮ ಜನತಾ ಗೌವರ್ನಮೆಂಟಿನಲ್ಲಿ ಇರುವ ಚೀಫ್ ಮಿನಿಸ್ಟರ್‌ರವರ ಕೈಯಲ್ಲಿಯೇ ಬಹಿರಂಗವಾಗಿ ಹೇಳಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಖಂಡಿತವಾಗಿಯೂ ನೀವು ಆ ಸಾಹಸವನ್ನು ಮಾಡಿದ್ದರೆ ಮೆಚ್ಚಿಕೊಳ್ಳುತ್ತಿದ್ದೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೊಗಳಿ, ಮೆಚ್ಚಿ ಬಹುಮಾನ ಕೊಡುವುದು ಏನೂ ಬೇಡ ಬಿಡಿ. ಇದಾದಮೇಲೆ ಕೋ ಆಪರೇಷನ್ ಬಗ್ಗೆ ಹೇಳುವುದಾದರೆ. ೧೯೭೮–೭೯ ರಿಂದ ೧೯೮೨–೮೩ ವರೆಗೆ ಈ ೫ ವರ್ಷಗಳಲ್ಲಿ ಏನು ಖರ್ಚು ಮಾಡಬೇಕೆಂದು ಪ್ಲಾನ್ ಹಾಕಿಕೊಂಡಿದ್ದೇವೆಂದು ಹೇಳುವುದಾದರೆ, ೨೫೦೦ ಕೋಟಿ ರೂಪಾಯಿಗಳ ಅಂದಾಜನ್ನು ಹಾಕಿಕೊಂಡಿದ್ದೇವೆ. ಅದರ ಬ್ರೇಕ್ ಅಪ್ ತಮಗೆ ಕೊಡುತ್ತಿದ್ದೇನೆ, ಕೋ ಆಪರೇಷನ್ನಿಗೆ ೭೦ ಕೋಟಿ, ಇರಿಗೇಷನ್ ಮೈನರ್ ಮತ್ತು ಮೇಜರ್ ಎರಡಕ್ಕೂ ಸೇರಿಸಿ ೬೦೫ ಕೋಟಿ, ಪವರ್ ಜನರೇಷನ್‌ಗೆ ೪೧೭ ಕೋಟಿ ಪವರ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್‌ಗೆ ೨೫೮ ಕೋಟಿ. ವಿಲೇಜ್ ಅಂಡ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ೪೧ ಕೋಟಿ ಮತ್ತು ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ೬೫ ಕೋಟಿ, ರೋಡ್ ಟ್ರಾನ್ಸ್‌ಪೋರ್ಟ್‌ಗೆ ೭೫ ಕೋಟಿ, ಜನರಲ್ ಎಜುಕೇಷನ್ನಿಗೆ ೬೯ ಕೋಟಿ, ಟೆಕ್ನಿಕಲ್ ಎಜುಕೇಷನ್ನಿಗೆ ೧೦ ಕೋಟಿ ಹೆಲ್ತ್‌ಗೆ ೪೨ ಕೋಟಿ ಸೂಯರೇಜ್ ಅಂಡ್ ವಾಟರ್ ಸಪ್ಲೈಗೆ ೪೩ ಕೋಟಿ, ಹೌಸಿಂಗ್‌ಗೆ ೧೧೪ ಕೋಟಿ. ವೆಲ್‌ಫೇರ್ ಆಫ್ ಎಸ್.ಸಿ. ಅಂಡ್ ಎಸ್.ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ೪೬ ಕೋಟಿ ಇದು ೧೮ ಪರ್ಸೆಂಟ್ ರಿಜರ್ವೇಷನ್ ಏನಿದೆ ಅದು ಅಲ್ಲದೇನೇ ಇಷ್ಟು ಇಟ್ಟಿದ್ದೇನೆ. ಒಟ್ಟು ೨೫೦೦ ರೂಪಾಯಿಗಳನ್ನು ೧೯೭೮–೮೩ ರಷ್ಟು ಹೊತ್ತಿಗೆ ಖರ್ಚು ಮಾಡಬೇಕೆಂದಿರುವುದು. ಇನ್ನು ಕೆಲವು ಕ್ರಿಟಿಸಿಜಂ ಬಂತು, ಏನೆಂದರೆ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ದುಡ್ಡು ಕಡಿಮೆ ಕೊಡುತ್ತಿದ್ದೀರಿ ಎನ್ನುವ ಮಾತನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದು ನನಗೆ ಜ್ಞಾಪಕವಿದೆ. ಆದರೆ ಅವರು ಹೇಳಿದ್ದು ಸರಿಯಲ್ಲವೆನ್ನುವುದಕ್ಕೆ ನಾನು ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಬಹುಶಃ ಅವರು ಅದನ್ನು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಈಗಾಗಲೇ ೧.೧೦ ಘಂಟೆಯಾಗುತ್ತಾ ಬಂದಿದೆ. ಇನ್ನು ಎಷ್ಟು ಹೊತ್ತು ನಾವು ಕುಳಿತುಕೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳವರು ಇನ್ನು ಒಂದು ಗಂಟೆ ತೆಗೆದುಕೊಂಡರೂ ಕೇಳುವುದಕ್ಕೇನೋ ಬಹಳ ಆನಂದವಾಗಿದೆ. ಅವರ ಭಾಷಣವಾದ ಮೇಲೆ ಬಿಲ್ ಬೇರೆ ಇದೆ.

ಅಧ್ಯಕ್ಷರು.—ಅದನ್ನೆಲ್ಲಾ ಆಗಲೇ ಆಲೋಚನೆ ಮಾಡಲಾಗಿದೆ. ಇನ್ನೇನು ಅವರ ಭಾಷಣವನ್ನು ಮುಗಿಸಿ ಬಿಡುತ್ತಾರೆ. ಅದು ಪುನಃ ಕೌನ್ಸಿಲ್‌ನ ಒಪ್ಪಿಗೆಗೆ ಹೋಗ ಬೇಕಾಗಿರುವುದರಿಂದ ಈಗಲೇ ಮುಗಿಸಿ ಬಿಡೋಣ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ಇಲ್ಲಿರುವ ಅನೇಕ ಮಾನ್ಯ ಸದಸ್ಯರುಗಳಿಗೆ ಮನೆ ಇಲ್ಲ, ಹೊರಗಡೆಯಿಂದ ಬಂದಿರುವವರಿಗೆ ಹೋಟಲೇ ಗಟ್ಟಿ. ಲೇಟ್ ಆಗಿ ಹೋಟೆಲ್‌ಗೆ ಹೋದರೆ ಊಟ ಸಿಕ್ಕುವುದಿಲ್ಲ. ಲೇಟ್ ಆದರೆ ಮಾನ್ಯ ಮುಖ್ಯಮಂತ್ರಿಗಳವರೇ ಏನಾದರೂ ಊಟದ ಏರ್ಪಾಡು ಮಾಡುತ್ತಾರೋ ಹೇಗೆ?

ಶ್ರೀ ಡಿ. ದೇವರಾಜ ಅರಸ್.—ಏನು ಬೇಕಾದರೂ ಮಾಡಿಸೋಣ. ಸೋಶಿಯಲ್ ವೆಲ್‌ಫೇರ್ ಕಾರ್ಯಕ್ರಮಗಳಿಗಾಗಿ ನಾವು ಯಾವ ರೀತಿ ಖರ್ಚು ಮಾಡಿದ್ದೇವೆನ್ನುವುದು ತಮಗೆ ಹೇಳುವುದಾದರೆ, ಅದರಲ್ಲಿ ನಾನ್ ಪ್ಲಾನ್ ಔಟ್‌ಲೇ ಮತ್ತು ಪ್ಲಾನ್ ಔಟ್‌ಲೇ ಏನಿದೆ ಅದನ್ನೆಲ್ಲಾ ಸೇರಿಸಿ ಹೇಳುತ್ತಿದ್ದೇನೆ. ೧೯೭೨ ರಿಂದ ೧೯೭೭ರ ವರೆಗೆ ೫ ವರ್ಷಗಳಲ್ಲಿ ಸೋಷಿಯಲ್ ವೆಲ್‌ಫೇರ್ ಮೆಷರ್ಸ್ ಔಟ್‌ಲೇ ೨೪೧ ಕೋಟಿ ರೂಪಾಯಿಗಳಾಗಿದೆ. ಇದರಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಸೇರಿಸಿಲ್ಲ ಇದಕ್ಕೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಸೇರಿಸಿಬಿಟ್ಟರೆ ೮೧೨ ಕೋಟಿ ರೂಪಾಯಿಗಳಾಗುತ್ತದೆ, ೧೯೭೭–೭೮ನೇ ಇಸವಿಗೆ ಒಂದು ವರ್ಷಕ್ಕೆ ೫೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವರ್ಷ ೧೯೭೮–೭೯ಕ್ಕೆ ೬೯ ಕೋಟಿ ರೂಪಾಯಿಗಳನ್ನು ಒದಗಿಸಿದೆ. ಇದರಲ್ಲಿ ಎಜುಕೇಷನ್, ವಾಟರ್‌ಸಪ್ಲೈ, ನ್ಯೂಟ್ರಿಷನ್ ಪ್ರೋಗ್ರಾಂ, ಪೆನ್‌ಷನ್ ಸ್ಕಾಲರ್‌ಷಿಪ್ ಇವೆಲ್ಲಾ ಬರುತ್ತದೆ. ಇವೆಲ್ಲಾ ಸೋಷಿಯಲ್ ವೆಲ್‌ಫೇರ್ ಮೆಷರ್ಸ್ ಆಗಿದೆ. ಆದ್ದರಿಂದ ತಾವು ಈ ಸೋಷಿಯಲ್ ವೆಲ್‌ಫೇರ್ ಮೆಷರ್ಸ್‌ಗೆ ಏನೂ ಗಮನ ಕೊಟ್ಟಿಲ್ಲ ಎಂದು ಹೇಳಿದ್ದೀರಿ ಅದು ಸರಿಯಲ್ಲ. ಇಷ್ಟೆಲ್ಲಾ ಇರಿಗೇಷನ್, ಪವರ್ ಮುಂತಾದವಕ್ಕೆ ಹಣವನ್ನು ಒದಗಿಸುವುದರ

ಜೊತೆಗೆ ಇದಕ್ಕೂ ಹಣವನ್ನು ಒದಗಿಸುತ್ತಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಕೆರೆ ಕಟ್ಟುವುದರ ಬಗ್ಗೆ, ಬ್ರಿಡ್ಜ್ ಕಟ್ಟುವುದರ ಬಗ್ಗೆ, ಹಾರ್ಟಿಕಲ್ಚರ್ ಬಗ್ಗೆ ೩೨ ಜನ ಮಾನ್ಯಸದಸ್ಯರು ನಾನಾ ವಿಷಯಗಳನ್ನು ಹೇಳಿದ್ದಾರೆ. ಅವೆಲ್ಲಕ್ಕೂ ಉತ್ತರ ಕೊಡಬೇಕೆಂದರೆ ಇಲ್ಲಿ ಸಾಧ್ಯವಾಗುವುದಿಲ್ಲ ಮಾನ್ಯಸದಸ್ಯರುಸಹ ಇದನ್ನು ಒಪ್ಪುತ್ತಾರೆ ಕೆಲವು ಜನ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಲೋಕಲ್ ಆಗಿ ಪಿಕ್‌ಅಪ್ ಮಾಡಬೇಕು ಎಂದು ಹೇಳಿದ್ದಾರೆ ಮತ್ತೆ ನಮ್ಮ ಪೋಲೀಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಹಾಗೆ ಪೋಲೀಸ್ ಸ್ಟೇಷನ್‌ನಲ್ಲಿ ಇಷ್ಟಿಷ್ಟು ವಿಲೇಜ್‌ಗಳನ್ನು ಅಟಾಚ್ ಮಾಡಬೇಕು ಎಂದು ಹೇಳಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರು ಪೋಲೀಸರು ಸರಿಯಾಗಿ ಲಾ ಅಂಡ್ ಆರ್ಡರ್ ಮೈನ್‌ಟೇನ್ ಮಾಡುತ್ತಾ ಇಲ್ಲ ಎಂದು ಹೇಳಿದ್ದಾರೆ. ಈ ಪೋಲೀಸರ ಬಗ್ಗೆ ಹೇಳುವಾಗ ಒಂದು ಮಾತಿನಲ್ಲಿ ಹೇಳಿ ಮುಗಿಸಬೇಕಾಗುತ್ತದೆ, ಏಕೆಂದರೆ ಪ್ರತಿಯೊಂದು ಡೀಟೈಲ್ಸ್ ಕೊಡುವುದಕ್ಕೆ ಹೊರಟರೆ ವೇಳೆಯಾಗುತ್ತದೆ. ಲೋಕಲ್ ಪ್ರಾಬ್ಲಂಸ್ ಬಗ್ಗೆ ಮಾನ್ಯ ಚೌಡೇಗೌಡರು ಹೇಳಿದ್ದಾರೆ ನಾನು ನಿನ್ನೆ ದಿವಸವೇ ಅದನ್ನು ಪರಿಹಾರ ಮಾಡುವುದರಲ್ಲಿ ಯಾವ ಸಮಸ್ಯೆಗಳೂ ಇಲ್ಲ ಎಂದು ಹೇಳಿದ್ದೇನೆ ಆಮೇಲೆ ಕೆರೆಗಳ ಪಿಕ್‌ಅಫ್ ಬಗ್ಗೆ ಇಲ್ಲಿ ನಾನು ಹೇಳಲಿಲ್ಲ ಎಂದರೆ ಅದನ್ನು ನಾನು ಮರೆತುಬಿಟ್ಟಿದ್ದೇನೆ ಎಂದು ಯಾರೂ ತಿಳಿಯಬಾರದು. ೩೨ ಜನ ಮಾನ್ಯ ಸದಸ್ಯರು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಅಂದರೆ ಬೇರೆಯವರು ಏನೂ ಹೇಳಲಿಲ್ಲ ಎಂದು ಅಲ್ಲ, ಅವರೂ ಹೇಳಿದ್ದಾರೆ, ಅವರ ಬಗ್ಗೆ ಕೂಡ ಏನು ಮಾಡಬೇಕು ಎಂದರೆ

I want to assure this House that all the suggestions will certainly be looked into. Each one of them will be looked into and appopriate action will be taken. And such of those Members who have had no opportunity of speaking, their local points regarding roads, bridges, pumpsets etc., can also write to me which will be attended to, It doesn't mean simply because they have not said anything, they would be neglected. If they have got any particular scheme or thtng to be done–whether he belong to ruling or opposition parties–they can write to me and I will see that every letter is attended to.

One thing I could say here. I have a feeling that we can complete most of the works except some major and medium irrigation projects within five years. Major projects may take more period. Ordinary works like roads, bridges etc., could be easily attended within five years. I am even thinking of getting a plan prepared for each Taluk so that we may be able to know how many roads, bridges and tanks etc., could be achieved by the end of five years, With the result, every Member also will be in a position to know and tell his constituency people about the works to be taken up during that period. in that way, this is my broad idea to work irrespective of this party or that party–whether it is your constituency or my constituency. People are belonging to the same poorer sections of the society. Whatever class they belong, let us do the work which benifit the poor people. Let us take in that way.

Another point which I want to make before closing is about unemployment. This is a very vexed question a very very big problem in the country. I am fully aware that the Janata party Government has given a programme of 10 years to solve this un-employment problem, they have also included in their manifesto. Anyway, what-

ever may be the views of Janata Party leaders, I have my own doubts. It is very difficult to achieve this target. Let us hope and try to solve. Whether it is possible or not–I don't want to elaborate. We also join to achieve this target and solve this un-employment problem in a period of 10 years. Now what we have proposed in our State is that we have projected a scheme in which about 10 lakh persons would be the target in rural areas in 78-79. About 9.5 lakhs would be continued to be employed and another 0.5 lakh new people will be employee. We have picked up 85-90 blocks. I think it is also a Government of India scheme in which we are also participating. In the current year we want to see that labourers are given the guarantee of employment at least for 100 days in a year. Without labour they may suffer. And the other scheme is going to be implemented this year *viz.* all those graduates, diploma holder and post graduates would be given temporarily stipend of Rs. 150 per month and they would be employed in adult literacy compaign, rural reconstruction services and other house construction activities. But this is on two conditions viz. (1) their income should not be more than Rs. 3600 per annum and (2) there should be no earning member. This is irrespective of caste or creed. Then for school going children scholarship. That is also without any caste or creed basis. About the other scheme which has got the imagination of the people–particularly the student community. What we have proposed is, we want to give scholarships from primary school onwards upto the College level to all the boys of any caste whose income limit is upto Rs. 4,800 and less in the case of forward communities and in the case of only certain backward classes, it is upto Rs. 10,000

ಶ್ರೀ ಟಿ. ಆರ್.ಶಾಮಣ್ಣ.–ಟೀಚರ್ಸ್, ಮಕ್ಕಳಿಗೆ ಇಲ್ಲ ಎಂಬುದಾಗಿ ಹೇಳಿದ್ದಾರೆ ಇದರಿಂದ ಬಹಳ ಕಷ್ಟವಾಗಿದೆ.

SRI D. DEVARAJ URS.—I don't know whether teacher come under this bracket of Rs. 4,800.

ಶ್ರೀ ಟಿ. ಆರ್. ಶಾಮಣ್ಣ.—ಮತ್ತೆ ಪೆನ್‌ಷನರ್ಸ್‌ಗೂ ಕೂಡ ಇಲ್ಲ ಎಂಬುದಾಗಿ ಹೇಳಿದ್ದಾರೆ ;

